AIRĀVATA

BY

Kumāra-Vyāsa

Edited by

Vidyāratna R. S. Panchamukhi, M. A.
Director of Kannada Research,
KANNADA RESEARCH INSTITUTE, DHARWAR

★

ಕುಮಾರವ್ಯಾಸ ವಿರಚಿತ

ಐರಾವತ

ಸಂಪಾದಕರು

ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.
ಡಾಯರೆಕ್ಟರ, ಕನ್ನಡ ಸಂಶೋಧನ ಸಂಸ್ಥೆ,
ಧಾರವಾಡ

KANNADA RESEARCH INSTITUTE, DHARWAR
1949

AIRĀVATA

BY

Kumāra-Vyāsa

Edited by

Vidyāratna R. S. Panchamukhi, M. A.

Director of Kannada Research,

KANNADA RESEARCH INSTITUTE, DHARWAR

★

ಕುಮಾರವ್ಯಾಸ ವಿರಚಿತ

ಐರಾವತ

ಸಂಪಾದಕರು

ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.

ಡಾಯರೆಕ್ಟರ, ಕನ್ನಡ ಸಂಶೋಧನ ಸಂಸ್ಥೆ,

ಧಾರವಾಡ

KANNADA RESEARCH INSTITUTE, DHARWAR

1949

ಪ್ರಕಾಶಕರು ;
ಶ್ರೀ. ಆರ್. ಎಸ್. ಪಂಚಮುಖಿ, ಎಂ. ಎ.
ಡೈರೆಕ್ಟರ್ ಅಫ್ ಕನ್ನಡ ರಿಸರ್ಚ ಮತ್ತು
ಸೆಕ್ರೆಟರಿ, ಕನ್ನಡ ರಿಸರ್ಚ ಬೋರ್ಡ, ಧಾರವಾಡ.

ಬೆಲೆ : ರೂ. ೧-೮-೦.

ಮುದ್ರಕರು :
ಶ್ರೀ. ಎಮ್. ಜಿ. ಪಾಲೇಕರ,
ವಸಂತ ಮುದ್ರಣಾಲಯ, ಧಾರವಾಡ.

ಐರಾವತ

ವಿಷಯ ಸೂಚಿಕೆ

ವಿಷಯ | ಪುಟ

೪ನೆಯ ಸಂಧಿ

೫ ನೆಯ ಸಂಧಿ

೬ ನೆಯ ಸಂಧಿ

ವಿಷಯ ಪುಟ

ಉಪೋದ್ಘಾತ

ಕುಮಾರವ್ಯಾಸನು ಕರ್ಣಾಟಕ ಮಹಾಭಾರತವನ್ನಲ್ಲದೆ ಐರಾವತವೆಂಬ ಪ್ರಬಂಧವನ್ನೂ ರಚಿಸಿದ್ದನೆಂದು ಪ್ರತೀತಿಯಿದೆ. “ಇದರಲ್ಲಿ ೮ ಸಂಧಿಗಳೂ ೪೪೧ ಪದ್ಯಗಳೂ ಇವೆ. ಗ್ರಂಥಾಂತ್ಯದಲ್ಲಿ ಗದುಗಿನ ವೀರನಾರಾಯಣ ಎಂಬ ಅಂಕಿತವಿದೆ. ಮುದ್ರಿತವಾದ ಭಾರತದಲ್ಲಿ ಈ ಸಂಧಿಗಳಿಲ್ಲ.” ಎಂದು ಆರ್. ನರಸಿಂಹಾಚಾರ್ಯರು ತಮ್ಮ ಕರ್ಣಾಟಕ ಕವಿಚರಿತೆ, ಸಂಪುಟ ೨ ಪುಟ ೬೮ ರಲ್ಲಿ ಬರೆದಿದ್ದಾರೆ. ಈಗ ಪ್ರಸಿದ್ಧವಾದ ಕರ್ಣಾಟಕ ಮಹಾಭಾರತದ ಆದಿಪರ್ವದ ಸಂಭವ ಪರ್ವದಲ್ಲಿ ಐರಾವತವೆಂಬ ಪ್ರಕರಣವು ಸೇರಿದೆ. ಅಲ್ಲಿ ಇದು ೨೦ ನೆಯ ಸಂಧಿಯಾಗಿದ್ದು ೧೪೪ ಪದ್ಯಗಳನ್ನೊಳಗೊಂಡಿದೆ. ಆದರೆ ಕುಮಾರವ್ಯಾಸನಿಂದ ರಚಿಸಲ್ಪಟ್ಟ ಐರಾವತವೆಂಬ ಗ್ರಂಥವು ಅವನ ಮಹಾಭಾರತದಿಂದ ಭಿನ್ನ ಪ್ರಬಂಧವಾಗಿರಬೇಕೆಂದು ಮೇಲಿನ ವಿಧಾನದಿಂದ ತಿಳಿಯಬರುವುದರಿಂದ ಅದರಲ್ಲಿ ಒಂದು ಸಂಧಿಯಾದ ಐರಾವತವು ಈ ಅಭಿಪ್ರೇತ ಐರಾವತಗ್ರಂಥವಲ್ಲವೆಂದು ಸ್ಪಷ್ಟವಾಗುತ್ತದೆ. ಇದುವರೆಗೆ ಈ ಗ್ರಂಥವು ಉಪಲಬ್ಧವಿದ್ದಿಲ್ಲ. ಕನ್ನಡ ಸಂಶೋಧನ ಸಂಸ್ಥೆಯ ಲಿಖಿತಗ್ರಂಥಗಳ ಸಂಗ್ರಹದಲ್ಲಿ ಐರಾವತವೆಂಬ ಹೆಸರಿನ ೮ ಸಂಧಿಗಳುಳ್ಳ ಪ್ರತ್ಯೇಕ ಗ್ರಂಥವು ದೊರೆತಿದೆ. ಅದನ್ನು ಉಪಲಬ್ಧವಾದ ಬೇರೆ ಕೈಬರೆಹದ ಪ್ರತಿಗಳ ಸಹಾಯದಿಂದ ವಿಮರ್ಶಿಸಿ ಪ್ರಚಲಿತ ಪಾಠಕ್ರಮದಿಂದ ಇಲ್ಲಿ ಪರಿಷ್ಕರಿಸಿ ಮುದ್ರಿಸಿದೆ. ಐರಾವತ ಕಥೆಯನ್ನು ಹೇಳುವ ಕೆಳಗಿನ ಗ್ರಂಥಗಳು ಈ ಪರಿಷ್ಕರಣದಲ್ಲಿ ಉಪಯೋಗಿಸಲಟ್ಟಿವೆ. ಅವು ಈ ಸಂಸ್ಥೆಯ ಹಸ್ತಲಿಖಿತ ಗ್ರಂಥಸಂಗ್ರಹಾಲಯದಲ್ಲಿ ಅಂಕಿಸಲ್ಪಟ್ಟಿವೆ. ಅವುಗಳ ವಿವರವು ಕೆಳಗಿನಂತಿದೆ.

೧. ಗುಳೇದಗುಡ್ಡದ ದೇವಾಂಗಮಠದ ಹಳೆಯ ಪುಸ್ತಕ. ಶ್ರೀ. ಬಿ. ಎಸ್. ಪಂಚಮುಖಿ, ವಕೀಲ, ಬಾಗಲಕೋಟೆ ಇವರಿಂದ ದೊರೆತದ್ದು. ಅಸಮಗ್ರ ಕಾಗದಪ್ರತಿ. ನಡುನಡುವೆ ಪತ್ರಗಳು ಲುಪ್ತವಾಗಿವೆ. ಕಡೆಯ ಪದ್ಯಸಂಖ್ಯೆ ೧೬೯. ಒಟ್ಟು ಪತ್ರಸಂಖ್ಯೆ ೧–೨೬. ಅವುಗಳಲ್ಲಿ ಈ ಪತ್ರಗಳು ಇಲ್ಲ, : ೫, ೬, ೭, ೯, ೧೪–೨೧, ೨೩, ೨೫. ಆರಂಭದಲ್ಲಿ “ಶ್ರೀರಾಮಾಯ ನಮಃ” ಐರಾವತದ ಪುಸ್ತಕ ಬರೆವುದಕ್ಕೆ ಶುಭಮಸ್ತು ॥ ಸೂ. ಇಂದ್ರನೈರಾವತವ ....’ ಕಡೆಗೆ.... ‘ಶ್ರೀಗುರು। ದಾತ ನಮಗುಂಟೆಂದು ಗದುಗಿನ ವೀರನಾರಾಯಣಾ॥೧೬೯॥’ ಎಂದಿದೆ.

ಇದರಲ್ಲಿ ಸಂಧಿವಿಭಾಗವಿಲ್ಲ. ಅಚ್ಚಾದ ಮಹಾಭಾರತದ ಆದಿಪರ್ವದ ೨೦ ನೆಯ ಸಂಧಿಯಲ್ಲಿ ಬಂದ ಕ್ರಮವೇ ಇಲ್ಲಿ ಇದೆ. ಆದರೆ ಪದ್ಯಗಳ ಪೌರ್ವಾಪರ್ಯದಲ್ಲಿಯೂ ಸಂಖ್ಯೆಯಲ್ಲಿಯೂ ಬಹಳ ವ್ಯತ್ಯಾಸವುಂಟು.

೨. ಕರ್ಣಾಟಕ ಮಹಾಭಾರತದ ಸಮಗ್ರ ಕೈಬರೆಹದ ಕಾಗದಪ್ರತಿ. ಹತ್ತು ಪರ್ವಗಳಲ್ಲದೆ ಐಸಿಕ್ಯ ಮತ್ತು ಐರಾವತ ಪರ್ವಗಳು ಇದರಲ್ಲಿ ಸೇರಿವೆ. ಶ್ರೀ. ಸಾ. ಸು. ರಾಜಪುರೋಹಿತರು ಹಾನಗಲ್ಲಿನಲ್ಲಿ ದೊರಕಿಸಿ ತಂದದ್ದು.

ಈಪ್ರತಿಯ ಆದಿಪರ್ವದ ೨೪ ನೆಯ ಸಂಧಿಯಲ್ಲಿ ಈ ಕಥೆಯು ವರ್ಣಿಸಲ್ಪಟ್ಟದೆ. ಅದರ ಪದ್ಯ ಸಂಖ್ಯೆ ೧೯೧ ಎಂದು ಬರೆದಿದೆ. ಆದರೆ ಲೇಖಕನು ಪ್ರಮಾದದಿಂದ ೧೨೯ ರನಂತರ ೧೪೫ ನ್ನು ಬರೆದದ್ದರಿಂದ ೨೨ ಅಂಕಗಳು ಹೆಚ್ಚಿಗೆ ಬಿದ್ದಂತಾಯಿತು. ಈ ಪ್ರತಿಯಲ್ಲಿಯೂ ಒಟ್ಟು ಪದ್ಯಸಂಖ್ಯೆ ೧೬೯ ಎಂದು ಸ್ಪಷ್ಟವಾಗುವದು. ಇದರಲ್ಲಿಯೂ ಅವಾಂತರ ಸಂಧಿಭೇದಗಳಿಲ್ಲ. ಆರಂಭದಲ್ಲಿ ೪ ಪೀಠಿಕಾ ಪದಗಳನ್ನು ಕೊಟ್ಟು 'ಸೂಚನೆ ‖ ಇಂದ್ರನೈರಾವತವ....'ಎಂದುಬರೆದಿದೆ. ಕೊನೆಯಲ್ಲಿ '........ ಪಾರ್ಥನ । ಮಾತಿಗೊಲಿದನು ದೇವ ಗದುಗಿನ ವೀರನಾರಾಯಣಾ ‖ ೧೯೧ (೧೬೯) ‖ ಇಂತೀ ಶ್ರೀ ಮಹಾಭಾರತೇ ಶತಸಹಸ್ರಸಂಹಿತಾಯಾಂ ಶ್ರೀ ಆದಿಪರ್ವಣಿ ಗಾಂಧಾರೀ ಮೃತ್ತಿಕಾ ಐರಾವತ ಪೂಜಾನಂ । ಅರ್ಜುನ ಪ್ರತಾಪಂ । ಐರಾವತ ಕುಂತೀದೇವೀ ಪ್ರತಾನಂ ‖ ಶ್ರೀಕೃಷ್ಣ ಪೂಜಾನುಂ । ಇಂತು ಸಂಧಿ ೨೪ ಕ್ಕಂ ಮಂಗಳ ಮಹಾ ಶ್ರೀ. ಶ್ರೀ. ಶ್ರೀ. ಶ್ರೀ ಲಕ್ಷ್ಮೀವೆಂಕಟೇಶಾಯ ನಮಃ ಗುರುಭ್ಯೋ ನಮಃ ‖ " ಎಂದಿದೆ.

೩. ರೋಣ ತಾಲೂಕು ನರೇಗಲ್‌ದ ಹಿರೇಮಠದ ಶ್ರೀಚರಮೂರ್ತಿಸ್ವಾಮಿಗಳಿಂದ ದೊರಕಿಸಿದ ಸಮಗ್ರಪ್ರತಿ. ಕೋರೀಕಾಗದ ಪತ್ರಸಂಖ್ಯೆ ೪೪. ಆರಂಭದಲ್ಲಿ " ಶ್ರೀಗುರುಭ್ಯೋ ನಮಃ .... ‖ ಶಾಂತಿರಸ್ತು ‖ ಇಂದ್ರನೈರಾವತವ........ " ಎಂದು ಬರೆದಿದೆ. ಕೊನೆಯಲ್ಲಿ " ಅಂತು ಸಂಧಿ ಲಕ್ಕ ಪದನು ‖ ೩೬೫ ‖ ಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶಕ ‖ ೧೬೫೨ ‖ ವಿರೋಧಿಕೃತುನಾಮಸಂವತ್ಸರ ಆಷಾಢ ಶುದ್ಧ ೧೫ ಇಂದುವಾರ ದ್ವಿತೀಯ ಪ್ರಹರದಲ್ಲಿ ಮುಗಿದದ್ದು ‖......" ಎಂದು ಬರೆದಿದೆ. ಕಡೆಯ ಸಂಧಿಯಲ್ಲಿ ೮೨ ಪದ್ಯಗಳಿದ್ದು ೮೦ ನೆಯ ಪದ್ಯದಲ್ಲಿ ‖ ವೀರನಾರಾಯಣನ ಕರುಣದ । ವಾರಿಧಿಯಲೋಲಾಡಿ ಬಹುದಿಂ । ಹರುಷದಲಿ ಹೇಳಿದನು ಮುನಿವರನಾಥನೊಲವಿನಲಿ ‖ ೮೦ ‖ ಎಂದು ವೀರನಾರಾಯಣನ ಅಂಕಿತವಿದೆ.

ಅದೇ ಸಂಧಿಯ ೬೭ ನೆಯ ಪದ್ಯದಲ್ಲಿ " ಮಾತುಗಳು ಹಲವ್ಯಾತಕೆಂಮಯ । ದಾತನಂಬುಜಾಕ್ಷನಿಹಪರ। ಗತಿವಂವ ಕೊಡುತಿಹನು ಗದುಗಿನ ವೀರನಾರಾಯಣಃ‖ ಎಂದು ಗದುಗಿನ ವೀರನಾರಾಯಣನ ಉಲ್ಲೇಖವಿದೆ.

ಈ ಪ್ರತಿಯನ್ನೆ ಮೂಲವಾಗಿಟ್ಟುಕೊಂಡು ಪ್ರಕೃತ ಐರಾವತವನ್ನು ಮುದ್ರಿಸಲಾಗಿದೆ.

ಇಲ್ಲಿ ಕೊಡಲ್ಪಟ್ಟ ಪಾಠಗಳು ಮೇಲೆ ನಿರ್ದಿಷ್ಟವಾದ ಮೂರುಪ್ರತಿಗಳಿಂದ ತಯಾರಿಸಲ್ಪಟ್ಟಿವೆ. ಆ ಮೂರು ಪ್ರತಿಗಳಲ್ಲಿಯೂ ಬಳಕೆಯ ಮಾತಿನ ರೂಪಗಳು ಬೇರೆ ಬೇರೆಯಾಗಿ ಕಂಡುಬರುವದರಿಂದ ಈ ಗ್ರಂಥವು ಭಿನ್ನ ಭಿನ್ನ ದೇಶಭಾಗಗಳ ಜನತೆಯಲ್ಲಿ ಬಹು ಪ್ರಚಾರ ಹೊಂದಿರಬೇಕೆಂದು ಊಹಿಸಬಹುದು. ಪದ್ಯಗಳ ಕ್ರಮದಲ್ಲಿಯೂ ಪಾಠಗಳಲ್ಲಿಯೂ ಜನಸಾಮಾನ್ಯದ ಉಚ್ಚಾರಣೆಯ ಕುರುಹುಗಳೂ ಸಂಪ್ರದಾಯ ಭೇದವೂ ತೋರುತ್ತವೆ. ಕೆಲವು ಶಬ್ದಪ್ರಯೋಗಗಳು ವ್ಯಾಕರಣ ದೃಷ್ಟಿಯಿಂದ ಅಸಾಧುವಾಗಿದ್ದರೂ ಆಗಿನ ಬಳಕೆಯ ಮಾತಿನ ಸ್ವರೂಪವನ್ನು ತಿಳಿಸಿಕೊಡುವದರಿಂದ ಅವುಗಳನ್ನು ತಿದ್ದದೆ ಬಹುಶಃ ಹಾಗೇ ಇಟ್ಟಿದ್ದೇವೆ.

ಮೇಲೆ ಹೇಳಿದಂತೆ ಈ ಗ್ರಂಥದ ಪದ್ಯಸಂಖ್ಯೆ ೩೭೫. ೮ ಸಂಧಿಗಳಿರುವವು. ಆದಿಪರ್ವದ ೨೦ ನೆಯ ಸಂಧಿಯಲ್ಲಿ ಇದೇ ಕಥೆಯು ೧೪೪ ಪದ್ಯಗಳಲ್ಲಿ ಸಂಕ್ಷೇಪವಾಗಿ ಹೇಳಲ್ಪಟ್ಟಿದೆ. ಈ ಎಲ್ಲ ಪದ್ಯಗಳು ಪ್ರಕೃತಗ್ರಂಥದಲ್ಲಿ ಒಂದಿಲ್ಲೊಂದು ರೀತಿಯಿಂದ ಸೇರಿವೆ. ಕೆಲವೆಡೆಯಲ್ಲಿ ಪಾಠಗಳನ್ನೂ ಪ್ರಯೋಗಗಳನ್ನೂ ಬದಲಿಸಿ ಅಭಿಪ್ರಾಯದ ಏಕತೆಯನ್ನು ಕಾದುಕೊಂಡಂತೆ ತಿಳಿಯುವದು. ವೇದವ್ಯಾಸರ ಮೂಲಮಹಾಭಾರತದ ವಿಷಯವಾಗಿ ಬರೆಯುವಾಗ ದ್ವೈತಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮಧ್ವಾಚಾರ್ಯರು —

" ಕ್ವಚಿದ್ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ಕ್ವಚಿದನ್ಯಥಾ ॥

ಎಂದು ಹೇಳಿದ್ದಾರೆ. ಅದರಂತೆ ಈ ಕುಮಾರವ್ಯಾಸನ ಕರ್ಣಾಟಕ ಮಹಾಭಾರತದಲ್ಲಿಯೂ ಅನೇಕ ಪ್ರಕ್ಷೇಪಗಳೂ ವ್ಯತ್ಯಾಸಗಳೂ ಕಂಡು ಬರುತ್ತವೆ. ಮಹಾಭಾರತವು ಆರ್ಯ ಸಂಸ್ಕೃತಿಯ ಚರಿತ್ರವನ್ನು ಸೂಕ್ಷ್ಮವಾಗಿ ವಿವರಿಸುವದು. ಧರ್ಮಾಧರ್ಮಗಳಲ್ಲಿ ನಡೆದ ಯುದ್ಧದಲ್ಲಿ ಶ್ರೀಕೃಷ್ಣನ ಸಹಾಯದಿಂದ ಧರ್ಮಕ್ಕೆ ಜಯ ಬಂದುದರ ವಿವರವನ್ನು ಅದು ಮನದಟ್ಟಾಗಿ ಹೇಳುವದರಿಂದ ಆಸೇತು ಹಿಮಾಚಲದ ವರೆಗೆ ಅದರ ಪ್ರಚಾರವು ಸಿದ್ಧವಾಗಿದೆ. ಬಹುಜನ ಸಮಾಜದ ಕೈಯಲ್ಲಿ ಸಿಕ್ಕಿದ್ದರಿಂದ ಇದರಲ್ಲಿ ಕಾಲಕ್ರಮದಿಂದ ಪ್ರಕ್ಷೇಪ, ವಿಕ್ಷೇಪ, ವ್ಯತ್ಯಾಸಗಳು ಕಂಡುಬರುವದು ಸ್ವಾಭಾವಿಕವದೆ. ಇದೇ ಕಾರಣದಿಂದ ಕನ್ನಡದಲ್ಲಿ ಸಮಗ್ರ ಭಾರತದ ಕಥೆಯನ್ನು ನಿರೂಪಿಸುವ ಭಕ್ತಿಪ್ರಧಾನವಾದ ಗ್ರಂಥವು ಕುಮಾರವ್ಯಾಸನ ಮಹಾಭಾರತವಾದ್ದರಿಂದ ಅದು ಕನ್ನಡನಾಡಿನಲ್ಲಿ ಎಲ್ಲ ಜನರ ಬಾಯಲ್ಲಿ ಬಳಕೆಗೆ ಬಂದಿತು. ಇದರಿಂದ ಅಲ್ಲಿ ಪಾಠಭೇದಗಳೂ, ಕಥಾಭೇದಗಳೂ ಕಂಡು ಬರುತ್ತವೆ. ಇವುಗಳಲ್ಲಿ ಕುಮಾರವ್ಯಾಸನ ಮೂಲಪದ್ಯಗಳಾವುವು? ಹಿಂದೆ ಸೇರಿದವಾವುವು? ಎಂಬುದನ್ನು ನಿರ್ಧರಿಸುವದು ಸುಲಭವಲ್ಲ. ಪ್ರಕೃತಗ್ರಂಥದ

ಮತ್ತು ಮಹಾಭಾರತದ ಅಚ್ಚಾದ ಮೈಸೂರು ಪ್ರತಿಯ ಪಾಠಗಳಲ್ಲಿರುವ ವ್ಯತ್ಯಾಸವನ್ನು ನೋಡಿದರೆ ಈ ಮಾತಿನ ಸತ್ಯತೆಯು ಸ್ಪಷ್ಟವಾಗುತ್ತದೆ.

ಐರಾವತದ ಕರ್ತನು ಕುಮಾರವ್ಯಾಸನಿರಬೇಕೆಂದು ಮೇಲೆ ನಿರ್ದಿಷ್ಟವಾದ ಮೂರು ಹಸ್ತಲಿಖಿತ ಪ್ರತಿಗಳ ಕೊನೆಯಲ್ಲಿ ಬರುವ 'ಗದುಗಿನ ವೀರ ನಾರಾಯಣ' ಎಂಬ ಅಂಕಿತದಿಂದ ತಿಳಿಯುವಂತಿದೆ. ಇದಕ್ಕೆ ಕುಮಾರವ್ಯಾಸನು ಐರಾವತವೆಂಬ ಪ್ರತ್ಯೇಕ ಪ್ರಬಂಧವನ್ನು ರಚಿಸಿದ್ದನೆಂಬ ಪ್ರತೀತಿಯು ಬಲ ಕೊಡುತ್ತದೆ. ಇದಲ್ಲದೆ ಭಾಷೆ, ವಿಚಾರ, ಶೈಲಿ ಮತ್ತು ಶಬ್ದಸಂಗ್ರಹ ಇವೆಲ್ಲವುಗಳನ್ನು ಕರ್ಣಾಟಕ ಮಹಾಭಾರತದೊಂದಿಗೆ ಹೋಲಿಸಿ ನೋಡಿದರೆ ಐರಾವತದ ಕರ್ತನು ಕುಮಾರವ್ಯಾಸನೇ ಇರಬೇಕೆಂದು ಸ್ಪಷ್ಟವಾಗುತ್ತದೆ.

ಇನ್ನು ಆದಿಪರ್ವದ ೨೦ನೆಯ ಸಂಧಿಯಲ್ಲಿ ಸೇರಿದ ಐರಾವತ ಕಥೆಯನ್ನೇ ವಿಸ್ತಾರವಾಗಿ ಇಲ್ಲಿ ಹೇಳಿದ್ದರಿಂದ, ಒಂದೇ ಕಥೆಯನ್ನು ಎರಡು ಪ್ರಬಂಧಗಳಲ್ಲಿ ಹೇಳುವದು ಯುಕ್ತವಾಗಲಾರದಾದ್ದರಿಂದ ಕುಮಾರವ್ಯಾಸನ ಶೈಲಿಯಲ್ಲಿ ಆ ಸಂಕ್ಷಿಪ್ತ ಕಥೆಯನ್ನೇ ಯಾರೋ ಬೆಳಸಿ ಹೇಳಿದ್ದಾರೆಂದು ಸಂಶಯ ತಗೊಳ್ಳಲಿಕ್ಕೆ ಅವಕಾಶವುಂಟು. ಆದರೆ ಸಂಕ್ಷೇಪ-ವಿಸ್ತರಗಳಿಂದ ಒಂದೇ ವಿಷಯವನ್ನು ಭಿನ್ನ ಭಿನ್ನ ಗ್ರಂಥಗಳಲ್ಲಿ ಹೇಳುವದು ಸಂಸ್ಕೃತ ಸಾಹಿತ್ಯದಲ್ಲಿ ಮುಖ್ಯವಾಗಿ ವೇದಾಂತ-ತರ್ಕ-ಮೀಮಾಂಸಾದಿ ಗ್ರಂಥಗಳಲ್ಲಿ ವಾಡಿಕೆಯಾಗಿದೆ. ಅದರಂತೆ ಕುಮಾರವ್ಯಾಸನೇ ತನ್ನ ದೊಡ್ಡ ಮಹಾಭಾರತದಲ್ಲಿ ಸಂಕ್ಷೇಪವಾಗಿ ಹೇಳಿದ್ದನ್ನು ಐರಾವತದಲ್ಲಿ ವಿಸ್ತರಿಸಿರುವನೆನ್ನಬಹುದು. ಈ ವಿಸ್ತೃತ ಗ್ರಂಥದಲ್ಲಿ ಕೆಲ ಹೆಚ್ಚಿನ ವಿಷಯಗಳೂ ಸೇರಿಸಲ್ಪಟ್ಟಿವೆ. ಸಾಮಾನ್ಯವಾಗಿ ೧ನೆಯ ಸಂಧಿಯಲ್ಲಿ ಮೈಸೂರು ಪ್ರತಿಯ ೧–೭೫ ಪದ್ಯಗಳೂ ಆಮೇಲೆ ೫-೬ನೆಯ ಸಂಧಿಗಳಲ್ಲಿ ೭೩–೧೩೦ ಪದ್ಯಗಳೂ ೮ನೆಯ ಸಂಧಿಯಲ್ಲಿ ೧೨೧–೧೪೪ ಪದ್ಯಗಳೂ ಪಾಠ ಭೇದದಿಂದಲೂ ಕ್ರಮ ವ್ಯತ್ಯಾಸದಿಂದಲೂ ಬರುತ್ತವೆ. ೨, ೩, ೪, ಮತ್ತು ೭ನೆಯ ಸಂಧಿಗಳು ಪ್ರಾಯಃ ಸಂಪೂರ್ಣ ಹೊಸವಿರುತ್ತವೆ. ಇವುಗಳಲ್ಲಿ ಐರಾವತವನ್ನು ಅಲಂಕರಿಸಿದ್ದೂ ಅರ್ಜುನನ ಓಲಿಯನ್ನು ಮನ್ನಿಸಿ ಇಂದ್ರನು ಭೂಮಿಗೆ ಅದನ್ನು ಕಳಿಸಲಿಕ್ಕೆ ನಿಶ್ಚಯಿಸಿದ್ದೂ ಆಮೇಲೆ ಧರ್ಮರಾಜನು ಕುಂತಿಯ ವ್ರತಕ್ಕಾಗಿ ಕೌರವರಿಗೆ ಆಮಂತ್ರಣ ಕೊಟ್ಟದ್ದೂ ವರ್ಣಿಸಲ್ಪಟ್ಟಿವೆ. ಅರ್ಜುನನು ಶ್ರೀ ಕೃಷ್ಣನನ್ನು ಹಸ್ತಿನಾವತಿಗೆ ಈ ವ್ರತದಲ್ಲಿ ಅಗ್ರ ಪೂಜೆಗಾಗಿ ಕರೆದುಕೊಂಡು ಬಂದದ್ದೂ ಶ್ರೀ ಕೃಷ್ಣನನ್ನು ಮಧುಪರ್ಕಾದಿ ಪೂಜೆಗಳಿಂದ ಸತ್ಕರಿಸಿ ಸ್ತುತಿಸಿದ್ದೂ ಶ್ರೀಕೃಷ್ಣನೊಡಗೂಡಿ ಪಾಂಡವರು ಐರಾವತವನ್ನು ಇದಿರ್ಗೊಂಡದ್ದೂ– ಈ ಹೆಚ್ಚಿನ ವಿಷಯಗಳು ವರ್ಣಿಸಲ್ಪಟ್ಟಿವೆ. ಇವು ಸಂಕ್ಷಿಪ್ತ ಕಥೆಯಲ್ಲಿ ಒಂದೆರಡು ಪದ್ಯಗಳಲ್ಲಿ ಸಂಕೋಚವಾಗಿ ಹೇಳಲ್ಪಟ್ಟಿವೆ. ೮ ಸಂಧಿಗಳಲ್ಲಿ ಐರಾವತ ಕಥೆಯು ಕೇವಲ ಗಜಗೌರಿಯ ವ್ರತವನ್ನು ತಿಳಿಸುವ

ದಲ್ಲದೆ ಕೃಷ್ಣಭಕ್ತಿಯನ್ನು ಉದ್ರೇಕಿಸುವಂತೆ ಸನ್ನಿವೇಶಗಳು ವರ್ಣಿಸಲ್ಪಟ್ಟಿವೆ. ಆದ್ದರಿಂದ ಕರ್ಣಾಟಕ ಮಹಾಭಾರತದಲ್ಲಿ ಹೇಳಲ್ಪಟ್ಟ ಪ್ರಬಂಧವನ್ನೇ ಕುಮಾರ ವ್ಯಾಸನು ಪಠನಪಾಠನಕ್ಕೂ ಪಾರಾಯಣಕ್ಕೂ ಅನುಕೂಲವಾಗುವಂತೆ ಭಕ್ತಿಗ್ರಂಥ ವನ್ನಾಗಿ ಪರಿವರ್ತಿಸಿ ಬರೆದನೆಂದು ತಿಳಿಯಬಹುದು. ಗ್ರಂಥಾಂತ್ಯದಲ್ಲಿರುವ 'ಗದುಗಿನ ವೀರನಾರಾಯಣ' ಎಂಬ ಅಂಕಿತವೂ ಸಾರ್ಥಕವಾಗುತ್ತದೆ

ಕುಮಾರವ್ಯಾಸನು ಶ್ರೀಪುರಂದರದಾಸರ ಸಮಕಾಲಿಕನೆಂಬ ವಿಷಯದಲ್ಲಿ ದಾಸರು ಈ ಕವಿಯನ್ನು ಕಂಡು ಒಂದು ಪದವನ್ನು ರಚಿಸಿದರೆಂದು ಪ್ರತೀತಿ ಯಿದೆ. ಅದು ಪಾವಂಜೆ ಗುರುರಾಯರ ಉಡುಪಿ ಪ್ರತಿ–ಪುರಂದರದಾಸರ ಸುಳಾದಿಗಳು, ಪುಟ ೪೬ರಲ್ಲಿ ಪ್ರಕಟವಾಗಿದೆ. ಶ್ರೀಮಾನ್ ಗೋವಿಂದ ಪೈಯವರು ಕುಮಾರವ್ಯಾಸನು ೧೫ನೆಯ ಶತಮಾನದಲ್ಲಿ ಬಾಳಿದ್ದನೆಂದು ಅನೇಕ ಪ್ರಮಾಣಗಳನ್ನು ಕೊಟ್ಟು ನಿರ್ಧರಿಸಿದ್ದಾರೆ (ಕುಮಾರವ್ಯಾಸಪ್ರಶಸ್ತಿ, ಪುಟ೧-೨೧). ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆ ಸಂಪುಟ ೨, ಪುಟ ೬೫ ರಲ್ಲಿ ಚಾಮರಸ-ಕುಮಾರವ್ಯಾಸರು ವಿಜಯನಗರದ ಪ್ರೌಢದೇವರಾಯನ ಆಸ್ಥಾನದಲ್ಲಿ ಇದ್ದರೆಂದೂ ಕುಮಾರವ್ಯಾಸನು ಸು. ಕ್ರಿ.ಶ. ೧೪೩೦ರಲ್ಲಿ ಇದ್ದಿರಬಹುದೆಂದೂ ಹೇಳಿದ್ದಾರೆ. ಅಚ್ಯುತರಾಯನ ಶಕ ೧೪೬೧ರ ಒಂದು ಗದುಗಿನ ಲಿಪಿಯಲ್ಲಿ ಕುಮಾರವ್ಯಾಸನ ಉಲ್ಲೇಖವಿರುವದರಿಂದಲೂ ಕೃಷ್ಣದೇವರಾಯನು ತಿಮ್ಮಣ್ಣ ಕವಿಗೆ ಮುಂದಿನ ಪರ್ವಗಳನ್ನು ರಚಿಸಲು ಆಜ್ಞಾಪಿಸಿದ್ದರಿಂದಲೂ ಅವನ ಹಿಂದೆ ಸ್ವಲ್ಪ ಮುಂಚೆ ಕುಮಾರವ್ಯಾಸನು ಬಾಳಿರಬೇಕೆಂದು ಸಾಮಾನ್ಯವಾದ ತಿಳಿವಳಿಕೆ ಇದೆ. ಅಂದರೆ ಕುಮಾರವ್ಯಾಸನು ತುಳು ಮನೆತನದ ವೀರನರಸಿಂಹನ ಆಳಿಕೆ ಯಲ್ಲಿಯಾಗಲಿ ಕೃಷ್ಣದೇವರಾಯನ ಆಳ್ವಿಕೆಯ ಪೂರ್ವಭಾಗದಲ್ಲಿಯಾಗಲಿ ಇದ್ದಿ ರಬೇಕೆಂದು ತಿಳಿಯಬಹುದಾಗಿದೆ. ಈ ಊಹೆಗೆ ಕೋಳಿವಾಡದ ಸೇನಬೋವರ ಮನೆತನದಲ್ಲಿದ್ದ ಹಳೆಯ ಕರಡುಗಳು ಪುಷ್ಟಿ ಕೊಡುತ್ತವೆ. ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸುವದು ಇಲ್ಲಿ ಪ್ರಸ್ತುತವಲ್ಲವಾದ್ದರಿಂದ ಸಾಮಾನ್ಯವಾಗಿ ಕುಮಾರವ್ಯಾಸನ ಯುಗವು ಯಾವ ಲಕ್ಷಣಗಳಿಂದ ಲಕ್ಷಿತವಾಗಿತ್ತೆಂಬುದನ್ನು ಸೂಚಿಸುತ್ತೇವೆ.

ಪುರಂದರದಾಸರು ಕುಮಾರವ್ಯಾಸನ ಮೇಲೆ ಬರೆದ ಪದವು ನಂಬಲರ್ಹವಿದ್ದರೆ ಅವನ ಕಾಲವು ಸುಮಾರು ಕ್ರಿ. ಶ. ೧೫೦೦ ಎಂದು ನಿರ್ಧಾರವಾಗುತ್ತದೆ. ಅನ್ನ ಮಾಚಾರ್ಯರು ಪುರಂದರದಾಸರ ಕಾಲದಲ್ಲಿ ಇದ್ದರು. ಇವರ ಕಾಲವು ವಿಷ್ಣು ಭಕ್ತಿಯ ಪ್ರಸಾರದ ಕಾಲವು. ಜೈನ, ಬೌದ್ಧ, ಚಾರ್ವಾಕ, ಸಾಂಖ್ಯಾದಿ ದರ್ಶನಗಳ ಪ್ರಾಬಲ್ಯದಿಂದ ಹತಬಲವಾಗಿದ್ದ ವೈದಿಕಧರ್ಮವು ಉತ್ತರ ಹಿಂದು ಸ್ಥಾನದಲ್ಲಿ ಗುಪ್ತ ಅರಸರ ಆಳ್ವಿಕೆಯಲ್ಲಿಯೂ ದಕ್ಷಿಣದಲ್ಲಿ ಕದಂಬ, ಚಳುಕ್ಯರ

ಕಾಲದಲ್ಲಿಯೂ ತಲೆಯೆತ್ತಿ ಕಾಲಕಾಲಕ್ಕೆ ರಾಜರ ಮನ್ನಣೆಯನ್ನು ಪಡೆಯುತ್ತ 'ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನೆಯಿಂದ ರಾಜ್ಯಂಗೆಯ್ಯುತ್ತಿದ್ದ' ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಆ ಮೇಲೆ ವಿಜಯನಗರದ ರಾಜರ ಆಳ್ವಿಕೆಯಲ್ಲಿ ಊರ್ಜಿತಾವಸ್ಥೆಯನ್ನು ಪಡೆಯಿತು. ತುಳುಮನೆತನದ ಕೃಷ್ಣದೇವರಾಯನ ಕಾಲದಲ್ಲಿ ಭಕ್ತಿಪಂಥವು ಸರ್ವಾಂಗಗಳಲ್ಲಿ ಬಲಗೊಂಡು ವಿವಿಧವಾದ ಭಕ್ತಿಸಾಹಿತ್ಯದ ನಿರ್ಮಾಣಕ್ಕೆ ಕಾರಣವಾಯಿತು. ಹರಿದಾಸಕೂಟವೂ ಆಗ ಶ್ರೀ ವ್ಯಾಸರಾಯ ಪುರಂದರದಾಸ ಕನಕದಾಸರ ಆಶ್ರಯದಲ್ಲಿ ಜನತೆಯ ಜೀವನವನ್ನು ಭಕ್ತಿಮಯವನ್ನಾಗಿ ಮಾಡಿತು. ಇತ್ತ ಆಂಧ್ರದೇಶದಲ್ಲಿ ಅನ್ನಮಾಚಾರ್ಯರು ಹರಿಭಕ್ತಿಯ ಪ್ರಚಾರ ಮಾಡಿದರು. ರಾಮಾಯಣ—ಮಹಾಭಾರತ—ಭಾಗವತ ಮತ್ತು ಉಳಿದ ಪುರಾಣಗಳನ್ನು ಜನಸಾಮಾನ್ಯಕ್ಕೆ ಪರಿಚಯ ಮಾಡಿಕೊಡಲಿಕ್ಕೆ ಪ್ರಾಚೀನ ದೇವಾಲಯಗಳಲ್ಲಿ ವಿವಿಧ ಕಥೆಗಳನ್ನು ಚಿತ್ರಿಸಿದ್ದೂ ಶಿಲ್ಪಗಳನ್ನು ಕಟೆದದ್ದೂ ವೈದಿಕ ಧರ್ಮದ ಪುನರುಜ್ಜೀವನಕ್ಕಾಗಿ ಎಂಬುದು ಶಿಲ್ಪಗಳ ಸೂಕ್ಷ್ಮ ಪರೀಕ್ಷಕರಿಗೆ ಗೊತ್ತಿದ್ದ ಮಾತು. ಆ ದೃಷ್ಟಿಯಿಂದ ನೋಡಿದರೆ ಬಾದಾಮಿಯ ಚಳುಕ್ಯರೂ, ಕಲ್ಯಾಣದ ಚಾಳುಕ್ಯರೂ, ವಿಜಯನಗರದ—ಮುಖ್ಯವಾಗಿ ತುಳುಮನೆತನದ—ರಾಜರೂ ವೈದಿಕ-ಪೌರಾಣಿಕ ಧರ್ಮದ ಪ್ರತಿಷ್ಠೆಗಾಗಿ ಅನೇಕ ದೇವಮಂದಿರಗಳನ್ನು ಕಟ್ಟಿಸಿದರಲ್ಲದೆ ಭಕ್ತಿಯನ್ನು ಉದ್ರೇಕಿಸುವ ಪೌರಾಣಿಕ ಕಥೆಗಳನ್ನು ಶಿಲ್ಪದಲ್ಲಿ ಚಿತ್ರಿಸಿದರು. ಅವರಲ್ಲಿ ಬೆಳವಣಿಗೆಯ ಕ್ರಮಾನುರೋಧವಾಗಿ ವಿಜಯನಗರದ ರಾಜರು ಭಕ್ತಿಪಂಥದ ಪ್ರವರ್ತಕರೆಂದು ಧಾರಾಳವಾಗಿ ಹೇಳಬಹುದು. ಶಿಲ್ಪದಲ್ಲಿಯಲ್ಲದೆ ಸಾಹಿತ್ಯದಲ್ಲಿಯೂ ಭಕ್ತಿಯ ಗ್ರಂಥಗಳು ಈ ಸಮಯದಲ್ಲಿಯೇ ಉದಯ ಹೊಂದಿದವು. ಇದೇ ಸಮಯದಲ್ಲಿ ಕುಮಾರವ್ಯಾಸನು ಬಾಳಿ ತನ್ನ ಅಸದೃಶವಾದ ಭಾಷಾಪ್ರಭುತ್ವದಿಂದ ದೇಶಕಾಲಮಾನಕ್ಕನುಸರಿಸಿ ಜನತೆಗೆ ಹೃದಯಂಗಮವಾಗುವಂತೆ ಜನರಾಡುವ ತಿರುಳು ಕನ್ನಡದಲ್ಲಿ ಮಹಾಭಾರತವನ್ನು ರಚಿಸಿದನೆಂದು ತಿಳಿಯುವದು ಸಮಂಜಸವಾಗಿ ತೋರುತ್ತದೆ. - ಈ ಕಾಲವು ವೈದಿಕ ಧರ್ಮದ ಪೌರಾಣಿಕ ಭಕ್ತಿಯ ಪ್ರಚಾರದ ಕಾಲವು. ವೀರಶೈವ ವಚನಕಾರರು ವೈದಿಕ ಧರ್ಮದ ತಿರುಳಾದ ಭಕ್ತಿಮಾರ್ಗವನ್ನು ಪೋಷಿಸಿದ್ದಾದರೂ ಈಗ.

ಐರಾವತಕಥೆಯ ಮೂಲ

'ಐರಾವತ'ದ ಕಥೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀ ವೇದವ್ಯಾಸರ ಹೇಳಿಕೆಯಂತೆ ಗಾಂಧಾರಿಯು ಮಣ್ಣಿನಿಂದ ಮಾಡಿದ ಆನೆಯ ಮೇಲೆ ಗೌರೀಪೂಜೆಯನ್ನು ಬಹು ವಿಜೃಂಭಣೆಯಿಂದ ಮಾಡಿದಳು. ಆಕೆಯ ನೂರೊಂದು ಮಕ್ಕಳು ಕಿಂಕರರಾಗಿ ನಿಂತು ತಾಯಿಯ ನೋಂಪಿಯನ್ನು ಆಸ್ಥೆಯಿಂದ ನೆರವೇರಿಸಿದರು. ಆ ಸಮಾರಂಭಕ್ಕೆ ಕುಂತಿಯನ್ನು ಆಹ್ವಾನಿಸಲಿಲ್ಲ. ಕುಂತಿಯು ಮನಸ್ಸಿನಲ್ಲಿ ಬಹಳ ನೊಂದುಕೊಂಡು ಬಡತನದ ಅಪಮಾನವನ್ನು ಸಹಿಸುವದು ದುಸ್ತರವೆಂದು ತನ್ನ ಐವರು ಮಕ್ಕಳ ಮುಂದೆ ತನ್ನ ದುಃಖವನ್ನು ತೋಡಿಕೊಂಡಳು. ಅರ್ಜುನನು ಇಂದ್ರಲೋಕದಿಂದ ಐರಾವತವನ್ನು ಕಾಮಧೇನು ಕಲ್ಪವೃಕ್ಷಗಳಿಂದ ಕೂಡಿ ತರಿಸಿ ಅದರ ಪೂಜೆಯನ್ನು ನಿನ್ನ ಕೈಯಿಂದ ಮಾಡಿಸುವೆನೆಂದು ಪ್ರತಿಜ್ಞೆಗೈದು ಅದರಂತೆ ಭೂಮಿಸ್ವರ್ಗಲೋಕಗಳಿಗೆ ಶರಮಯವಾದ ಮಾರ್ಗವನ್ನು ಮಾಡಿ ಐರಾವತವನ್ನು ಸ್ವರ್ಗದಿಂದ ತರಿಸಿದನು. ಧರ್ಮಭೀಮ ನಕುಲಸಹದೇವರು ಬೆಂಬಲರಾಗಿ ನಿಂತು ತಾಯಿಯ ವ್ರತಕ್ಕೆ ಭಂಗ ಬಾರದಂತೆ ಜಾಗರೂಕರಾಗಿದ್ದರು. ಶ್ರೀಕೃಷ್ಣ ಶ್ರೀವೇದವ್ಯಾಸರು ಉತ್ಸಾಹದಿಂದ ಬಂದು ಸಮುಚಿತವಾದ ಪೂಜಾವಿಧಾನಗಳನ್ನು ಹೇಳಿ ಕುಂತಿಯ ಕೈಯಿಂದ ಐರಾವತ ವ್ರತವನ್ನು ನಿರ್ವಿಘ್ನವಾಗಿ ಸಾಂಗಗೊಳಿಸಿದರು. ಗಾಂಧಾರಿಯು ಕುಂತಿಯ ಆಮಂತ್ರಣವನ್ನು ಸೀಕರಿಸಲಿಲ್ಲ. ದುರ್ಯೋಧನಾದಿ ಕೌರವರಿಗೆ ತೇಜೋಭಂಗ ವಾಯಿತು. ಈ ಅನುಪಮವಾದ ವ್ರತಾನುಷ್ಠಾನದಿಂದ ಪಾಂಡವರಿಗೆ ಕೀರ್ತಿ ಸಂಪತ್ತುಗಳು ಒದಗಿದವು. ಇದು ಈ ಪ್ರಕರಣದಲ್ಲಿ ನಿರೂಪಿತವಾದ ಕಥೆಯ ಸಾರಾಂಶವು.

ಈ ಕಥೆಯನ್ನು ಕುಮಾರವ್ಯಾಸನು ಯಾವ ಮೂಲದಿಂದ ಆಯ್ದುಕೊಂಡನೆಂದು ವಿವೇಚಿಸುವದವಶ್ಯವಿದೆ. ಅವನು ಇದನ್ನು ಆದಿಪರ್ವದಲ್ಲಿ ಸೇರಿಸಿದ್ದಾನೆ. ಹಿಂದೆ ಹೇಳಿದಂತೆ ಒಂದು ಪ್ರತಿಯಲ್ಲಿ "ಶ್ರೀಮಹಾಭಾರತೇ ಶತಸಹಸ್ರಸಂಹಿತಾಯಾಂ ಶ್ರೀ ಆದಿಪರ್ವಣಿ ಗಾಂಧಾರೀಮೃತ್ತಿಕಾ ಐರಾವತಪೂಜಾನಂ। ಅರ್ಜುನ ಪ್ರತಾಪ ಐರಾವತ ಕುಂತೀದೇವೀ ವ್ರತಾನಂ ॥ ಶ್ರೀಕೃಷ್ಣಪೂಜಾನುಂ | ಅಂತು ಸಂಧಿ ೨೪ ಕ್ಕಂ ಮಂಗಳ" ಎಂದು ಹೇಳಿರುವದರಿಂದ ಈ ಕಥೆಯು ಮೂಲಮಹಾಭಾರತದ ಒಂದು ಭಾಗವಾಗಿರಬೇಕು. ಆದರೆ ಶ್ರೀ ವೇದವ್ಯಾಸರ ಮಹಾಭಾರತದ ಅಚ್ಚಾದ ಪ್ರತಿಗಳಲ್ಲಿ ಈ ವ್ರತದ ವರ್ಣನೆ ಇಲ್ಲ. ಅಷ್ಟಾದಶಪುರಾಣಗಳಲ್ಲಿಯೂ ಇದರ ನಿರ್ದೇಶವಿಲ್ಲ. ಆದರೆ ಕುಮಾರವ್ಯಾಸನು ಈ ಕಥೆಯನ್ನು ತನ್ನ ಮಹಾ-

ಭಾರತದಲ್ಲಿ ಹೇಗೆ ಸೇರಿಸಿದನು. ಕರ್ಣಾಟಕ ಮಹಾಭಾರತವನ್ನು ಪರಿಷ್ಕರಿಸಿ ಪ್ರಸಿದ್ಧಿಸಿದ ವಿ. ಶ್ಯಾಮಾಚಾರ್ಯರು ಉಪೋದ್ಘಾತದಲ್ಲಿ "ಈಗ ಮುದ್ರಿಸಿರುವ ಪಾಠಕ್ರಮದಲ್ಲಿ ಸೇರಿದ ಮತ್ಸ್ಯಾದ್ಯವತಾರ ಚರಿತ್ರಭಾಗವು ಮತ್ತು ಐರಾವತದ ಕಥೆಯು ಸಂಸ್ಕೃತ ಮೂಲಭಾರತದಲ್ಲಿ ಇಲ್ಲವಾದುದರಿಂದ ಈ ಭಾಗದ ಗ್ರಂಥಗಳು ಕುಮಾರವ್ಯಾಸನ ಕೃತಿಯಲ್ಲಿ ಸೇರಲರ್ಹವೇ ಅಲ್ಲವೇ ಎಂಬುದು ವಿಚಾರಕ್ಕೆ ತಕ್ಕ ವಿಷಯವಾಗಿದೆ" ಎಂದು ಬರೆದು ಶ್ರೀ ಮಧ್ವಾಚಾರ್ಯರಿಂದ ರಚಿತವಾದ ಮಹಾಭಾರತ ತಾತ್ಪರ್ಯನಿರ್ಣಯವೆಂಬ ಗ್ರಂಥದಲ್ಲಿ ದಶಾವತಾರ ಚರಿತ್ರೆಯು ನಿರೂಪಿಸಲ್ಪಟ್ಟಿರುವದರಿಂದ ಅದು ಮೂಲಭಾರತದಲ್ಲಿ ಇದ್ದಿರಬೇಕು. ಅದರಂತೆ ಐರಾವತ ಕಥೆಯೂ ಮೂಲಭಾರತದಲ್ಲಿ ಸೇರಿರಬೇಕೆಂದು ಊಹಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಐರಾವತ ಕಥೆಯನ್ನು ನಿರೂಪಿಸುವ ಗ್ರಂಥಗಳು ಯಕ್ಷಗಾನದಲ್ಲಿ ರಚಿತವಾಗಿವೆ. ಅವು ಐರಾವತಕಥೆಯೆಂದೂ ಐರಾವತ ಪ್ರಸಂಗವೆಂದೂ ಪ್ರಸಿದ್ಧವಾಗಿವೆ. ಹರಿಕಥೆಯನ್ನು ಮಾಡುವ ಕೀರ್ತನಕಾರರು ಕನ್ನಡದಲ್ಲಿ ಗಜಗೌರೀವ್ರತ ಅಥವಾ ಐರಾವತ ಕಥೆಯನ್ನು ಹೇಳುವದುಂಟು. ಪುರಂದರದಾಸರು ಗಜಗೌರೀ ವ್ರತವನ್ನು ತಮ್ಮ ಕೃತಿಗಳಲ್ಲಿ ಸೇರಿಸಿದ್ದಾರೆ. ಇದರಿಂದ ಈ ಕಥೆಯು ಕರ್ಣಾಟಕದ ಜನತೆಯಲ್ಲಿ ಬಹು ಪ್ರಚಾರ ಹೊಂದಿದಂತೆ ತೋರುತ್ತದೆ. ಇದಕ್ಕೆ ಮೂಲವು ಮಹಾಭಾರತದಲ್ಲಿಯೇ ಇರಬೇಕು. ಆದರೆ ಆ ವಿಸ್ತಾರವಾದ ಗ್ರಂಥವು ಪ್ರಕ್ಷೇಪ, ವಿಕ್ಷೇಪ ವಿಪರ್ಯಾಸಗಳಿಂದ ವಿಲುಲಿತವಾಗಿರುವದರಿಂದ ಕಾಲಾಂತರದಲ್ಲಿ ಅರ್ಥವಾದ ಭೂಯಿಷ್ಠವಾದ ಎಷ್ಟೋ ಕಥೆಗಳು ಅಲ್ಲಿಂದ ಲುಪ್ತವಾಗಿರಬೇಕು. ಅವುಗಳಲ್ಲಿ ಜನಾದರಣಕ್ಕೆ ಪಾತ್ರವಾದ ಎಷ್ಟೋ ಭಾಗಗಳು ಮಾಸಮಾಹಾತ್ಮ್ಯಗಳಲ್ಲಿಯೂ, ಕಲ್ಪ-ವ್ರತಗಳಲ್ಲಿಯೂ ಸೇರಿ ಪುರಾಣಗಳಲ್ಲಿ ಸಮಾವೇಶವಾಗಿವೆ. ಕೌರವ ಪಾಂಡವರಿಂದ ಅನುಷ್ಠಿತವಾದ ಕಾರ್ಯಗಳೆಲ್ಲ ಮಹಾಭಾರತದಲ್ಲಿ ಸೇರಿರಲಿಕ್ಕಿಲ್ಲ. ಕೆಲವು ಮಾತ್ರ ಜನರ ಬಾಯಲ್ಲಿ ಬಳಕೆಯಲ್ಲಿ ಉಳಿದಂತೆ ತೋರುತ್ತದೆ. ಅಂಥವುಗಳಲ್ಲಿ ಐರಾವತ ಕಥೆಯು ಒಂದಾಗಿರಬೇಕು. 'ಭೀಮಸೇನ ಭಾಮಿನಿಯಾದನು' ಎಂಬ ದಾಸರ ಹಾಡಿನ ಕಥೆಯೂ, ಮಹಾಭಾರತದಲ್ಲಿ ಇಲ್ಲ.[೧] ಶ್ರೀ ವಿಷ್ಣು ಮೋಹಿನೀ ರೂಪವನ್ನು ತಾಳಿದಂತೆ ಭೀಮಸೇನನೂ ಭಾಮಿನೀ ರೂಪವನ್ನು ತಾಳಿ ಕೀಚಕನನ್ನು ವಧಿಸಿದ ಕಥೆಯು ಜನರಲ್ಲಿ ರೂಢಮೂಲವಾಗಿದೆ. ಆದ್ದರಿಂದ ಮೂಲಭಾರತದಲ್ಲಿ ಸೇರಿದ್ದರೂ ಕಾಲಾಂತರದಲ್ಲಿ ಕಳಚಿಹೋದ ಈ ಐರಾವತ ಕಥೆಯು ಪುರಾಣಗಳಲ್ಲಿಯೂ ಅಲ್ಲಿಂದ ಮುಂದೆ ವ್ರತ, ಕಲ್ಪಗಳಲ್ಲಿಯೂ ಸೇರಿದಂತೆ ತೋರುತ್ತದೆ.

---

೧ ಅವವಾತೇನ ಮೃದುನಾ ಪಟೇನಾಚ್ಛಾದಿತಸ್ತಥಾ || ದ್ರೌಪದೀಂ ಪೃಷ್ಠತಃ ಕೃತ್ವಾ ಯತ್ರಾಸೀನ್ನರ್ತನಾಲಯಃ || ಸ ಭೀಮಃ ಪ್ರಥಮಂ ಗತ್ವಾ ತಮಸ್ಯಾಯಾಮುಪಾವಿಶತ್ | -ಮಹಾಭಾರತ, ವಿರಾಟಪರ್ವ, ಕೀಚಕವಧಪರ್ವ, ೫೪-೫೫ (ತಂಜಾವೂರ ಪ್ರತಿ)

ಇದು 'ಹಸ್ತಿ ಗೌರೀವ್ರತ' ವೆಂಬ ಹೆಸರಿನಿಂದ ಭವಿಷ್ಯೋತ್ತರ ಪುರಾಣಾಂತರ್ಗತ ಭಾಗವೆಂದು 'ವ್ರತರಾಜ' ಎಂಬ ಕಲ್ಪಗ್ರಂಥದಲ್ಲಿ ಹೇಳಿದೆ. ಕಾಶೀಕ್ಷೇತ್ರ ನಿವಾಸಿಯಾದ ಸಂಗಮೇಶ್ವರಕರ ಎಂಬ ಉಪನಾಮವುಳ್ಳ ಗೋಪಾಲನ ಪುತ್ರನಾದ ವಿಶ್ವನಾಥನು ಇದನ್ನು ರಚಿಸಿದನೆಂದು ಶಕ ೧೮೧೯ (ಕ್ರಿ. ಶ. ೧೮೯೭) ರಲ್ಲಿ ಶ್ರೀ ವೆಂಕಟೇಶ್ವರ ಮುದ್ರಾಯಂತ್ರದಲ್ಲಿ ಮುದ್ರಿಸಲ್ಪಟ್ಟ ಆ ಗ್ರಂಥದ ಉಪೋದ್ಘಾತದಲ್ಲಿ ಪ್ರಕಾಶಕರು ಹೇಳಿದ್ದಾರೆ. ಇದರಿಂದ ಈ ಗ್ರಂಥವು ಆಸೇತು ಹಿಮಾಚಲದ ವರೆಗೆ ಮೂನ್ಯವಾಗಿತ್ತೆಂದೂ ಅಲ್ಲಿ ನಿರೂಪಿಸಲ್ಪಟ್ಟ ವ್ರತಗಳು ಎಲ್ಲರಿಂದ ಅನುಷ್ಠಾನಾರ್ಹವಾಗಿದ್ದವೆಂದೂ ತಿಳಿಯಬರುತ್ತದೆ. ಅಲ್ಲಿ ಶ್ರೀಕೃಷ್ಣನು, ವನದಿಂದ ತಿರುಗಿ ಬಂದು ಕುಂತಿಗೆ ರಾಜ್ಯಪ್ರಾಪ್ತಿಗಾಗಿ ಈ ವ್ರತವನ್ನು ಉಪದೇಶಿಸಿದನೆಂದು ಹೇಳಿದೆ.

ಕುಂತ್ಯಾಂ ವನಾದುಪೇತಾಯಾಂ ಹಸ್ತಿನಾಪುರಮುತ್ತಮಂ ।
... ...
ತಸ್ಯಾಃ ಕುಶಲಮನ್ವೇಷ್ಟುಮಾಜಗಾಮ ಸ ಮಾಧವಃ ।

ಕೃಷ್ಣ ಉವಾಚ ॥ ಕುಂತಿ ತೇ ಕಥಯಿಷ್ಯಾಮಿ ವ್ರತಾನಾಮುತ್ತಮಂ ವ್ರತಂ ।
ಯತ್ಕೃತ್ವಾ ಸುಖಸಂತಾನ ಧನಧಾನ್ಯ ಸಮನ್ವಿತಾ ।
ವಿಧೂತ ದುಷ್ಕೃತಾ ಪುಣ್ಯಾ ಸಪುತ್ರಾ ರಾಜ್ಯಮಾಪ್ಸ್ಯಸಿ ॥

ಈ ವ್ರತವು ಹಸ್ತಿಗೌರೀ ವ್ರತವೆಂದು ಕರೆಯಲ್ಪಟ್ಟಿದೆ. ಗೌರೀಶಂಕರರ ಸಂವಾದ ರೂಪವಾಗಿ ಶ್ರೀಕೃಷ್ಣನು ಈ ವ್ರತದ ವಿಧಾನವನ್ನು ಹೇಳಿದ್ದಾನೆ.

ಈಶ್ವರ ಉವಾಚ:– ಯಸ್ಮಿನ್ನಹನಿ ಹಸ್ತರ್ಕ್ಷೇ ಉದಯಂ ಪ್ರಾಪ್ನುತೇ ರವಿಃ ।
ತಸ್ಮಿನ್ ಕುರ್ಯಾತ್ಪ್ರಯತ್ನೇನ ಸೌವರ್ಣಂ ಕುಂಜರೋತ್ತಮಂ ॥೧೮॥

ಕಾಂಚನೀ ಪ್ರತಿಮಾ ಗೌರ್ಯಾ ಹೇರಂಬಸ್ಯ ಹರಸ್ಯ ಚ ।
ತಸ್ಯೋಪರಿ ನಿಧಾತವ್ಯಾ ಸರ್ವಾಲಂಕಾರ ಭೂಷಿತಾ ॥೧೯॥
... ...
ವ್ರತಂ ಸಮಾಚರೇದೇವಂ ಯಾವದ್ವರ್ಷಂ ತ್ರಯೊದಶ ।
ಸ್ವರ್ಣಭಾಜನಯುಗ್ಮಂ ಚ ಪ್ರತಿವರ್ಷಂ ವಿಸರ್ಜಯೇತ್ ॥೨೭॥

ತತಶ್ಚತುರ್ದಶೇ ವರ್ಷೇ ತದುದ್ಯಾಪನಮಾಚರೇತ್ ।
ಶಂಭುಹೇರಂಬಸಹಿತಾ ಗೌರೀ ಹೈಮೀ ಗಜಸ್ಥಿತಾ ॥೨೮॥

ಪೂರ್ವೋಕ್ತವಿಧಿನಾ ಪೂಜ್ಯಾ ವಾಸರಾಣಿ ತ್ರಯೋದಶ ।
ಚತುರ್ದಶದಿನೇ ಪ್ರಾಪ್ತೇ ಸಂಯತಾ ಪ್ರಾತರುತ್ಥಿತಾ ।
... ...
ಸ್ಥಾಪಯಿತ್ವಾ ತತೋ ದೇವೀಂ ನಕ್ತಂ ಕುರ್ಯಾತ್ತತೋರ್ಚನಂ
॥೩೯॥

ದೇವ್ಯುವಾಚ :-- ಸೌವರ್ಣಪ್ರತಿಮಾ ಹಸ್ತಿ ಪಾತ್ರಪುಷ್ಪಾಣಿ ಕಲ್ಪಿತಂ |
ಯಸ್ಯಾ ನ ಶಕ್ತಿಃ ಸಾ ನಾರೀ ಕಥಂ ಕುರ್ಯಾದ್ವ್ರತಂ ವಿಭೋ ||
ಈಶ್ವರ ಉವಾಚ । ಅಶಕ್ತ್ಯಾ ಮೃಣ್ಮಯಃ ಕಾರ್ಯಃ ಪ್ರತಿಮಾ ಚಾಪಿ ಮೃನ್ಮಯೀ ||೩೭||

ಈ ವ್ರತದ ಮಾಹಾತ್ಮ್ಯವನ್ನು ಕೇಳಿ ಗಾಂಧಾರಿಯು ಅಭಿಮಾನದಿಂದ ತನ್ನ ೧೦೦ ಮಕ್ಕಳಿಂದ ಮಣ್ಣನ್ನು ತರಿಸಿ ಗೌರೀ, ಶಂಕರ, ಗಣಪತಿ ಮತ್ತು ಆನೆಗಳನ್ನು ಮಣ್ಣಿನಿಂದ ಮಾಡಿಸಿ ಪೂಜೆಯನ್ನು ಮಾಡಿದಳು. ಕುಂತಿಯು ವಿಷಾದದಿಂದ ತನ್ನ ಐವರು ಮಕ್ಕಳಿಗೆ ತನ್ನ ಅಶಕ್ತತೆಯನ್ನು ತೋರಿಸಿಕೊಂಡಳು. ಅರ್ಜುನನು 'ತಾಯಿ, ಚಿಂತೆ ಬೇಡ, ಮಣ್ಣಿನ ಪ್ರತಿಮೆಗಳೇಕೆ? ಸಾಕ್ಷಾತ್ ಹರ, ಗೌರೀ, ಗಜಮುಖ (ಗಣಪತಿ) ಮತ್ತು ಐರಾವತಗಳನ್ನು ಇಲ್ಲಿಗೆ ತರಿಸುವೆನು. ಅವರನ್ನು ಪೂಜಿಸು ಎಂದನು.

ಕಿಂ ಮೃತ್ಪ್ರತಿಮಯಾ ಕಾರ್ಯಂ ತ್ವಯಾ ಸಮುಪಾಹರೇ |
ಸಾಕ್ಷಾದಿಹ ಹರಂ ಗೌರೀಮೈರಾವತಮುಖಾನನಂ ||೪೨||
ಕೃತ್ವಾ ತತ್ಪೂಜನಂ ಮಾತಃ ಸಮ್ಯಕ್ಫಲಮವಾಪ್ಸ್ಯಸಿ ||

ಅರ್ಜುನನು ಗಂಗಾತೀರದಲ್ಲಿ ಕಠಿಣವಾದ ತಪಸ್ಸನ್ನು ಮಾಡಿ ಶಿವನನ್ನು ಪ್ರಸನ್ನೀಕರಿಸಿಕೊಂಡನು. ಶಂಕರನು

ದೇವ ದೇವ ಗಣಾಧಿನೋ ಗೌರೀಹೇರಂಬ ಸಂಯುತಃ |
ಗೃಹಾಣ ಪೂಜಾಮಾಗತ್ಯ ಮಮ ಮಾತುರ್ಗೃಹೇ ವಿಭೋ ||೪೮||

ಎಂಬ ಅರ್ಜುನನ ಪ್ರಾರ್ಥನೆಯನ್ನು ಮನ್ನಿಸಿ ಕುಂತಿಯ ಮನೆಗೆ ಪರಿವಾರ ಸಮೇತನಾಗಿ ಬಂದು ಪೂಜೆಯನ್ನು ಸ್ವೀಕರಿಸಿದನು. ಸೂರ್ಯನು ಹಸ್ತಾನಕ್ಷತ್ರಕ್ಕೆ ಬಂದಾಗ ಈ ವ್ರತವನ್ನು ಮಾಡಬೇಕೆಂದು ಹೇಳಿರುವದರಿಂದ ಭಾದ್ರಪದ ಮಾಸವು ಗಜಗೌರೀ ವ್ರತಕ್ಕೆ ವಿಹಿತ ಕಾಲವೆಂದು ಗೊತ್ತಾಗುವದು. ಈ ಹಸ್ತಿಗೌರೀವ್ರತವನ್ನು ಈಗಲೂ ಸುಮಂಗಲಿಯರು ಆಚರಿಸುತ್ತಾರೆ. ಸೂರ್ಯನು ಹಸ್ತನಕ್ಷತ್ರಕ್ಕೆ ಬಂದಾಗ ಸ್ವರ್ಣಮಯ ಗೌರೀ ಶಂಕರ ಹೇರಂಬರನ್ನು ಬಂಗಾರದ ಆನೆಯ ಮೇಲೆ ಕುಳ್ಳಿರಿಸಿ ಪೂಜೆ ಮಾಡುತ್ತಾರೆ.[೧] 'ವ್ರತರಾಜ'ದಲ್ಲಿ ಕೊಟ್ಟ ವಿಧಾನವು ಈ ವ್ರತಕ್ಕೆ ಅನ್ವಯಿಸುತ್ತದೆ. (ಮಹಾರಾಷ್ಟ್ರ ಶಬ್ದಕೋಶವನ್ನು ನೋಡಿರಿ). ಮಳೆಗಾಲದಲ್ಲಿ

೧. ಮಹಾರಾಷ್ಟ್ರ ಶಬ್ದಕೋಶದಲ್ಲಿ 'ಗಜಗೌರೀ' ಶಬ್ದದ ಅರ್ಥ ವಿವರಣೆಯನ್ನು ನೋಡಿರಿ. ಗುಜರಾತದಲ್ಲಿ ಆಶ್ವಿನ ಮಾಸದಲ್ಲಿ ಕುಮಾರಿಯರು 'ಗರ್ಬಾ' ಎಂಬ ನರ್ತನವನ್ನು ಗುಂಪುಗುಂಪಾಗಿ ಸೇರಿ ಈಗಲೂ ಮಾಡುವರು. ಇದು ಶ್ರೀಕೃಷ್ಣನ ರಾಸಕ್ರೀಡೆಯ ಅವಶೇಷವೆಂದು ಹೇಳುವರು. ಮಹಾರಾಷ್ಟ್ರದಲ್ಲಿ ಹಥಗಾ ಎಂಬ ಆಟವನ್ನು ಕುಮಾರಿಯರು ಆಡುವರು.

ಕುಮಾರಿಯರು ಆಡುವ ಆಟಕ್ಕೆ 'ಹತ(ಥ)ಗಾ' ಎಂದು ಹೆಸರುಂಟು. ಇದ 'ಹಸ್ತಿಗೌರೀ' ವ್ರತದ ಅವಶೇಷವೆಂದು ಹೇಳುತ್ತಾರೆ. ಕರ್ನಾಟಕದಲ್ಲಿಯೂ ಈ ವ್ರತವು ಪ್ರಚಾರದಲ್ಲಿದೆ. ಸ್ತ್ರೀಯರು ಅದನ್ನು ಆಶ್ವೀನ ಶು. ಅಷ್ಟಮಿಯ ದಿನ ಆಚರಿಸುವರು. ಆದರೆ ಇದು ಮಹಾರಾಷ್ಟ್ರದ ಸಂಪರ್ಕದಿಂದ ಬಂದುದೋ ಮೊದಲಿನಿಂದಲೂ ಇದ್ದುದೋ ಗೊತ್ತಾಗುವುದಿಲ್ಲ. ಆದರೂ 'ಐರಾವತ'ದಲ್ಲಿ ವರ್ಣಿಸಲ್ಪಟ್ಟ ವ್ರತವು 'ವ್ರತರಾಜ'ದಲ್ಲಿ ಕೊಟ್ಟ ವಿಧಾನದಿಂದ ಸ್ವಲ್ಪ ಭಿನ್ನವಾಗಿರುತ್ತದೆಂದು ಕೆಳಗಿನ ವಿವರಣೆಯಿಂದ ಗೊತ್ತಾಗುತ್ತದೆ.

ಈ ಪ್ರಬಂಧದಲ್ಲಿ ಅರ್ಜುನನು ಬಾಣಮಯ ಸೋಪಾನದಿಂದ ಇಂದ್ರನ ಐರಾವತವನ್ನು ತರಿಸಿದನೆಂದೂ ಇಂದ್ರನು ಐರಾವತದೊಡನೆ ಹತ್ತು ಸಾವಿರ ಅಪ್ಸರ ಸ್ತ್ರೀಯರನ್ನೂ, ಕಾಮಧೇನು, ಕಲ್ಪವೃಕ್ಷ, ತುಂಬರು ನಾರದಾದಿಗಳು ಮೊದಲಾದ ಗಾಯಕರನ್ನೂ ಪಾಂಡವರ ಅರಮನೆಗೆ ಕಳಿಸಿದನೆಂದೂ ಹೇಳಿದೆ. ಐರಾವತವು ಬಂದೊಡನೆ ಪಾಂಡವರು ಶ್ರೀಕೃಷ್ಣ ಭೀಷ್ಮಾದಿಗಳಿಂದ ಕೂಡಿಕೊಂಡು ಇದಿರ್ಗೊಂಡರು. ಆಮೇಲೆ ಕುಂತಿಯು

ಬಂದುದಾಗಳೆ ಕೊಂತಿ ಗಂಗೆಯ ।
ಮಿಂದು ತೆಗೆದಳು ಮಳಲಗೌರಿಯ ।
ತಂದು ಬಿಜಯಂಗೈಸಿ ಷೋಡಶಪರಿ ವಿಧಾನದಲಿ ॥ —೮, ೧.

ಮಳಲ ಗೌರಿಯನ್ನು ತಂದು ಪೂಜಿಸಿ, ಕಾಮಧೇನು, ಕಲ್ಪವೃಕ್ಷಗಳನ್ನು ಅರ್ಚಿಸಿ ಐರಾವತವನ್ನು ಷೋಡಶಪೂಜೆಗಳಿಂದ ಸತ್ಕರಿಸಿದಳು.

ಬಂದಳೈರಾವತಕೆ ಮುದದಲಿ ।
ನಿಂದು ಕರಗಳ ಮುಗಿದು ಸಮ ।
ಸಂದು ಷೋಡಶ ದಿವ್ಯಪೂಜೆಗಳಿಂದ ಸತ್ಕರಿಸಿ ॥ —೮, ೩.

ಆಮೇಲೆ ಕುಂತಿಯು ದಿವ್ಯ ತೊಟ್ಟಿಲಲ್ಲಿ ಕೂತು

ಲಲನೆ ಮಿಗೆ ಯಿದರೊಳಗೆ ಕುಳ್ಳಿರೆ
ಸೆಳೆದುಕೊಂಡರು ಗಜದ ಮೇಲಕೆ
ನಳಿನಲೋಚನೆ ಬಂದಳೈರಾವತವನೇರಿದಳು ॥ —೮, ೧೦.

ಐರಾವತದ ಮೇಲೆ ಕುಳ್ಳಿರಲು ಇಂದ್ರನ ಛತ್ರ, ಚಾಮರಗಳನ್ನು ಎಡಬಲದ ಪರಿವಾರವು ಬೀಸಿತು. ದೇವದುಂದುಭಿನಾದವು ಮೊಳಗಿತು. ಈ ವೈಭವದ ಮೆರವಣಿಗೆಯಾದಮೇಲೆ, ಆಕೆಯು

ಕೌಂತಿ ಐರಾವತವನಿಳಿದಳು
ಸಂತಸದ ಸಿರಿಯಿಂದ ಲಕ್ಷ್ಮೀ-
ಕಾಂತನಂಘ್ರಿಯೊಳೆರಗಿ ಭೀಷ್ಮಾದಿಗಳಿಗಭಿನಮಿಸಿ ॥ —೮-೩೦

ಐರಾವತದಿಂದ ಕೆಳಗೆ ಇಳಿದು ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿದಳು. ಅರ್ಜುನನು ಐರಾವತವನ್ನು ತಿರುಗಿ ಬಾಣಮಯ ಸೋಪಾನದಿಂದ ಇಂದ್ರಲೋಕಕ್ಕೆ ಕಳುಹಿಸಿದನು.

ಇರದು ದಿನ ಮೂರಾಯ್ತು ಕೀರ್ತಿಯ
ಔಳವಿಗೆಯ ಮಾಡಿದಿರಿ ಸಾಕೆ-
ನ್ನೀವ ಮಾರ್ಗದ ಮೇಲೆ ತೆರಳುವದೆಂದು ನೇಮಿಸಿದ ॥ —೮-೬೩.

ಎಂದು ಈ ವ್ರತವು ಮೂರು ದಿನಗಳಲ್ಲಿ ಸಾಂಗಗೊಳಿಸಲ್ಪಟ್ಟಂತೆ ತಿಳಿಯುತ್ತದೆ. ಈ ವ್ರತದಲ್ಲಿ ಕುಮಾರ ವ್ಯಾಸನು ಶ್ರೀಕೃಷ್ಣ ಭಕ್ತಿಯನ್ನು ಉದ್ರೇಕಿಸುವಂತೆ ಕಥೆಯನ್ನು ನಿರೂಪಿಸಿದ್ದಾನೆ. ಗೌರೀಪೂಜೆಯ ನಿಮಿತ್ತದಿಂದ ಶ್ರೀಕೃಷ್ಣನ ಮಹಿಮೆಯನ್ನು ಸಾರಿದ್ದಾನೆ. ಇದಲ್ಲದೆ ಶ್ರೀವೇದವ್ಯಾಸರು ಈ ವ್ರತವನ್ನು ಗಾಂಧಾರಿಗೆ ಹೇಳಿದರೆಂದೂ ಆಕೆಯು ಮಣ್ಣಿನ ಆನೆಯ ಮೇಲೆ ಗೌರಿಯನ್ನು ಪೂಜಿಸಿದಳೆಂದೂ ಅದನ್ನು ನೋಡಿ ಕುಂತಿಯು ಜೀವಂತ ಐರಾವತವನ್ನು ತರಿಸಿ ಪೂಜಿಸಿದಳೆಂದೂ 'ವ್ರತರಾಜ'ಕ್ಕಿಂತ ಭಿನ್ನರೀತಿಯಿಂದ ವ್ರತವು ಇಲ್ಲಿ ವರ್ಣಿಸಲ್ಪಟ್ಟಿದೆ. ಈ ವ್ಯತ್ಯಾಸವನ್ನು ಕುಮಾರವ್ಯಾಸನು ಕರ್ನಾಟಕ ಜನತೆಯಲ್ಲಿ ಆಚರಣೆಯಲ್ಲಿದ್ದ ರೀತಿಯನ್ನು ನೋಡಿ ತನ್ನ ಪ್ರಬಂಧದಲ್ಲಿ ಸೇರಿಸಿದನೆಂದು ತಿಳಿಯಬಹುದು.

ಕರ್ನಾಟಕದ ಶಿಲ್ಪದಲ್ಲಿ ಗಜಗೌರೀ ಪಟ್ಟಿಕೆಯು ವಿಶಿಷ್ಟ ಸ್ಥಾನವನ್ನು ಪಡೆದಿದೆಯೆಂಬುದನ್ನು ಈ ಸಂದರ್ಭದಲ್ಲಿ ನೆನಪಿನಲ್ಲಿಡಬಹುದು. ಮಧ್ಯದಲ್ಲಿ ಚತುರ್ಭುಜೆ, ಶಂಖಚಕ್ರಗದಾಪದ್ಮಧಾರಿಣಿಯಾದ ಸುಖಾಸನದಲ್ಲಿ ಕುಳಿತ ಮಹಾಲಕ್ಷ್ಮಿಯನ್ನು ಎಡಬಲಪಕ್ಕಗಳಲ್ಲಿ ಎರಡು ಆನೆಗಳು ತಮ್ಮ ಸೊಂಡಿಯಲ್ಲಿ ಹಿಡಿದ ಪೂರ್ಣ ಕುಂಭಗಳಿಂದ ಅಭಿಷೇಕ ಮಾಡುವಂತೆ ಚಿತ್ರಿಸಲ್ಪಟ್ಟ ಪಟ್ಟಿಕೆಗೆ ಗಜಗೌರೀ ಪಟ್ಟಿಕೆಯೆನ್ನುವರು. ಇದು ಕರ್ನಾಟಕದ ಪ್ರಾಚೀನ ವಾಸ್ತುಶಿಲ್ಪದ, ಮುಖ್ಯವಾಗಿ ಚಾಳುಕ್ಯರ ಕಟ್ಟಡಗಳ ವ್ಯಾವರ್ತಕ ಲಕ್ಷಣವೆಂದು ಹೇಳುವರು. ಗಜಗೌರೀ, ಗಜಲಕ್ಷ್ಮೀ ಶಬ್ದಗಳು ಏಕಾರ್ಥವಾಗಿರುವವು. ಅದರಂತೆ 'ಶರಣ್ಯೇ ತ್ರ್ಯಂಬಕೆ, ಗೌರಿ, ನಾರಾಯಣಿ

ನಮೋಸ್ತುತೇ ॥ ಎಂದು ಲಕ್ಷ್ಮೀಸೂಕ್ತದಲ್ಲಿ ಲಕ್ಷ್ಮಿಗೆ ಗೌರಿಯೆಂಬ ಹೆಸರು ಕೊಟ್ಟಿದೆ. ಆ ದೃಷ್ಟಿಯಿಂದ ವಿಷ್ಣು–ಕೃಷ್ಣ–ಮಹಿಮೆಗೆ ಅಂಗಭೂತವಾಗಿ ಗಜಗೌರೀ ವ್ರತವನ್ನು ಕುಮಾರವ್ಯಾಸನು ನಿರೂಪಿಸಿರುವನೆಂದು ಗೊತ್ತಾಗುವದು.

ಐತಿಹಾಸಿಕ ಯುಗದಲ್ಲಿ ವೈದಿಕ ಶೈವಸಂಘವು ರೂಢವಾಗಿತ್ತು. 'ಸ್ವಾಮಿ ಮಹಾಸೇನ ಪರಿರಕ್ಷಿತಾಭಿವರ್ಧಿತಾನಾಂ........ಸದಂಬಾನಾಂ ಕದಂಬಾನಾಂ' ಎಂದೂ 'ಸಪ್ತ ಮಾತೃಭಿಃ ಮಾತೃಭಿಃ ಪರಿರಕ್ಷಿತಾನಾಂ' ಎಂದೂ ಕ್ರಿ.ಶ. ೬ನೆಯ ಶತಮಾನದಲ್ಲಿ ಬಾಳಿದ್ದ ಬನವಾಸಿಯ ಕದಂಬರು ವರ್ಣಿಸಲ್ಪಟ್ಟಿದ್ದಾರೆ. ಬಾದಾಮಿಯ ಚಾಲುಕ್ಯ, ಮಳಖೇಡದ ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ವಿಷ್ಣು-ವೈಷ್ಣವ ಸಂಪ್ರದಾಯಗಳು ರಾಜಾಶ್ರಯವನ್ನು ಪಡೆಯಹತ್ತಿದವು. ಹೊಯ್ಸಳ, ಯಾದವ, ವಿಜಯನಗರದ ಅರಸರ ಆಳಿಕೆಯಲ್ಲಿ ಪರಿಶುದ್ಧವಾದ ವೈದಿಕ ಸಂಪ್ರದಾಯಕ್ಕೆ ಜನರ ಆದರವು ಹೆಚ್ಚುತ್ತ ಹೋಯಿತು. ಇದರ ಪ್ರಭಾವದಿಂದ ಕರ್ನಾಟಕದಲ್ಲಿ ಗಜಗೌರೀ ವ್ರತವು ಗಜಗೌರೀ ಪಟ್ಟಿಕೆಯಂತೆ ವಿಷ್ಣುಮಹಿಮೆಯ ದ್ಯೋತಕವಾಗಿ ಆಚರಿಸಲ್ಪಡುತ್ತಿತ್ತೆಂದೂ ಕೃಷ್ಣ ಭಕ್ತನಾದ ಕುಮಾರವ್ಯಾಸನು ಕೃಷ್ಣನಿಗೆ ಅಗ್ರಪೂಜೆಯನ್ನು ಕೊಡಿಸಿ ಇದನ್ನು ಗಜಗೌರೀ–ಗಜಲಕ್ಷ್ಮೀ ವ್ರತವೆಂದು ವೈಷ್ಣವ ವ್ರತವನ್ನಾಗಿ ತನ್ನ ಮಹಾಭಾರತದಲ್ಲಿ ಸೇರಿಸಿದನೆಂದೂ ತಿಳಿಯಬಹುದು. ಜೈನಧರ್ಮದ ನೋಂಪಿಗಳಲ್ಲಿಯಾಗಲಿ ಬೌದ್ಧಧರ್ಮದ ವ್ರತಗಳಲ್ಲಿಯಾಗಲಿ ಇದು ಅಥವಾ ಇದನ್ನು ಹೋಲುವ ಅನುಷ್ಠಾನವು ಇಲ್ಲ. ಆದ್ದರಿಂದ ವಿವಿಧ ರೀತಿಯಿಂದ ಜನತೆಯಲ್ಲಿ ರೂಢವಾಗಿದ್ದ ವೈದಿಕ ವ್ರತವೆಂದು ಇದನ್ನು ತಿಳಿಯಬಹುದು.

ಐರಾವತದ ಭಾಷೆ, ಬಂಧ, ಇತ್ಯಾದಿ

ಐರಾವತದ ಭಾಷೆ, ಶೈಲಿ, ಮತ್ತು ಕೆಲವು ಸಾಮಾನ್ಯ ವಿಷಯಗಳ ಬಗೆಗೆ ಒಂದೆರಡು ಮಾತನ್ನು ಹೇಳಬಹುದು. ಕರ್ಣಾಟಕ ಮಹಾಭಾರತದ ಶಬ್ದ ಸಂಗ್ರಹ ವಿಷಯ ನಿರೂಪಣೆಯ ಶೈಲಿ. ಅಲಂಕಾರ. ರಸಗಳನ್ನು ಪೋಷಿಸುವ ರೀತಿಗಳು ಈ ಐರಾವತ ಗ್ರಂಥದಲ್ಲಿ ಒಡೆದು ಕಾಣುತ್ತವೆ. ದಾಸಸಾಹಿತ್ಯದ ಪುರಂದರ, ಕನಕ, ಮುಂತಾದ ದಾಸರ ಕೃತಿಗಳ ಭಾಷೆಯನ್ನು, ಈ ಐರಾವತದ ಭಾಷೆಗೆ ಹೋಲಿಸಿದರೆ ಮಹಾಭಾರತ ಐರಾವತಕಥೆ ಮತ್ತು ದಾಸರ ಕೃತಿಗಳು, ಇವು ಒಂದೇ ಯುಗದ ಪ್ರಭಾವಕ್ಕೆ ಒಳಪಟ್ಟಿದ್ದವೆಂದು ಸ್ಪಷ್ಟವಾಗುತ್ತದೆ. ಈ ಯುಗ ಪ್ರಭಾವವನ್ನು ತಿಳಿದುಕೊಳ್ಳಲಿಕ್ಕೆ ಕನ್ನಡ ಭಾಷೆಯ ಐತಿಹಾಸಿಕ ವಿವೇಚನೆಯು ಅವಶ್ಯವಿದೆ. ಅದನ್ನು ಇಲ್ಲಿ ಸ್ಥೂಲವಾಗಿ ಕೊಟ್ಟಿದೆ.

ಕನ್ನಡ ಭಾಷೆಯ ಚರಿತ್ರೆಯನ್ನು ವಿಮರ್ಶಿಸುವಾಗ ಕೆಳಗಿನ ಮುಖ್ಯ ಅಂಶಗಳನ್ನು ನೆನಪಿನಲ್ಲಿಡತಕ್ಕದ್ದು :—

ಸಾಮಾನ್ಯವಾಗಿ ಹಿಂದುಸ್ಥಾನದ ಭಾಷೆಗಳಲ್ಲಿ ೧ ಸಂಸ್ಕೃತ, ೨ ಪ್ರಾಕೃತ, ೩ ಅಪಭ್ರಂಶ ಮತ್ತು, ೪ ದೇಶ್ಯ ಎಂದು ನಾಲ್ಕು ವಿಭಾಗಗಳನ್ನು ವೈಯಾಕರಣಿಗಳು ಮಾಡುತ್ತಾರೆ. ಎಲ್ಲ ವೈಯಾಕರಣಿಗಳು ಸಂಸ್ಕೃತಕ್ಕೆ ಪ್ರಯೋಗ ನಿಷ್ಪತ್ತಿಯನ್ನು ವಿವರಿಸುವ ವಿಶಿಷ್ಟ ನಿಯಮಗಳನ್ನು ಕಲ್ಪಿಸಿ ವ್ಯಾಕರಣವನ್ನು ಬರೆದಿದ್ದಾರೆ. ಪ್ರಾಕೃತಕ್ಕೆ, ಪಿಂಗಳ, ಹೇಮಚಂದ್ರ ಮೊದಲಾದ ವಿದ್ವಾಂಸರು ಪ್ರಯೋಗ ಶರಣರಾಗಿ ವ್ಯಾಕರಣವನ್ನು ರಚಿಸಿದ್ದಾರೆ. ಪ್ರಾಕೃತ ವ್ಯಾಕರಣದಲ್ಲಿ ಅಪಭ್ರಂಶಕ್ಕೆ ಸ್ವಲ್ಪ ಸ್ಥಾನವನ್ನು ಕಲ್ಪಿಸಿದ್ದಾರೆ. ಆದರೆ ದೇಶ್ಯವನ್ನು ಯಾರೂ ವಿವರವಾಗಿ ಚರ್ಚಿಸಿಲ್ಲ. ವರಾಹಮಿಹಿರನು ಬೃಹತ್ಸಂಹಿತೆಯಲ್ಲಿಯೂ, ಹೇಮಚಂದ್ರನು ಶಬ್ದಾನುಶಾಸನದಲ್ಲಿಯೂ ದೇಶ್ಯಪದಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ದೇಶ್ಯದ ವ್ಯಾಕರಣವನ್ನು ಯಾರೂ ಸ್ವತಂತ್ರವಾಗಿ ರಚಿಸಿಲ್ಲ. ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ "ಸಂಸ್ಕೃತಂ ಪ್ರಾಕೃತಮಪಭ್ರಂಶಂ ಪೈಶಾಚಿಕಮೆಂಬ ಮೂರುವರೆ ಭಾಷೆಗಳೊಳ್ ಪುಟ್ಟುವ ದ್ರವಿಡಾಂಧ್ರ ಕರ್ಣಾಟಾದಿ ಷಟ್ಪಂಚಾಶದ್ವಿಷಯ ಭಾಷಾ ಜಾತಿಗಳಕ್ಕುಂ" ಎಂದು ಛಪ್ಪನ್ನ (೫೬) ದೇಶಗಳಲ್ಲಿ ಬಳಕೆಯಲ್ಲಿರುವ ಭಾಷೆಗಳು, ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಪೈಶಾಚಿಗಳಿಂದ ಹುಟ್ಟಿರುವವೆಂದು ಹೇಳುತ್ತಾನೆ. ಇದರಿಂದ ಕನ್ನಡ ಭಾಷೆಯು ಈ ಮೇಲ್ಕಂಡ ಭಾಷೆಗಳ ಸಂಮಿಶ್ರಣದಿಂದುಂಟಾದ ಬೇರೊಂದು ಭಾಷಾಜಾತಿಯೆಂದು ಹೇಳಬೇಕಾಗುತ್ತದೆ. ಕನ್ನಡ ಭಾಷೆಯ ಉಗಮವನ್ನು ಚರ್ಚಿಸುವದು ಈಗ ಪ್ರಕೃತವಲ್ಲ. ಅದರ ಬೆಳವಣಿಗೆಯು ಬೇರೆ ಬೇರೆ ಭಾಷೆಗಳ ಸಂಪರ್ಕದಿಂದ ಉಂಟಾಗಿರುವದೆಂಬುದನ್ನು ಮಾತ್ರ ಮೇಲಿನ ವಿಧಾನದಿಂದ ಊಹಿಸಬಹುದು. ಕನ್ನಡ ಭಾಷೆಯಲ್ಲಿ ಮತ್ತೆ, ಬಳಕೆಯ ಭಾಷೆಯೂ, ಗ್ರಾಂಥಿಕ ಭಾಷೆಯೂ ಎಂದು ಎರಡು ವಿಭಾಗಗಳನ್ನು ಮಾಡಬಹುದು. ಬಳಕೆಯ ಭಾಷೆಯಲ್ಲಿ ಜನರ ಶಿಕ್ಷಣ, ಸಮಾಜದಲ್ಲಿಯ ಸ್ಥಾನಮಾನಗಳು, ಉದ್ಯೋಗ ವ್ಯವಹಾರಗಳು, ಪುರುಷ, ಸ್ತ್ರೀ, ಬ್ರಾಹ್ಮಣಾದಿ ವರ್ಣಗಳ ಸಂಸ್ಕಾರಗಳು, ಇವೇ ಮೊದಲಾದ ಕಾರಣಗಳಿಂದ, ವಿವಿಧ ರೀತಿಗಳೂ, ಬಂಧಗಳೂ, ಶಬ್ದಸಂಗ್ರಹವೂ ಅಸ್ತಿತ್ವದಲ್ಲಿ ಬಂದಿವೆ. ಅದರಲ್ಲಿ ಓಜಸ್ಸನ್ನು ತರಲಿಕ್ಕೆ ಕೃತ್ರಿಮ ಅಲಂಕಾರಾದಿಗಳ ಆವಶ್ಯಕತೆ ಇಲ್ಲ. ಆ ಭಾಷೆಯು ಮೂಲದಿಂದಲೇ ಶಬ್ದಾರ್ಥಾಲಂಕಾರಗಳಿಂದ ಓಜಸ್ವಿಯಾಗಿರುವುದು. ಗ್ರಾಂಥಿಕ ಭಾಷೆಯು ಕೃತ್ರಿಮವೆಂದು ಬೇರೆ ಹೇಳಬೇಕಾಗಿಲ್ಲ. ಕನ್ನಡ ಭಾಷೆಯಲ್ಲಿ ಗ್ರಾಂಥಿಕ ಮತ್ತು ಬಳಕೆಯ ಭಾಷೆಗಳ ನಡುವೆ ನಡೆದಿದ್ದ ತಾಕಲಾಟವನ್ನು ಮೊದಲಿನಿಂದಲೂ ಗೊತ್ತುಮಾಡಬಹುದು.

ಪ್ರಕೃತ, ವಿಜಯನಗರದ ಅರಸರ ಕಾಲದಲ್ಲಿ ಅಂದರೆ ಸು. ಕ್ರಿ. ಶ. ೧೪ನೆಯ ಶತಮಾನದಿಂದ, ರಾಜಕಾರಣದಲ್ಲಿಯೂ, ಧರ್ಮ ಮತ್ತು ತತ್ವವಿಚಾರಗಳಲ್ಲಿಯೂ ರಭಸದ ತಾಕಲಾಟಗಳು ಉಂಟಾದ್ದರಿಂದ, ಆ ಕಾಲದ ಭಾಷೆಯಲ್ಲಿ ಹಳೆಯ ಕಟ್ಟು ನಿಟ್ಟುಗಳು ಸಡಿಲಾದುವು. ವ್ಯಾಕರಣ, ಛಂದಸ್ಸು, ಕವಿಸಮಯಗಳಲ್ಲಿ ಕಾಲಕ್ಕನುಸಾರವಾಗಿ ಶಿಥಿಲತೆಯೂ, ಅನಿರ್ಬಂಧವೂ ತಲೆದೋರಹತ್ತಿದವು. ಕುಮಾರವ್ಯಾಸನ ಮಹಾಭಾರತವೂ, ದಾಸರ ಪದಗಳೂ, ಈ ಮಾತಿಗೆ ಸಮರ್ಪಕವಾದ ಉದಾಹರಣೆಗಳು. ಕರ್ಣಾಟಕ ಮಹಾಭಾರತದಲ್ಲಿ (೧) **ರೂಢಿಯ ಮಾತಿನ ಶೈಲಿ** (ಉದಾ:–ಧರ್ಮಗಿರ್ಮವನು-**ವಿರಾಟ** III, ೫೪, ಅವನಿಗಿವನಿಯ ಮಾತು:– ಉದ್ಯೋಗ IX, ೧೬), (೨) **ಸಂಧಿವ್ಯತ್ಯಾಸ**– ಬಾಹಪ್ಪಳಿಸಿ (ಬಾಹುವಪ್ಪಳಿಸಿ) ಕರ್ಣಪರ್ವ XXI. ೧೭೯, ಪೃಥವೀ ಪಾಲರಾಗೆನುತ (°ರಾಗಿ–ಎನುತ) (ಜತು XXVI, ೬), ಸಹಿತೊಂದಿವಸ (ಸಹಿತ+ಒಂದು+ದಿವಸ– ಆದಿ V, ೯೭) (೩) **ಯಕಾರ ವಕಾರಾಗಮ** (ಇಂದು ವದನೆಯು ವಿದ್ದಳು: ಆದಿ III, ೧೮) ದೇವರು ವದಿತಿಯಲಿ (ಆದಿ V. ೧೭), ಏನುವನು (ಏನನ್ನು) ಜತು XXIII, ೪೩ ಹೊಱಯಿಕೆ (ಹೊರಗೆ) ಜತು XXIV, ೬೭, ಬಟ್ಟಿಕಿನ (ಆದಿ XIV, ೯) ಇತ್ಯಾದಿ ಪ್ರಯೋಗಗಳು ಹೇರಳವಾಗಿ ದೊರೆಯುತ್ತವೆ. ಐರಾವತದಲ್ಲಿಯೂ ಇವುಗಳನ್ನು ಹೋಲುವ ಪ್ರಯೋಗಗಳನ್ನು ಕಾಣಬಹುದು. ಉದಾ: ಅನುಜರೆಲ್ಲರ **ಕೂಡಿಕೊಂಡೆ ಮತನುಜ** (ಕೂಡಿಕೊಂಡು ಯಮ ತನುಜ) I, ೨೩, ವನಿತೆಯರಿಗೊಂದಿಸುತ (ವನಿತೆಯರಿಗೆ ವಂದಿಸುತ) VIII, ೬೨. ಸುರಪನೈರಾವತವು ಅಮರಿಯರನಿದಿರ್ಗೊಳಬೇಕು (VII, ೨), ವಶುಧಿಗೀಶಯು ನಿಮ್ಮ ಮಗ ಪಾರ್ಥ (I, ೪೯). ಕರಿಯನೋಂತಳು........ ಕರಸದೆನ್ಮುವನು (I, ೩೪), **ಬಳಕೀಲಿಂದ** ಬಡತನವಿರಲು (I ೩೨) ಕರಪಲ್ಲವವನಿಗೆ ಚಾಚಿದನು (I ४೧) ಇತ್ಯಾದಿ. ಚಾರುಸೊಸಲನು (ಅರಿಸಮಾಸ) IV, ೩ ' ಸಿರಿಪಿತಾಂಬರದೆಸೆವ ' (IV, ೭), ಅಂಬುಧಿ ಕಲ್ಲೊಲಾಯಿತು. (V, ೬), ಲಾ ಗೊವರ್ಧನಗೆರಗಿ ಸಿರದಲಿ (VI, ೨೦) ಇವೇ ಮೊದಲಾದ ಕಡೆಗಳಲ್ಲಿ ವೃತ್ತನಿರ್ಬಂಧಕ್ಕಾಗಿ ಸಹಜದೀರ್ಘವನ್ನು ಹ್ರಸ್ವವಾಗಿ ಮಾಡಿದೆ (ಪೀತಾಂಬರ, ಕಲ್ಲೋಲ, ಗೋವರ್ಧನ ಇತ್ಯಾದಿ). ದ್ರೋಣನ ಸರಸಿಜಕ್ಕಭಿನಮಿಸಿ (IV, ೧) ಮುರಹರದ್ವಂದ್ವದಲಿ (VII, ೧೪), ಭೀಮಸಾದ್ರೀತನಯರಾತನ ತಾಮರಸವನು (IV, ೩೯) ಇತ್ಯಾದಿಗಳಲ್ಲಿ ಪಾದ ಅಥವಾ ಚರಣ ಪದವು ಗುಪ್ತವಾಗಿದ್ದು ಸಂದರ್ಭದಿಂದ ತಿಳಿದುಕೊಳ್ಳಬೇಕಾಗಿದೆ. ಇದಲ್ಲದೆ 'ಮೇದಿಸಿ, ಕಂಧರ, ತಂಪನ' ಗಳಿಗೆ ಪ್ರಾಸವಿಟ್ಟಿದೆ (IV, ೨೯). ಇತ್ರ, ಕಾಂತ, ಹೊತ್ತುಗಳಿಗೆ ಪ್ರಾಸ ತೋರಿಸಿದೆ. (IV. ೫೭;) ನ, ಣ ಗಳಿಗೂ (VII, ೨೭) ಕ, ಖ ಗಳಿಗೂ (VIII, ೪೭) ಪ್ರಾಸವಿಟ್ಟಿದೆ. ಈ ಹೋಲಿಕೆಯ ಪ್ರಯೋಗಗಳು ದಾಸ ಸಾಹಿತ್ಯದಲ್ಲಿ ವಿಪುಲವಾಗಿ ಬರುತ್ತವೆ. ಉದಾ: ಗೆಜ್ಜೆಯ ಕಟ್ಟಿ, ತಪ್ಪೆಜ್ಜೆಯ

ಸಿಕ್ಸುತ (ತಪ್ಪು ಹೆಜ್ಜೆ) ಶ್ರೀಪಾದರಾಯರ ಪದಗಳು, ಬೆಂಗಳೂರು ಪ್ರತಿ (೧), ಎಲ್ಲಿಗ್ಹೋಗಿ ಬಂದೆ ಹೇಳಮ್ಮ (ಸದರಿ ೪), ಭಾಡಿಗಳ್ಳೆ ಕೇಳುವದಿಲ್ಲಿ (ಪುರಂದರ-ಬೆಂ. ಪ್ರತಿ ೧, ೨೭,) ಕಪ್ಪು ಮೇಘ (ಪುರಂದರ ೧, ೨೮) ಈ ದೇಹ ಅಂಬುಗುಳ್ಳಿಯಂತೆ (ಸದರಿ ೩೧) ಇತ್ಯಾದಿ.

ಅಂತು ಶ್ರೀಪಾದರಾಯ ಪುರಂದರದಾಸರೂ, ಮಹಾಭಾರತದ ಮತ್ತು ಐರಾವತದ ಕರ್ತನಾದ ಕುಮಾರ ವ್ಯಾಸನೂ, ಒಂದೇ ಯುಗದ ಪ್ರಭಾವಕ್ಕೆ ಒಳಗಾಗಿ ವ್ಯಾಕರಣ, ಛಂದಸ್ಸು, ಪ್ರಾಸಗಳ ನಿರ್ಬಂಧಗಳನ್ನು ಸಡಿಲಿಸಿದರೆಂದು ಸಾಮಾನ್ಯವಾಗಿ ಹೇಳಬಹುದು.

ಇದಲ್ಲದೆ

ಏನು ಭಾಗ್ಯವೊ! ಬಾಳಗೊಡ್ಡದೆ ಸೊಡರು ಆಯಿತು
ಸತಿಯು ಮರಣದಲಿ ॥
(I, ೨೮)

ಬಡತನಗಳಡಸಿದರೆ ಬಂಧುಗ-
ಳೆಡಹಿ ಕಾಣರು ಮಗನೆ ಕೊಳೆಯಂ ।
ಗೊಡಸಿದಂತಲತಿ ಮನ್ನಿಸುವರ್ಕೈ ಮನ ಬಂದೀತಿಯಲಿ ॥
(I, ೨೯)

ಬಂಧುಗಳ ನಡುವಿಹರೆ ಸಿರಿ ತಾ
ಛಂದವಿದ್ದರೆ ಲೇಸು ಬಳಿಕೀ
ಲಿಂದ ಬಡತನದಿಂದಲು ಬಗೆಯದು ನಿಂಟರೆದಿಂದ ॥
(I, ೩೨)

ಇವೇ ಮೊದಲಾದ ಅನುಭವದ ಮಾತುಗಳು ನೆನಪಿನಲ್ಲಿಡತಕ್ಕವಾಗಿವೆ. ಇಲ್ಲಿ ಬರುವ ಐರಾವತದ ವರ್ಣನೆ, ದಾಸಿಯರ ವರ್ಣನೆ ಮತ್ತು ಭೋಜನವನ್ನು ವರ್ಣಿಸುವಾಗ ಹೇಳಲ್ಪಟ್ಟ ಪಕ್ವಾನ್ನಗಳ ಹೆಸರು (VIII, ೪೨ ೪೭), ಭೇರಿ, ನಿಸ್ಸಾಳ, ತಮ್ಮಟೆ, ಕಹಳೆ, ಡೋಳ್ಳು, ನಾಗರಸ, ಮೃದಂಗ, ಢಕ್ಕೆ, ಕಾಳೆ, ಹೆಗ್ಗಾಳೆ, ಕೊಂಬು, ಡಮರು ಮೊದಲಾದ ವಾದ್ಯಗಳ ನಿರೂಪಣೆ (IV, ೩೮–೩೯)- ಇಂಥವುಗಳು ಕನಕದಾಸನ ಮೋಹನತರಂಗಿಣಿಯಲ್ಲಿಯೂ ದಾಸರ ಪದಗಳಲ್ಲಿಯೂ ದಾರಾಳವಾಗಿ ದೃಷ್ಟಿಗೆ ಬೀಳುತ್ತವೆ. ವನುತೆ (ವನಿತೆ) (VII, ೨೩) ತಿಲುಕ (ತಿಲಕ) (VII, ೨೮) ದಾರು (ಯಾರು) (VIII ೨೧) ಮುಂತಾದ ಅನೇಕ ಬಳಕೆಯ ಮಾತಿನ ಪ್ರಯೋಗಗಳೂ ಆ ಯುಗದ ಪ್ರಭಾವವನ್ನು ಸೂಚಿಸುತ್ತವೆ

ಈ ಮೇಲೆ ನಿರ್ದಿಷ್ಟವಾದ ಅಂಶಗಳು ಕುಮಾರವ್ಯಾಸನ ಕಾಲದ ಲಕ್ಷಣಗಳನ್ನು ತಿಳಿಸುವಲ್ಲಿ ಸಹಕಾರಿಗಳಾಗುತ್ತವೆ.

ಐರಾವತ

ಒಂದನೆಯ ಸಂಧಿ

ಸೂಚನೆ ‖

ಇಂದ್ರನೈರಾವತವ ಧರಣಿಗೆ ।
ತಂದು ನಿಜಮಾತೆಯನು ನೋನಿಸ ।
ಲೆಂದು ಫಲ್ಗುಣ ಕೀರ್ತಿ ಪಡೆದನು ಮೂರುಲೋಕದಲಿ ‖ ಪದ ‖

। ಭಾಮಿನೀ ಷಟ್ಪದಿ ‖

ಕೇಳು ಜನಮೇಜಯ ಧರಿತ್ರೀ ।
ಪಾಲ ಹಸ್ತಿನಪುರಕೆ ಮುನಿಗಳ ।
ನಾಳಿ ವೇದವ್ಯಾಸ ಬಿಜಯಂಗೈದನೊಂದು ದಿನ ‖
ಕೇಳಿದನು ಧೃತರಾಷ್ಟ್ರ ಭೀಷ್ಮಗೆ ।
ಹೇಳಿದರು ಋಷಿ ಬರವ ಹರುಷದಿ ।
ಲೀಲೆಯಿಂದಿದಿರ್ಗೊಂಡು ತಂದರು ರಾಜಮಂದಿರಕೆ ‖ ೧ ‖

ಅರಮನೆಗೆ ನಡೆತಂದ ಋಷಿವರ ।
ಧರಣಿಪತಿ ಯಿದಿರಾಗಿ ಬಂದನು ।
ದರುಶನವ ಮಾಡಿದನು ಪಾದಕ್ಕೆರಗಿ ಭಕುತಿಯಲಿ ‖
ಅರಸಿ ಕಾಣಿಕೆ ಯಿಕ್ಕಿ ಚರಣಾಂ ।
ಬುರುಹಕೆರಗಿದಡಾ ಮುನೀಶ್ವರ ।
ಹರಸಿ ಹಿಡಿದೆತ್ತಿದನು ಗಾಂಧಾರಿಯನು ಮಹಿಸತಿಯ ‖ ೨ ‖

ಬಂದ ವೇದವ್ಯಾಸಗಾ ಸಭೆ ।
ನಿಂದು ಕರಗಳ ಮುಗಿದು ಹರುಷದೊ ।
ಳಂದು ಬಿಜಯಂಗೈಸಿ ತಂದರು ಸಿಂಹಪೀಠಕ್ಕೆ ‖

ಸಂದು ಮಧುಪರ್ಕಾದಿಗಳ ಆ ।
ನಂದದಲಿ ರಚಿಸಿದರು ಮುನಿಪತಿ ।
ಯಂಧನೃಪ ಗಾಂಧಾರಿಯುರ ಸುಕ್ಷೇಮ ಬೆಸಗೊಂಡ ॥ ೩ ॥

ದೇವ ನಿಮ್ಮಡಿಗಳ ಕೃಪೆಗಳಿಂ ।
ನಾವು ಸುಕ್ಷೇಮಿಗಳು ಯಿಲ್ಲಿಗೆ ।
ನೀವು ಬಿಜಯಂಗೈದು ನಮ್ಮ ಜಡಾತ್ಮ ದೇಹಿಗಳ ॥
ಪಾವನವ ಮಾಡಿದಿರಿ ಮುನಿಪತಿ ।
ನಾವು ಸುಕೃತಿಗಳೆಂದು ನಿಮ್ಮಯ ।
ಜೀವ ನಿಮ್ಮಾಧೀನ ಚಿತ್ತೈಸೆಂದನಂಧನೃಪ ॥ ೪ ॥

ಧರಣಿಪಾಲನ ನುಡಿಗೆ ಯಾ ಮುನಿ ।
ವರನು ಮೆಚ್ಚಿ ದೆನೆಲೆ ನೃಪತಿ ನಿ ।
ನ್ನರಸಿಗರುಹೋ ಬಂದೈರಾವತವ ನೋಂಪಿಯನು ॥
ಹರನ ಅರ್ಚನೆ ನೋಂಪಿ ಪಾರ್ವತಿ ।
ಯುರಸಿಯುತ್ಸವದಾನದಲಿ ಭೂ ।
ಸುರರ ದಣಿಸುವದೆಂದು ವೇದವ್ಯಾಸ ಮುನಿ ನುಡಿದ ॥ ೫ ॥

ತರುಣಿ ನಿನ್ನಯ ಸುತರ ಕೈಯ್ಯಲಿ ।
ತರಿಸಿದಾ ಮೃತ್ತಿಕೆಯಲಿ ಸುರ ।
ಕರಿಯ ಹೋಲುವ ನೋಂತು ಭೂಸುರ ದೇವ ಸಂತತಿಯ ॥
ಪರಿಪರಿಯ ದಾನಂಗಳಲಿ ಸ ।
ತ್ಕರಿಸಿ ಸುಖಿಯಾಗೆನುತಲಾ ಮುನಿ ।
ವರನು ತನ್ನಾಶ್ರಮಕೆ ತೆರಳಿದ ಬಾದರಾಯಣನು ॥ ೬ ॥

ಅರಸೆ ಕೇಳೈ ಸುಬಲನಂದನೆ ।
ಕರೆಸಿದರೆ ನಿಜಸುತರು ಬಂದರು ।
ಕರವ ಮುಗಿದರು ತಾಯೆ ಬೆಸನೇನೆಂದೆನಲು ನಗುತ ॥

ಕರಿಯ ನೋಂಪಿಗೆ ತನುಜ(ರ)ರು ನೀವು ।
ತರಲಿಬೇಕೆರೆಮಣ್ಣನೆಂದರೆ ।
ಹರಿಹರಿದು ತಂದೊಟ್ಟಿದರು ವೃತ್ತಿಕೆಯ ಗಿರಿಯಂತೆ ॥ ೭ ॥

ಬಂದರಾಗಳೆ ಚಿತ್ರಿ(ತ್ರ)ಕರು ಕರಿ ।
ಯಂದವಿಟ್ಟರು ಬಣ್ಣ ಬರಹಗ ।
ಳಿಂದ ಚಿತ್ರಿಸಿ ರಚಿಸಿದೈರಾವತದ ಹೋಲಿಕೆಗೆ ॥
ತಂದು ಹೊಂಬಟ್ಟೆಗಳ ಹೊಮ್ಮಿಣಿ ।
ಯಿಂದ ಮೆರೆದಿಹ ಪಂಚಘಂಟೆಗ ।
ಳಿಂದ ಐರಾವತಕೆ ಸರಿಮಿಗಿಲೆಂದುವಖಿಳಜನ ॥ ೮ ॥

ಎತ್ತಿ ಬೀಸಿದ ಗುಳದ ಕನಕದ ।
ಕೆತ್ತಿಸಿದ ನೆರೆ ಬಿಗಿದ ರಂಚಿಯ ।
ಬಿತ್ತರದ ಲೋವಿಗಳ ನಾನಾ ಚಿತ್ರ ಬಂಧಗಳ ॥
ಹತ್ತು ಸಾವಿರ ಸಡಕು ಆನೆಯ ।
ಸುತ್ತ ಬಿಗಿದರು ಹೊನ್ನರನ್ನದ ।
ಜಿತ್ತಿಗೆಗಳಿಂದಡರಿದಂಕುಶದಿಂದ ಮಾವುತರು ॥ ೯ ॥

ಬರಸಿದೈರಾವತಕೆ ಸುರಪನ ।
ಕರಿಗೆ ವೆಗ್ಗಳವಾಯ್ತು ರಾಯನ ।
ವರಸತಿಯು ಬರಹೇಳು ಹರುಷದಿ ನೋಡಲೀಗೆಂದು ।
ಕುರುನೃಪಾಲಕ ಚರರ ಕಳುಹಲು ।
ಭರದಿ ಬಂದರು ದೇವಿಯಿದಿರಲಿ ।
ಕರವ ಮುಗಿದಿಂತೆಂದು ಬಿನ್ನೈಸಿದರು ವಿನಯದಲಿ ॥ ೧೦ ॥

ದೇವಿ ಚಿತ್ರೈಸುವದು ರಚಿಸಿದ ।
ದೇವಗಜ ಚೆಲುವಿಕೆಯ ಪೊಗಳಲು ।
ದೇವತರಿಗಳವಲ್ಲ ಬಣ್ಣಿಸಲೀಗಲೆಮ್ಮಳವೆ ॥

ದೇವತೀಗಳಿಗಹುದೆ ಘನಪರಿ ।
ದೋವಿಜನವಳಿಗಿಂಬು ನೆರೆದದೆ ।
ನೀವು ಬಿಜಯಂಗೈವುದೆನೆ ನಗುತೆದ್ದಳಬುಜಾಕ್ಷಿ ॥ ೧೧ ॥

ಮಿಂದು ದೇವಾಂಗವನು ವುಟ್ಟಳು ।
ಗಂಧಗಳ ಅನುಲೇಪನಾದಿಯ ।
ಚಂದ್ರಮುಖಿ ಸರ್ವಾಂಗ ಭರಣದ ತೊಡಗೆಗಳ ತೊಟ್ಟು ॥
ಹಿಂದು ಮುಂದಿಕ್ಕೆಲದ ಸಾರಿಯು ।
ಛಂದವೈತರೆ ನಡುವೆ ತಾ ನೊ ।
ನ್ನಂದಣವನೇರಿದಳು ಸುರಕರಿಯುಡಿಗೆ ಗಾಂಧಾರಿ ॥ ೧೨ ॥

ಸುರತ ಮನಸಿಜನೊಲವೊ ಭೂಭುಜ ।
ಕರಿಯು ಮದ ಮೇಣಾವ ನೋಳ್ಪರ ।
ಹೃದಯದಾ ಕೂರಲಗೊ[1] ಮದನನ ಕ್ರೀಡೆಸಾರಸವೊ ॥
ಪರಮ ಸೌಭಾಗ್ಯದ ದಯಾಂಬುಧಿ ।
ತೆರೆಗಳೋ ಧೃತರಾಷ್ಟ್ರ ಭೂಮೀ ।
ಶ್ವರನ ರಾಣಿಯೊ ಕೆಳದಿಯರೊ ಭೂಪಾಲ ಕೇಳೆಂದ ॥ ೧೩ ॥

ಆವಿಗಳ ಅಂಚೆಗಳ ಕದಳಿಯ ।
ಭಾವದಿಂದಿರೆ ಜಾನುಜಂಘೆಯು ।
ನಾವ ಬಣ್ಣಿಸಬಲ್ಲನೈ ಕಂಬನಿಯು ಬಿಂಬವನು ॥
ಆ ವಿರಾಜಿಪ ಕಮಲನಾಭಿಯ ।
ಭಾವಿಸಲ್ಕರಿದೆನಿಪ ಭಾಷೆಯು ।
ಭಾವಿಕೆಯರೆಡೆತಂದರೈ ಮಾನುನಿಯ ಬಳಿವಿಡಿದು ॥ ೧೪ ॥

ನುಡಿಗೆ ಗಿಳಿ ಹುದುಗಿದವು ಸಖಿಯರ ।
ಮುಡಿಗೆ ನವಿಲೆರಗಿದವು ಮಿಗೆ ಮೆ ।
ಲ್ನಡಿಗೆ ನಡೆವ ರವಕ್ಕೆ ಕುಣಿದವು ಹಂಸವಿಂಡುಗಳು ॥

1 ಪ್ರಾಸಕ್ಕಾಗಿ 'ಕೂರಲಗೊ ಹೃದಯದಾ' ಎಂದು ಓದಬಹುದು.

ಉಡುಪತಿಯ ವದನವನು ತುಡುಕಲು ।
ತೊಡವಿದವು ನೋಟಕೆ ಚಕೋರವು ।
ಇಡಿಕಿ ತುಂಬಿಗಳಿಂಬುಗೊಟ್ಟವು ದೇಹಪರಿಮಳಕೆ ॥ ೧೫ ॥

ಕಳಸ ಕುಚಗಳ ಹೊಳವ ಪವಳದ ।
ಲಲಿತ ಬಾಹುದ್ವಯವ ರೇಖಾ ।
ವಳಿಯ ನಡವಳಿಯೆಲ್ಲ ನೋಡುತ ನೊಂದು ಕೊಂಕುಳದ ॥
ಎಲ್ಲ ಕುಂಭಸ್ಥಳದ ಕಳಸದ ।
ಸಿಲ್ಪಸುತ ದರ್ಪಣದ ಸತಿಯರು ।
ಅಲ್ಲಿ ಸೆಂಖಿ(ಶಂಕೆ)ಯಲ್ಲೈದಿದರು ನರನಾಥ ಕೇಳೆಂದ ॥ ೧೬ ॥

ಹಿಡಿದ ಮುತ್ತಿನ ಛತ್ರ ಚಾಮರ ।
ಎಡಬಲದಲಾಡಿದವು ಸತಿಯರ ।
ಗಡಣ ಪಾಟಕಕೋಟಿ ಕೈವಾರಿಗಳ ಕಳಕಳದ ॥
ಹೊಡೆವ ನಾನಾ ವಾದ್ಯ ರಭಸದ ।
ಬಿಡದೆ ಚೀರುವ ಕಹಳೆ ರಾಯನ ।
ಮಡದಿ ಸುರಕರಿಯಡಿಗೆ ಬಂದಳು ನಗುತ ಗಾಂಧಾರಿ ॥ ೧೭ ॥

ಸುರಕರಿಯ ಕಾಣುತ್ತ ಪಂಕಜ ।
ನರಹಮುಖಿ ದಂಡಿಗೆಯನಿಳಿದಳು ।
ಹರುಷದಿಂ ಮೈಯಿಕ್ಕಿ ಕಾಣಿಕೆಯಿಕ್ಕಿ ಪೊಡಮಟ್ಟು ॥
ತರಿಸಿ ಗಂಧಾಕ್ಷತೆಯ ಪುಷ್ಪವ ।
ಚರಣಕರ್ಪಿಸಿ ಧೂಪದೀಪಗ ।
ಳರಸೆ ಕೇಳರ್ಚಿಸಿದಳೈರಾವತಕೆ ಗಾಂಧಾರಿ ॥ ೧೮ ॥

ಪರಿಪರಿಯ ಫಲವಸ್ತು ಕಾರದಿ ।
ಸುರಿದ ನೆನಗಡಲೆಗಳ ರಾಶಿಯ ।
ಮೊರನ ಬಿಚ್ಚೋಲೆಗಳ ಬಣ್ಣದ ಹಂಗುನೂಲುಗಳ ॥

ಗಿರಿಗಳೇ ಫಲವಾದವಾ ಸುರ ।
ಕರಿಯು ನೋಂಪಿಯು ದಾನವೆಂದರೆ ।
ನೆರೆದದ(ರ)ಗಣಿತ ಭೂಮಿಯುಮುದುರು ರಾಯ ಕೇಳೆಂದ ॥ ೧೯ ॥

ಕರೆಕರೆದು ಸುವಾಸಿನಿಯರಿಗೆ ।
ಹರುಷದಿಂ ಬಾಗಿಣವ ಕೊಟ್ಟಳು ।
ಧರಣಿಯಮರರ ದಣಿಸಿದಳು ಗೋಹಿರಣ್ಯದಾನದಲಿ ॥
ಸಿರಿಯು ಮುದದಲಿ ಕೊಂತಿದೇವಿಯು ।
ಕರಿಸ ಮಾಡಿದಳು ಸುಬಲನಂದನೆ ।
ಕರಿಯು ನೋತಳು ತಿರಿಗಿ ಹೊಕ್ಕಳು ತನ್ನ ಮಂದಿರವ ॥ ೨೦ ॥

ಸುರಕರಿಯು ನೋಸುವರೆ ತನ್ನನು ।
ಕರೆಸುವಳು ಗಾಂಧಾರಿಯೆನುತಲಿ ।
ಹರುಷದಿಂದಲಿ ಹೊರಗೆ ನೋಡುತಲಿರ್ದಳಾ ಕೊಂತಿ ॥
ಹರದು ಬಹ ನೋಟಕ ಜನಂಗಳ ।
ಕರೆದು ಕೇಳಿದರೆಂದರಾಗಳೆ ।
ಅರಸಿ ನೋತಳು ತಿರಿಗಿ ಹೊಕ್ಕಳು ತನ್ನ ಮಂದಿರವ ॥ ೨೧ ॥

ಅಂದ ಮಾತನು ಕೇಳಿ ಮನದೊಳು ।
ನೊಂದು ಬಿಸುಸುಯಿವುತ್ತ ಸಿರಿಯು ।
ಶ್ರೀಮದು ಯಿಷ್ಟನು ಕರಿಸ ಮಾಡಿದಳು ದೇವಿಗಾಂಧಾರಿ ॥
ಬೆಂದುದೀ ಬಡತನವು ರಾಯನ ।
ಹಿಂದೆ ಹೋಗದೆ ವುಳಿವುದೇನಕ ।
ಟೆಂದು ದುಗುಡವ ತಾಳಿ ಮನೆಯಲಿ ಮಲಗಿದಳು ಕೊಂತಿ ॥ ೨೨ ॥

ಅನುಜರೆಲ್ಲರ ಕೂಡಿಕೊಂಡೆನು ।
ತನುಜ ಬಂದನು ಮನೆಗೆ ಮಾತೆಗೆ ।
ವಿನಯದಿಂದೆರಗಿದನು ಚರಣಕೆ ದುಗುಡವೇಕೆಂದು ॥

ಅನಿಲಸುತ ನಾ ಹಸಿದೆ ನೀನೇ |
ಳೆನುತ ಮುದ್ದಿಸುತಿರುತ ತನ್ನಯ |
ಜನನಿಯಿರವನು ಕಂಡು ಮರುಗಿದರರಸೆ ಕೇಳೆಂದ ॥ ೨೩ ॥

ಬಿಲ್ಲು ಮೊದಲಾದಖಿಳ ಕೈದುಗ |
ಳೆಲ್ಲವನು ತ್ರಯ ಮಾಡಿ ಗುರುವಿಂ |
ಗಲ್ಲಿ ಚರಣದೊಳೆರಗಿ ಬೀಳ್ಕೊಂಡಮಳ ಹರುಷದಲಿ ॥
ಬಲ್ಲಿದನು ನಡೆತರಲು ಅಹಿತರು |
ತಲ್ಲಣಿಸಿದರು ಧರೆಯೊಳಪ್ರತಿ |
ಮಲ್ಲ ಫಲ್ಗುಣ ಬಂದು ಹೊಕ್ಕನು ತನ್ನ ಮಂದಿರವ ॥ ೨೪ ॥

ಬಂದು ಫಲ್ಗುಣ ತಾಯ ಚರಣ |
ದ್ವಂದ್ವದಲಿ ತಾನೆರಗಿ ದುಗುಡವು |
ಬಂದ ಪರಿಯನು ಹೇಳು ನಿಮ್ಮಯ ಮನದ ಬಯಕೆಯನು ॥
ತಂದಿಪ್ಪೆ ಶಿವನೊಡನೆ ಕಾದಿಯೆ |
ಹಿಂದುಗಳೆದರೆ ನಿಮ್ಮ ಬಸುರಿಲಿ |
ಬಂದವನು ತಾನಲ್ಲ ಪಾಂಡುವಿನಾಣೆ ನಿಮ್ಮಾಣೆ ॥ ೨೫ ॥

ಜನನಿ ನಿಮ್ಮಯ ಮನದ ಬಯಕೆಯ |
ದನುಜರಿಪು ವೈಕುಂಠದಲ್ಲಿರೆ |
ವನಜಸಂಭವ ಬ್ರಹ್ಮನಾ ಮನೆಯಲ್ಲಿ ತಾನಿರಲು ॥
ಅನುಮಿಷಾಧಿಪ ಯಿಂದ್ರನಲ್ಲಿರೆ |
ನಿನಗೆ ತಂದಾನೀಯದಿರ್ದಡೆ |
ಜನಪ ಧರ್ಮಜನಾಣೆ ನಿಮ್ಮಾಣೆಂದನಾ ಪಾರ್ಥ ॥ ೨೬ ॥

ಮುಸುಡು ದುಗುಡವ ಬಿಸುಡು ಚಿಂತೆಯ |
ನುಸುರೆನುತ ನಿಜಮಾತೆಯಂಘ್ರಿಗೆ |
ನೊಸಲ ಚಾಚಿದ ಪಾರ್ಥ ಬಿನ್ನಹ ಮಾಡಿದನು ಬಳಿಕ ॥

ಹೆಸರಿಡುವರಾರೀಕೆ ಯೇಳಲ ।
ವಸರಿಸುವ ಪರಿಕಂಗಳಿಂದಲಿ ।
ಶಶಿವದನೆ ತಾ ಕೊಂತಿ ನುಡಿದಳು ನಿಜಕುಮಾರಂಗೆ ॥ ೨೭ ॥

ಹೇಳಿ ಮಾಡುವದೇನು ಫಲ್ಗುಣ ।
ಬಾಲಕರು ನೀವೆಮ್ಮ ಭಾಗ್ಯವು ।
ಘಾಳಿಗೊಡ್ಡಿದ ಸೊಡರು ಆಯಿತು ಪತಿಯ ಮರಣದಲಿ ॥
ಹೇಳಲೇನದ ಧರೆಯು ಕೌರವ ।
ರಾಳುತ್ತಿದರೆ ಅವರ ಹಂಗಿನ ।
ಕೂಳಿನಲಿ ಜೆಂದೊಡಲ ಹೊರುವಿರಿಯೆಂದಳಿಂದುಮುಖಿ ॥ ೨೮ ॥

ಬಡತನಗಳಡಸಿದರೆ ಬಂಧುಗ ।
ಳಿಡಹಿ ಕಾಣವು ಮಗನೆ ಹೊಲೆಯಂ ।
ಗೊಡವಿಯಿಂದಲತಿ ಮನ್ನಿಸುವರ್ಯೆ ಮಾನುಜರೀತಿಯಲಿ ॥
ಬಡತನವು ಬಂದಲ್ಲಿ ಹಂಗಿನ ।
ವೊಡಲ ಹೊರುವದಕಿಂತ ಪ್ರಾಣವ ।
ಬಿಡುವದೇ ಲೇಸೆಂದು ಕಂಬನಿದುಂಬಿದಳು ಕೊಂತಿ ॥ ೨೯ ॥

ಯಾತಕೀ ಬಹು ಚಿಂತೆ ನಿಮಗೆಲೆ ।
ಮಾತೆ ನಿಮ್ಮಡಿಗಿಂದು ಬಯಸಿದ ।
ಭೂತನಾಥನ ಮನಿಯಲಿದ್ದಡೆ ತಂದು ನಿಮಗೀವೆ ॥
ಭೀತಿ ಯಾತಕೆ ನಿಮ್ಮ ಚಿತ್ತದೊ ।
ಳಾತ ಕಾರ್ಯವ ಬೆಸಸೆನಲು ನಿಜ ।
ಮಾತೆಯಂಘ್ರಿಯೊಳೆರಗೆ ಬಳಿಕಿಂತೆಂದಳಾ ಕೊಂತಿ ॥ ೩೦ ॥

ಬಿಕ್ಕಿ ಬಿರಿಬಿರಿದಳುತ ಕಣ್ಣೀ ।
ರುಕ್ಕಿ ಹರಿದವು ಮೋರೆದಪ್ಪಿಯೆ ।
ಕಕ್ಕುಲತೆ ಯೆನಗಾಯ್ತು ಜೀವದ ಆಸೆ ನೆರೆಬಿತ್ತು ॥

ವತ್ತ ಕಂಬನಿಯಿಂದ ವುದಕವು ।
ಯಿತ್ತ ಸಾಗರ ಕಾಲ್ವೆದೆಗೆದವು ।
ಚಿತ್ತೈಸು ನೃಪ ಕೊಂತಿಯುಳಲನು ಪೊಗಳೆ [ಯೆ*] ನಗರಿದು ॥೩೧॥

ಬಂಧುಗಳ ನಡುವಿಹರೆ ಸಿರಿ ತಾ ।
ಭಂಧವಿದ್ದರೆ ಲೇಸು ಬಳಿಕೀ ।
ಲಿಂದ ಬಡತನವಿರಲು ಬಗೆಯರು ನೆಂಟರದರಿಂದ ॥

ನೊಂದು ಕರಿಕರಿಗುಂಪಲೀತಕೆ ।
ಕಂದ ನಿನ್ನಯು ತಂದೆ ಮಾಡಿದ ।
ವೃಂದದೊಳು ತೊಳಗಿಹುದು ಯೆನುತಲಿ ಕೊಂತಿ ಮರುಗಿದಳು॥೩೨॥

ಪುತ್ರರುಗಳುಂಟೆಂದು ನಿಮುಷಕೆ ।
ಮೃತ್ತಿಕೆಯ ಬೆಟ್ಟವನು ವೊಟ್ಟಲು ।
ಚಿತ್ರಿಕರು ರಚಿಸಿದರು ಐರಾವತದಹೋಲಿಕೆಗೆ ॥

ಪೃಥ್ವಿ ನೆರೆ ನೋಡುತ್ತ ರಾಯನ ।
ಪತ್ನಿ ಕರಸದೆ ಯೆನ್ನ ನೋಂಪಿಗೆ ।
ಪುತ್ರ ನಮ್ಮದು ಬದುಕೆ ಹೇಳೆಂದಳಳಲಿದಳು ಕೊಂತಿ ॥ ೩೩ ॥

ಹರುಷದಲಿ ಪುತ್ರರಲಿ ಬಾ(ಬ)ಹಳ್ಳಿ ।
ಸ್ವರಿಯುದಲಿ ತನಗಿರಲು ತಾ ಸುರ ।
ಕರಿಯ ನೋಂತಳು ಸುಬಲನಂದನೆ ಕರಸದೆಮ್ಮುವನು ॥

ಕರಬಡವರಾವೆಂದು ನಮ್ಮನು ।
ಸರಕು ಮಾಡಳು ಬೆಂದ ವೊಡಲನು ।
ಹೊರೆಯಬೇಕೇ ಪಾರ್ಥ ಹೇಳೆಂದಳಳಿದಳು ಕೊಂತಿ ॥ ೩೪ ॥

ಸರಿಯೆನಿಸಿ ನೋಡುವರೆ ಮಕ್ಕಳು ।
ತರುಳರೈವರು ನರಪತಿಯು ಸುರ ।
ಪುರಕೆ ತಾನ್ಯೆದಿದನು ಸಿರಿ ತಾನವರ ಸೇರಿದಳು ॥

ಸಿರಿಯ ಮದದಲಿ ಮುಂದುಗಾಣದೆ ।
ಕಿರಿದೆನಿಸಿ ಬದುಕುವದು ದೈನ್ಯದಿ ।
ಧರೆಯೊಳಗೆ ಯಿರಬೇಕೆ ಹೇಳೆಂದಳಲಿದಳು ಕೊಂತಿ ॥ ೩೫ ॥

ಕಡುಗಲಿಯು ಕಾನನದೊಳವನಿಪ ।
ಮಡಿದನಾತನ ಬಳಿಯಲೆನ್ನಯ ।
ವೊಡಲನಗ್ನಿಗೆ ಕೊಡುವೆ ನಿಮಗಾರೊಡೆಯರಿಲ್ಲೆಂದು ॥
ಪೊಡವಿಯೊಳು ತಾ ಬಾ(ಬ)ಹಳ ಬಡತನ ।
ವಡಸಿದರೆ ಧರೆಗಿಂದಲೇ ತಾ ।
ಅಡವಿ ಕರಲೇಸೆಂದು ಕಂಬನಿದುಂಬಿದಳು ಕೊಂತಿ ॥ ೩೬ ॥

ಎನಲು ಕೊಂತಿಯು ಮಾತ ಕೇಳುತ ।
ಮನದೊಳಗೆ ಘುಡಿಘುಡಿಸುತರ್ಜುನ ।
ಕನಲಿ ಚರಣದೊಳೆರಗಿ ಕಣ್ಣೀರ್ದೊರೆದು ಸೆರಗಿನಲಿ ॥
ಅನುವಿಸುವರು ಮಾನವರು ಮೆಚ್ಚಲು ।
ಜನನಿ ನೋಯಿಸದಿರ್ದೆನಾದೊಡೆ ।
ಧನುವ ಹಿಡಿಯೆನು ಧರ್ಮರಾಯನ ಪಾದದಾಣೆಂದ ॥ ೩೭ ॥

ಸುರಕರಿಯು ಹೋಲಿಕೆಗೆ ಕೌರುವ ।
ರೆರೆಯು ಮಣ್ಣಲಿ ಮಾಡಿ ನೋಂತರೆ ।
ಧರೆಯು ಪುರಜನವೆಲ್ಲ ನೋಡಲಿದಾನ ಘನವೆಂದ ॥
ಸುರಪನೈರಾವತವನಾಸುರ ।
ತರುವನಾಸುರಧೇನುವನು ನಿ ।
ಮ್ಮರಮನೆಗೆ ತಹೆನೆಂದು ಶಸ್ತ್ರದ ಸಾಲೆಗೈತಂದ ॥ ೩೮ ॥

ಹಿಂದೆ ರಾವಣ ತನ್ನ ಜನನಿಗೆ ।
ಇಂದುಮೌಳಿಯ ಪುರವನೆಲ್ಲವ ।
ತಂದ ಲಂಕೆಗೆ ನೋನಲ್ಕೆ ತಾ ಸಕಲ ಜಗವರಿಯೆ ॥

ಇಂದು ನಿಮ್ಮಯ ನೋಂಪಿಗೋಸುಗ ।
ಇಂದ್ರನೈರಾವತವನೆಲ್ಲವ ।
ತಂದು ಕೊಡುವೆನು ತಾಯೆ ನೀ ನೋಡೆಂದನಾ ಪಾರ್ಥ ॥ ೩೯ ॥

ಬಂದು ಹೊಕ್ಕನು ಶಸ್ತ್ರಶಾಲೆಯ ।
ನಂದದೀಪದ ಬೆಳಗಿನಿಂದಲಿ ।
ಗಂಧಅಕ್ಷತೆ ಧೂಪದೀಪಗಳಿಂದಲರ್ಚಿಸಿದ ॥
ಛಂದದಿಂದಲಿ ರತ್ನದೊಡಿಗೆಗ ।
ಳಂದ ಮೆರೆವ ಮಹೇಶ್ವರಿಗೆ ಸಲ ।
ಹೆಂದು ಮೈಯಿಕ್ಕಿದನು ಚಂಡಿಕದೇವಿಗರ್ಜುನನು ॥ ೪೦ ॥

ಬಿಲ್ಲ ತೆಗೆದನು ಸಮರ ಸಾಹಸ ।
ಮಲ್ಲ ಗವಸಣಿಕೆಯನುಗಿದು ಕರ ।
ಪಲ್ಲವನಿಗೆ ಚಾಚಿದನು ವೃಂದಾಸನಾರೈದು ॥
ಬಲ್ಲಿದಮರಾಧಿಪನ ಲೋಕವ ।
ನೆಲ್ಲವನು ತಹೆನೆನುತ ಮೂಡಿಗೆ ।
ಯಲ್ಲಿ ದಿವ್ಯಾಸ್ತ್ರವನು ತೆಗೆದನು ನಗುತ ಕಲಿಪಾರ್ಥ ॥ ೪೧ ॥

ಬರೆಸಿದನು ವೋಲೆಗಳನಮರೇ ।
ಶ್ವರಗೆ ಫಲ್ಗುಣ ರಿಪುಕುಲಾಂತಕ ।
ಶರಧನುವನಾರೈದು ಕೊಪ್ಪಿಗೆ ತೊಡಚಿದನು ತಿರುವ ।
ಬರಸೆಳೆದನಾ ಕರ್ಣಪೂರಕೆ ।
ಯಿಂದಡೆ ಝುಯಿಪಡಿಯುಲಿ ಮಹಾಧ್ವನಿ ।
ಕರದಂದಡಕಿಲು ಜೆಗಳ ಜೋಡಿಗಳರಸೆ ಕೇಳೆಂದ ॥ ೪೨ ॥

ನೋಡಿದಳು ಬೆರಗಾಗಿ ಕಂದನ ।
ಬೇಡಿಕೊಂಡಳು ಮಗನೆ ದಿವಿಜರು ।
ಕೇಡಿಗರು ಈ ಶರಳು ಸುರಪನ ಸಭೆಯನೈದುವದೆ ॥

ಆಡಿ ಹುಸಿದರೆ ಯೆಚ್ಚು ತಪ್ಪಲು ।
ಮೋಡಿಗೊಂಬುದು ಲೋಕವೆಮ್ಮನು ।
ಗೂಡವಿಕೆ ಬೇಡೆನುತ ಕೊಂತಿಗೆ ಪಾರ್ಥನಿಂತೆಂದ ॥ ೪೩ ॥

ಜನನಿ ಚಿತ್ತೈಸೆಚ್ಚ ಬಾಣವು ।
ಅನಿಮಿಷನ ಸಭೆಗೈಯದಿರ್ದಡೆ ।
ಘನಪರಾಕ್ರಮತನವನಾಡಿದ ನುಡಿಗೆ ಕವಲಾಗೆ ॥
ಧನುವ ಹಿಡಿಯೆನು ಯಿಂದ್ರನೇರುವ ।
ನಾ(ಆ)ನೆಯನು ಧರೆಗಿಳಿಸಿ ನಿನಗೆ ।
ಸ್ನೋನದಿರ್ದಡೆ ಧರ್ಮರಾಯನ ಪಾದದಾಣೆಂದ ॥ ೪೪ ॥

ತಿರುವಿಗಂಬನು ತೊಡಿಸಿ ಗರುಡಿಯು ।
ಗುರುವ ನೆನೆದನು ಧರ್ಮರಾಯನ ।
ಚರಣದಲಿ ತಾನೆರಗಿ ಜನನಿಯು ಹರಕೆಗಳ ಕೊಳುತ ॥
ಮರುತಜಂಗಭಿನಮಿಸಿ ಬಾಣವ ।
ಬರಸೆಳೆದನಾ ಕರ್ಣಪೂರಕೆ ।
ಪರಬಲಾಂತಕ ಪಾರ್ಥನೆಚ್ಚನು ಸುರಪತಿಯ ಸಭೆಗೆ ॥ ೪೫ ॥

ಕಡುಗಲಿಯು ನರನೆಚ್ಚ ಬಾಣವು ।
ತಡೆಯದೇ ತಂದಿರ್ದ ಸಭೆಯಲಿ ।
ನಡುವೆ ರತ್ನದ ಕಂಬವನು ತಾನೊಡೆದು ಕೀಲಿಸಿತು ॥
ಸಿಡಿಲು ಹೊಡೆದಂತಾಗಲಮರರು ।
ಕಡೆಗೆ ಝುಲ್ಲನೆ, ಚೆಲ್ಲಿ ಪೋಡಿತು ।
ನಡುವೆ ತಾ ಕುಳಿತಿರ್ದ ಸುರಪತಿ ನೋಡಿದನು ಪರಿಯ ॥ ೪೬ ॥

ಬಿಟ್ಟು ಪೋದಿತು ಸುರರು ಕಂಬವ ।
ನಟ್ಟ ಬಾಣವ ಕಂಡು ಗರಿಯಲಿ ।
ಕಟ್ಟಿದೋಲೆಯದಾವ ಲೋಕದ ವೀರನೆಸುಗೆಗಳೊ ॥

ಕೆಟ್ಟಿವಾವೆಂತೆಂದು ವೋಲೆಯ ।
ಬಿಟ್ಟು ತಂದರು ಬಹಳ ದುಗುಡದಿ ।
ಕೊಟ್ಟರಾಗಳೆ ಕರದು ಕರಣಿಕಪತಿಗೆ ಅಮರೇಂದ್ರ ॥ ೪೭ ॥

ನಿಲ್ಲು ಕಳಕಳವೇಕೆ ಹೋ ಯೆಂ ।
ದಲ್ಲಿ ಕಂಚುಕಿ ನಿಕರ ಕರದೊಳು ।
ಅಲ್ಲಿ ಆ ಸುರಸ್ಥಾನ ಮೌನದೊಳಿರಲು ಕರುಣಿ(ಕರಣಿ)ಪತಿ ॥
ನಿಲ್ಲದರ್ಜುನನೋಲೆಗಳನೇ ।
ಸೊಲ್ಲುಗಳನಳವಡಿಸಿ ರಂಭೆಯ ।
ವಲ್ಲಭನೆ ಚಿತ್ತೈಸು ಯೆನೆ ಲಾಲಿಸಿದನಮರೇಂದ್ರ ॥ ೪೮ ॥

ಸ್ವಸ್ತಿ ಶ್ರೀಮತು ದಿವಿಜರಾಯ ಸ ।
ಮಸ್ತ ಗುಣ ಸಂಪೂರ್ಣ ಸುರಪತಿ ।
ಹಸ್ತಿವಾಹನ ವಸುಧಿಗೀಶಯ ನಿಮ್ಮ ಮಗ ಪಾರ್ಥ ॥
ಹಸ್ತಿನಾಪುರದರಸು ಅರ್ಜುನ ।
ಪ್ರಸ್ತು [ತ*] ದಿ ಕಳುಹಿಸಿದ ವೋಲೆಯ ।
ವಿಸ್ತರಿಸಿ ಕೇಳುವುದು ಕೊಂತಿ [ಯ*] ಸುತನ ಬಿನ್ನಪವ ॥ ೪೯ ॥

ಗಂಡುಗಲಿ ರಿಪುಕುಮುದವನಮಾ ॥
ರ್ತಂಡ ಫಲ್ಗುಣ ವೈರಿನುದಗಜ ।
ಗಂಡಕೇಸರಿ ಚಾಪವಿದ್ಯ ಬಹಳ ಲೋಚನನು ॥
ಚಂಡಭುಜಬಲ ಮೂರು ಲೋಕದ ।
ಗಂಡನೋಲೆಯ ಹದನ ರಂಭೆಯ ।
ಗಂಡ ಚಿತ್ತೈಸುವದು ಕೊಂತಿಯ ಮಗನ[1] ಬಿನ್ನಪವ ॥ ೫೦ ॥

ಧರಣಿಪತಿ ಪಾಂಡುವಿನ ರಾಯನ ।
ಅರಸಿ ಕೊಂತೀದೇವಿ ಮಾತೆಗೆ ।
ಹಿರಿದು ನೋಂಪಿಗಳುಂಟು ಸುರಪತಿ ನಿಮ್ಮ ಲೋಕದಲಿ ॥

1 ಕ. ಕೊಂತೀಸುತನ

ತರಿಸಿ ನಾನಾ ವಸ್ತುಗಳನೀ ।
ಧರೆಗೆ ಕಳುಹಲು ನೋತ ಬಳಿಕವ ।
ನಿರದೆ ದಿನವೆರಡಕ್ಕೆ ಕಳುಹುವೆನೆಂದನಾ ಪಾರ್ಥ ॥ ೫೧ ॥

ಕಳುಹುವದು ಐರಾವತವ ನೀ ।
ನಿಳೆಗಿಳುಹು ಸುರಧೇನುವನು ಸುರ ।
ಕಳಸವಂಮೃತ (ವಮೃತವ) ಸಹಿತ ವಜ್ರಾಯುಧಗಳೆಲ್ಲವನು ॥
ಕೆಲಸ ಮಾಡುವ ನಿನ್ನ ಭವನದ ।
ನಳಿನಮುಖಿಯರ ಕಳುಹು ಸುರಪತಿ ।
ಬಲುಹ ನುಡಿದರೆ ನಿನ್ನ ಕಥನದಿ ಕೆಡುವದಾಲೋಕ ॥ ೫೨ ॥

ತೋರದಿರು ಸುರನಾಥ ಬಲುಹನು ।
ಹಾರಲಿಕ್ಕುವೆ ನಿನ್ನ ಅಮರರ ।
ಮೂರುಲೋಕದ ಗಂಡ ಫಲ್ಗುಣ ಮುನಿದು ಕೊಲುತಿರಲು ॥
ವೀರಾಂತರಾರುಂಟು ನಿನ್ನಯ ।
ದೂರ ಕೇಳುವರಾರು ಸುರಪತಿ ।
ಬೇರೆ ಮಾತೇಕಿನ್ನು ಬೇಡಿದ ಬೇಗ ಕಳುಹೆಂದ ॥ ೫೩ ॥

ಎತ್ತಣದು ಸಾಹಸವು ನರರಿಗೆ ।
ನುತ್ತ ಐರಾವತವ ವಸ್ತುವ ।
ನಿತ್ತು ಕಳುಹದೆ ಯಿರಲು ಧಾಳಿಯನಿಕ್ಕಿ ಸುರಪುರವ ॥
ಮುತ್ತಿ ದಿವಿಜರ ಸದೆಬಡಿವೆ ಯಿದಿ ।
ರಾಂತು ಕಾದುವೆ ಬೆಂಬಿಡದೆ ತಾ ।
ನೆತ್ತುವೆನು ಮುತ್ತಿಗೆಯ ಶ್ರೀ ಕೈಲಾಸಪುರಕಾಗಿ ॥ ೫೪ ॥

ಹರನ ದುರ್ಗದಲಿರಲು ಮೇಣಾ ।
ಹರಿಯ ವೈಕುಂಠದೊಳಿರಲು ತಾ ।
ಸುರಪ ಬ್ರಹ್ಮನ ಸತ್ಯಲೋಕವ ಬಲಿದು ನೀನಿರಲು ॥

ಧುರದೊಳಗೆ ತ್ರೈಲೋಕದವರನು ।
ಶಿರವ ತೂಗಿಸಿ ನಿನ್ನ ಹಿಡಿದೀ ।
ಧರಣಿಗಿಳುಹುವೆ ಜನನಿ ಕೊಂತಿಯ ಪಾದದಾಣೆಂದ ॥ ೩೫ ॥

ಧಿಟ್ಟನರನೆನ್ನದಿರು ಬೇಡಿದ ।
ಕೊಟ್ಟು ನೀ ಸುಖಿಯಾಗಿ ಬಾಳ್ವುದು ।
ನೆಟ್ಟನೇ ಕೊಡದಿರಲು ನಿನ್ನಯ ಅಮರಲೋಕವನು ॥
ಸುಟ್ಟು ಕಳುಹುವೆ ದಿವಿಜರನು ಬೆ ।
ನ್ನಟ್ಟಿ ಸದೆಯದೆ ಬಿಟ್ಟೆನಾದಡೆ ।
ಸೃಷ್ಟಿಗೀಶನ ಧರ್ಮರಾಯನ ಪಾದದಾಣೆಂದ ॥ ೩೬ ॥

ಕೇಳಿದನು ಜಂಭಾರಿ ಫಲ್ಗುಣ ।
ನೋಲೆ[1]ಯಿಂದಾ ಹದನನೆಲ್ಲವ ।
ಕಾಲರುದ್ರನ ಖತಿಗೆ ವೆಗ್ಗಳವಾಗಿ ಘರ್ಜಿಸಿದ ॥
ಕಾಳಗೆಡದನು ಪಾರ್ಥನೆಂಬವ ।
ಮೇಲನರಿಯದೆ ನುಡಿದನಕಟಾ ।
ಶೂಲಧರನೇ ಬಲ್ಲ ಹಾಯೆನುತೆಂದೆನಮರೇಂದ್ರ ॥ ೩೭ ॥

ದಶಶಿರನೊ ತಾ ಕಾಲನೇಮಿಯೊ ।
ಯೆಸೆವ ಭಸ್ಮಾಸುರ ಹಿಡಿಂಬಕ ।
ನಿಶುಂಭ ಶುಂಭ ಹಿರಣ್ಯಕಾಕ್ಷನು ಕೈಟಭಾಸುರನೊ ॥
ವಸುಧೆಗುಬ್ಬಸವಾದ ದೈತ್ಯರ ।
ಹೆಸರ ತೊಡೆದ ಮುರಾರಿ ಫಲ್ಗುಣ ।
ಸಸಿನೆ ಬಾಳಲ್ಕರಿಯೆನೆಂದಮರೇಂದ್ರ ಖತಿಗೊಂಡ ॥ ೩೮ ॥

ಕಾಲಗತಿಯೋ ಹರನಿರೂಪವೊ ।
ಹೇಳುವರೆ ಸುರನಿಕರದಪಜಯ ।
ದೇಳಿಗೆಯ ಸೂಚನೆಯೊ ಮರ್ತ್ಯರು ದಿವಿಜಲೋಕಕ್ಕೆ ॥

---

೧ ಗ. ಫಲ್ಗುಣನೊಲುಮಿ

ಕೋಲನೆಚ್ಚರು ಬೇಡಿ ಕಪ್ಪವ ।
ಬಾಲಭಾಷೆಯು ನುಡಿದನರ್ಜುನ ।
ಶೂಲಧರನೇ ಬಲ್ಲ ಹಾಯೆನುತೆಂದನಮರೇಂದ್ರ ॥ ೫೯ ॥

ಕರಿಯುಜಲ ನಕ್ಷತ್ರಗಳ ಗಣ ।
ಪುರದೊಳಗೆ ಯೂರೇಳು ದಿನಮಳೆ ।
ಸುರಿಯೆ ಕೇಳಾಕರಿಯು ಬಲಕ್ಕೆ ಘೋರದಂದಲಿ ॥
ನರನ ಪಟ್ಟಣವೆಲ್ಲ ನೀರಲಿ ।
ಹರಿದು ಹೋಗಲಿ ಪಾರ್ಥನೆಂಬನ ।
ಪರಾಕ್ರಮದ ಬಲುಯೆನುತ ಸುರಪತಿ ಬಹಳ ಖತಿಗೊಂಡ ॥ ೬೦ ॥

ನೆರೆದ ದಿವಿಜರ ನಡುವೆ ನಾರದ ।
ವರ ಮುನೀಶ್ವರ ನಿರುತ ಕಂಡನು ।
ನರನು ಕಂಬವನೆಚ್ಚು ಉಳುಹಿದ ನಿನ್ನ ಜೀವವನು ॥
ಸುರಪತಿಗೆ ನಡಲೆಂದು ಯೆಚೆದರೆ ।
ಪರಳು ನಿನಗಂಜುವದೆ ಸಾಕಂ ।
ತಿರಲಿ ಫಲಗುಣನೇನ ಬೇಡಿದ ಬೇಗ ಕಳುಹೆಂದ ॥ ೬೧ ॥

ನರನ ಭಯದಲಿ ಸುರರು ತಪ್ಪುವ ।
ದಿರದೆ ಬೆದರರು ನಿನ್ನ ಹಾದದೆ ।
ವರಮುನೀಶ್ವರರೇನ ಬೆಸಸಿದರೆನಲು ನಾರದನು ॥
ಸುರರು ಭುಜಗರು ಧುರದೊಳಾತಗೆ ।
ಸರಿಯೆ ಸುಭಟರ ಕಾಣೆ ಪಾರ್ಥನ ।
ಶರಳ ಬಲುಹನು ತೋರುವೆನು ಸುರನಾಥ ಕೇಳೆಂದ ॥ ೬೨ ॥

ಹಿಂದೆ ವಸುಮತಿ ಭಾರ ಘನವಾ ।
ಯ್ತೆಂದು ಧುರದಲಿ ಅಸುರ ಸಂಹರ ।
ಕೆಂದು ನರನಾರೆಯಣ ರೂಪನಿ ತಾಳಿ ಭೂತಳಕೆ ।

ಬಂದು ಐದನೆ ಕೃಷ್ಣ ನರನಾ ।
ರಿಂದರಿಯ ಬೇಡಿದನು ಕಳುಹುವೆ ।
ನೆಂದು ಬರೆಸೋಲೆಗಳ ಸುರಪತಿಗೆಂದನಾ ಮುನಿಪ ॥ ೬೩ ॥

ಆದರೆಲೆ ಸುರನಾಥ ಸಮರವ ।
ಸಾಧಿಸಲು ಬೇಕಾದರಿಳೆಯೊಳು ।
ಕಾದಿ ನೋಡುವದೀ ನರನ ಸರಳಗಳ ಬಲುಹವನು ॥
ಸಾಧಿಸಿ ನೀನಿಳೆಗೆ ಸ್ವರ್ಗಕೆ ।
ಹಾದಿಯನು ಮಾಡಿದರೆ ಬೇಡಿದ ।
ಮೇದಿನಿಗೆ ಕಳಹುವದು ಮಂತ್ರವಿದೆಂದನಾ ಮುನಿಪ ॥ ೬೪ ॥

ಕಳುಹುವದು ವೋಲೆಗಳ ಪಾರ್ಥನ ।
ಅಳಬಳವನರಿವು(ಯು)ವದು ನೀನದ ।
ಬಲುಹ ತಿಳಿದಟ್ಟುವದು ನಾನಾ ದ್ರವ್ಯ ವಸ್ತುಗಳ ॥
ಹಲವು ಮಾತೇಕಿನ್ನು ದೂತರ ।
ಕಳುಹು ಖಚರನ ಕರೆಸು ಬೇಗನೆ ।
ತಿಳಿದು ಸುರಪತಿ ಕರಸೆ ಬಂದನು ಖಚರನ ಸಭೆಗೆ ॥ ೬೫ ॥

ಬಂದು ಖಚರನು ದಿವಿಜರಾಯನ ।
ಮುಂದೆ ವೈಯಿಕ್ಕಿದನು ಭಯದಲಿ ।
ನಿಂದು ಕರಗಳ ಮುಗಿದು ಬೆಸನೇನೆನಲು ನಸುನಗುತ ॥
ಅಂಧಕಾಸುರ ಮಥನ ಬಲದಲಿ ।
ಬಂದವರ ಭಯವಿಲ್ಲ ಕೊಂತೀ ।
ನಂದನನ ಭಯವಾಯ್ತು ಕರೆಸಿದೆವೆಂದನಮರೇಂದ್ರ ॥ ೬೬ ॥

ಬರೆಸಿ ವೋಲೆಯ ಕೊಟ್ಟನಮರೇ ।
ಶ್ವರನು ದೂತನ ಕೈಯ್ಯ ಹಸ್ತಿನ ।
ಪುರದೊಡೆಯ ಫಲ್ಗುಣಗೆ ಕೊಡುವದು ಬೇಗದಿಂದೆನಲು ॥

ಧರೆಗಿಳಿದನಾ ಖಚರ ವೋಲೆಯು ।
ನರಗೆ ಕೊಟ್ಟರೆ ಶಾನಭೋಗರು ।
ಸುರಪನೋಲೆಯು ಬಳಿಗೆ ವೋದಿದರರಸ ಕೇಳೆಂಬ ॥ ೬೭ ॥

ಶ್ರೀಮದಮರಾವತಿಯರಸು ನಿ ।
ಸ್ಸೀಮ ರಿಪುಗಜಸಿಂಹ ದೈತ್ಯನ ।
ದಾನವರಿಪು ಯಮರೇಂದ್ರ ನಮ್ಮ ಕುಮಾರ ಪಾರ್ಥಂಗೆ ॥
ಪ್ರೇಮದಿಂ ಪ್ರತಿಲಿಖಿತ ವೃತ್ತರ ।
ಕಾಮಿಸಿದ ವಸ್ತುಗಳ ಕೊಡುವೆವು ।
ಭೂಮಿ ಸ್ವರ್ಗಕೆ ಬಿಡದೆ ಬಟ್ಟೆಯ ಮಾಡು ನೀನೆಂದ ॥ ೬೮ ॥

ಸುರಪನೋಲೆಯನೋದಿಸಿದನಾ ।
ಪರಬಲಾಂತಕ ಪಾರ್ಥ ಕೇಳಿದ ।
ಹರುಷದಲಿ ಗಹಗಹಿಸಿ ನಗುತಲಿ ಖಚರಗಿಂತೆಂದ ॥
ಧರೆಗೆ ಸ್ವರ್ಗಕೆ ಬಟ್ಟೆಯನು ನಾ ।
ನಿರದೆ ಮಾಡುವೆನಿಂದ್ರನೇರುವ ।
ಕರಿಯು ಸುರತರು ಕಾಮಧೇನುವ ನಿಖಿಳ ವಸ್ತುಗಳ ॥ ೬೯ ॥

ಸುರಪನಿಲ್ಲಿಗೆ ಕಳುಹದಿರ್ದಡೆ ।
ಹರಿದು ಧಾಳಿಯ ನಿಕ್ಕಿ ನಿರ್ಜರ ।
ಪುರವ ಕೆಡಿಸುವೆ ಖಚರ ನೀ ಪೇಳೆಂದನಾ ಪಾರ್ಥ ॥
ಚರಣಕೆರಗಿದನೆಂದು ಯಿಂದ್ರಂ ।
ಗರಸಿಯೋರ್ವಸಿ ರಂಭೆ ಮಾತೆಗೆ ।
ಹರುಷದಲಿ ಪೊಡಮಟ್ಟನೆಂಬದು ಸಕಲ ದಿವಿಜರಿಗೆ ॥ ೭೦ ॥

ಬಂದನಾಗಳೆ ಖಚರನಾ ದೇ ।
ವೇಂದ್ರನೊಡ್ಡೋಲಗಕೆ ಕೊಂತೀ ।
ನಂದನನು ಬೆಸಗೊಂಡು ಕಳುಹಿದ ಉಚಿತವಚನಗಳ ॥

ಎಂದನೆಲೆ ಸುರನಾಥ ಪಾರ್ಥ ಮು ।
ಕುಂದನಲ್ಲವೆ ನರನೆ ಸಂಶಯ ।
ವಂದು ಬೇಡೆಲೆ ಯೇನು ಬೇಡಿದ ಬೇಗ ಕಳುಹೆಂದ ॥ ೭೧ ॥

ಅಂತು ಸಂಧಿ ೧ಕ್ಕೆ ಪದ ॥ ೭೧ ॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಎರಡನೆಯ ಸಂಧಿ

ಸೂಚನೆ ॥

ನರನ ಬಿನ್ನಪ ಕೇಳಿ ಸುರಪತಿ ।
ಕರಿಯು ಸಿಂಗರಿಸಿದನು ಬಳಿಕೀ ।
ಧರೆಯ ಧರ್ಮಜ ಕರೆಯಲ್ಕೈದಿದ ನಖಿಳ ಬಾಂಧವರ ॥ ಪದ ॥

ಧೀರಮುತ್ತಿನ ಝಲ್ಲಿ ಮಾಲೆಯು ।
ತೋರಣವಲಡಿಗಡಿಗೆ ಕಟ್ಟಿದ ।
ಸಾರವಾಗಿಹ ವಜ್ರ ರತ್ನದಿ ಮೆರೆಯಲೊಪ್ಪಿದದು ॥
ಸೇರಿದವು ಭೇರಿಗಳು ಮೊರೆದವು ।
ಸಾರಿದವು ರತ್ನಗಳ ಸ್ವರ್ಗವ ।
ಸೂರೆ ತಂದರೆನಲ್ಕೆ ರಚಿಸಿದರಾಗ ಪಟ್ಟಣವ ॥ ೧ ॥

ಕಂಭಗಳಿಗಳವಡಿಸಿದರು ದಿ ।
ವ್ಯಾಂಬರವ ಹೊದಿಸಿದರು ಚಮರವ ।
ಲಂಬಿಸಿದರಡಿಗಡಿಗೆ ಬೆಳಗಿದ ಕಳಸ ಕನ್ನಡಿಯು ॥
ಸಂಭ್ರಮದಿ(ದ)ಲಂಕರಿಸಿ ಸೂರ್ಯನ ।
ಬಿಂಬ ಪಾಂಡವನಗರವದವಿದ ।
ಬಿಂಬಿಸಲಿ ರಚಿಸಿದರು ಗಂಗಾಜಾತ ನಲವಿನಲಿ ॥ ೨ ॥

ಸುರನದೀಸುತ ದ್ರೋಣ ವಿದುರರು ।
ಭರದಿ ತಮ್ಮೊಳಗೆಣೆಸುತಿರಲಾ ।
ಕರೆಸಿದರು ಯಮತನುಜ ವಾಯುಜ ಯಮಳ ಫಲುಗುಣರ ॥
ವರಮಹಾಸತಿ ಕೊಂತಿದೇವಿಯು ।
ಕರೆಸಿ ನುಡಿದರು ನೀವು ಹೋಗಿಯೆ ।
ಕರೆದು ತಹದು ನೃಪಾಲನರಸಿಯ ಸುತ ಸಹೋದರರ ॥ ೩ ॥

[1]ಯಮುಜನ್ಯೆದುವದೆಂದು ಭೂಪತಿಯ ।
ರಮನೆಗೆ ವಹಿಲದಲಿ ಭೀಮನು ।
ಹೆಮ್ಮನವನರಮನೆಗೆ ಕೊಂತಿ ಗಾಂಧಾರಿಯರ ಮನೆಗೆ ॥
ಪ್ರೇಮದಲಿ ಕಲಿಪಾರ್ಥನಿರದೆ ।
ಪ್ರೇಮ ದುಶ್ಶಾಸನಗೆ ಹೇಳಿ ।
ಸಮಸ್ತ ಭೂಪರ ಕರೆವುದೆಮಳರು ನಾಲ್ಕು ದೆಸೆದೆಸೆಗೆ ॥ ೪ ॥

ಸಾಕು ಸಾಕೈ ಭೀಮ ನಿನಗೆ ವಿ ।
ವೇಕವೈ ಮಿಗೆ ನಿನ್ನ ನುಡಿಗಳು ।
ನೂಕದಿರು ನೀ ಸಿರಿಯ ಯವ್ವನದುಬ್ಬ ಕೊಬ್ಬಿನಲಿ ॥
ಕಾಕುಮಾತುಗಳುಳಿದು ನೀನು ವಿ- ।
ವೇಕ ಸಾರವ ತುಂಬಿ ಹೋಗಲು ।
ಬೇಕು ನೀನೆಂದವರು ತಿಳುಹಿದರನಿಲನಂದನನ ॥ ೫ ॥

ಎನೆ ಹಸಾದ ಯೆನುತ್ತ ಪದಯುಗ ।
ವನಜದೊಳಗಭಿನಮಿಸಿ ಮುದದಿಂ ।
ತನಯರೈವರು ಬಂದು ಹೊಕ್ಕರು ರಾಜಮಂದಿರವ ॥
ಸನಕ ನಾರದ ಮುಖ್ಯ ಮಾಧವ ।
ನನ(?)ಕಮಲಕಭಿನಮಿಸಿ ಭಕ್ತಿಯ ।
ಲನುಪಮರು ನೆರೆನಿಂದರಾರೋಗಿಸಿದರೊಲವಿನಲಿ ॥ ೬ ॥

ಗಂಧವನುಲೇಪನದಿ ಮೆರೆವಾ ।
ನಂದದಲಿ ಶುಭಗೊಟ್ಟು ತಾರ್ಚಿಯ ।
ಬಂಧನದ ಮಣಿಮಯದ ಸೂಸಕ ಕನಕಕಂಕಣದ ॥
ಛಂದದಲಿ ರಂಜಿಸುವ ಕುಂಡಲ ।
ಮುಂದೆಸೆವ ದರ್ಪಣವನೀಕ್ಷಿಸಿ ।
ಬಂದು ದಂಡಿಗೆ ಯೇರಿ ಧರ್ಮಕುಮಾರ ಹೊರಪಂಟ ॥ ೭ ॥

---

1. ಈ ಪದ್ಯದ ಮಾತ್ರೆಗಳು ವೃತ್ತಕ್ಕೆ ಸರಿಯಿಲ್ಲ.

ಉಟ್ಟನವುಳಾಂಬರನ ನೊಸಲಲಿ ।
ಯಿಟ್ಟ ತಿಲಕ ಸುಗಂಧವೆನಿಪಾ ।
ಕೊಟ್ಟ ವಿಮಲಾಂಗಿಗಳ ಸರ್ವಾಭರಣ ಭೂಷಣವ ॥
ಕಟ್ಟಿದನು ಬದ್ದುಗೆಯ ಧಾರವ ।
ನಿಟ್ಟು ಗೊಂಡೆಯುಲಿಸವೊಲಾ ಜಗ ।
ಜೆಟ್ಟಿ ರಿಪುಗಜಸಿಂಹನನಿಲಕುಮಾರ ಹೊರವಂಟ ॥ ೮ ॥

ನೊಸಲ ತಿಲಕದ ಕೊರಳ ಹಾರದ ।
ಯೆಸೆವ ಕುಂಡಲ ಸಿರದ ಮುಕುಟದ ।
ಕುಸುಮ ಸೊಜ್ಜಲ ಬಿಗಿದ ಪಟ್ಟಾವಳಿಯ ಮುದ್ರಿಕೆಯ ॥
ಪೊಸವು ಪೀತಾಂಬರವನುಟ್ಟನು ।
ವಸುಮತೀಧರ ಕೃಷ್ಣ ತರಗೆಂ ।
ದೆಸೆವ ಪೌರುಷ ವೀರನಿಂದ್ರಕುಮಾರ ಹೊರಹೊಂಟ ॥ ೯ ॥

ಕಾಲತೊಡರಿನ ಝುಣದ ಝಣರವ ।
ಮೇಲೆ ದಿವ್ಯಾಂಬರವನುಟ್ಟನು ।
ಸಾಲ ರತ್ನದ ಹಾರ ಹೀರಾವಳಿಯ ಕೊರಳಗಳ ॥
ಮೇಲೆ ಮಾಣಿಕ ಪದಕ ಮಕುಟದ ।
ಭಾಳತಿಲಕದ ನೇತ್ರ ಕಾಂತಿಯು ।
ಬಾಲಕರು ಸಹದೇವ ನಕುಲರು ಬಾಹರೊಗ್ಗಿನಲಿ ॥ ೧೦ ॥

ವರ ಯುಧಿಷ್ಠಿರ ಭೀಮ ಫಲ್ಗುಣ ।
ಸರಸಿಜಾನನೆ ಕೊಂತಿಮಾದ್ರಿಯ ।
ತರುಳರವರೊಂದಾಗಿ ಸೋಂಪಿಗೆ ಕರೆವ ಸಂಭ್ರಮದಿ ॥
ಅರುಣ ವರ್ಣಾಕ್ಷತೆಯುನನು[1] ತಾ ।
ಧರಿಸಿ ಸೂವೀಳ್ಯವನು ವೆರಸಿಯ ।
ವರಭುವನನ್ಯೈ(ಕ್ಯೆ)ದಿದರು ಜನಮೇಜಯ ಮಹೀಪಾಲ ॥ ೧೧ ॥

1 'ಕ್ಷತೆಯನೂ' ಅಥವಾ 'ನುಂ' ಎಂದು ತಿದ್ದಬಹುದು.

ಬಂದರೈ ಧೃತರಾಷ್ಟ್ರ ರಾಯನ ।
ಮಂದಿರಕೆ ಯಮಸೂನು ಪರಮಾ ।
ನಂದದಲಿ ಕೈಮುಗಿದು ಕಾಣಿಕೆಯಿಟ್ಟು ಪೊಡಮಟ್ಟು ॥
ಕಂದ ಬಂದೈ ಕುರುಬಲದ ಮದ ।
ಚಂದ್ರ ಬಾರೈ ಕಂದ ಬಿರುದಿನ ।
ಸ್ಪಂದ ಬಾರೆಂದರಸ ಬಿಗಿಯಪ್ಪಿದನು ನಂದನನ ॥ ೧೨ ॥

ಕ್ಷೇಮವೇ ವರ ಸೋಮವಂಶೋ ।
ದ್ದಾಮ ಚೂಡಾಮಣಿಯೆ ಯೆನ್ನಯ ।
ಪ್ರೇಮ ಬಾರೆಂದರಸ ಕುಳ್ಳಿರಿಸಿದನು ಪೀಠದಲಿ ॥
ನೇಮದಲಿ ಬಟ್ಟಲಲಿ ವೀಳ್ಯವ ।
ಆ ಮಹಾತ್ಮಂಗಿತ್ತು ಮುದದಲಿ ।
ಭೀಮನಣ್ಣಂಗೊಲಿದು ವುಪಚರಿಸಿದನು ಧೃತರಾಷ್ಟ್ರ ॥ ೧೩ ॥

ನಿಂದು ಕರಗಳ ಮುಗಿದು ಯಮಸುತ ।
ತಂದು ಗಂಧಾಕ್ಷತೆಯನೇರಿಸಿ ।
ಕಂದ ಬಿನ್ನೈಸಿದನು ಕೊಂತೀದೇವಿಯುತ್ಸಹವ ॥
ಇಂದ್ರನೈರಾವತವ ಧರಣಿಗೆ ।
ತಂದು ನೋನಿಸಬೇಕು ತಾಯಿಗೆ ।
ಯೆಂದು ವೋಲೆಯ ಕಳುಹಿದನು ಸುರಪತಿಗೆ ಕಲಿಪಾರ್ಥ ॥ ೧೪ ॥

ಸರಳಮೊನೆಯಲಿ ಕಟ್ಟಿ ಲಿಖಿತವ ।
ನರನು ಬರಸೆಳೆದೆಚ್ಚನಾಗಳೆ ।
ಸುರಪತಿಯ ಸಭೆಗೈದಿ ವೋಲೆಯನೋದಿದಾಕ್ಷಣವೆ ॥
ವರವಿ ರಕ್ಕಸರಾಯನನು ಗಜ ।
ಧರಣಿಗಿಳುಹುವೆನಿಂದು ನೀ ಸುರ ।
ಪುರಕೆ ಬಟ್ಟೆಯ ಬೇಗ ಮಾಡೆಂದಟ್ಟಿದನು ಚರನ ॥ ೧೫ ॥

ಚಿತ್ತವಿಸು ಹಿರಿಯಯ್ಯ ನೀವೇ ।
ಮತ್ತೆ ಬಿಜಯಂಗೈದು ಮಾತೆಗೆ ।
ಮತ್ತೆ ಗಜ ನೋಹಿಯನು ಮಾಡಿಸಬೇಕು ಮನವಲಿದು ॥
ಪೃಥ್ವಿ ಪತಿಗಳು ನೆರೆವದದರೊಳು ।
ವಿಸ್ತರಿಸಿ ಬಹರೊಡೆಯರಿಲ್ಲೆಂ ।
ದುತ್ತಮಾಂಗವ ಚಾಚಿದನು ನೃಪವರನ ಚರಣದಲಿ ॥ ೧೬ ॥

ಕೇಳಿದನು ಧೃತರಾಷ್ಟ್ರ ಹರುಷದಿ ।
ಯಿಳೆಗೆ ಮೇಲಾಶ್ಚರಿಯ ಕೌರವ ।
ಕುಲವನುದ್ಧರಿಸಿದನು ಫಲ್ಗುಣ ನಮ್ಮ ಪುಣ್ಯವಲ ॥
ಮೇಲಣವರಿಂ ಮರ್ತ್ಯಲೋಕದ ।
ಮೂಲವನು ಅವರೆತ್ತಲರಿಯರು ।
ಕೂಲವಾಗೆ ಮುಕುಂದ ಬಲ್ಲನೆನುತ್ತ ಕೈಮುಗಿದ ॥ ೧೭ ॥

ಹಿಂದೆ ನಿಮ್ಮೆಯಾದ ರಾಯರು ।
ಛಂದದಲಿ ಭೋಗಿಸಿದರವನಿಯು ।
ನಂದು ಕಾಣರು ಯಿಂದ್ರನೈರಾವತದ ಹೋಲಿಕೆಯ ॥
ಇಂದು ಫಲುಗುಣ ಜನಿಸಿ ನಮ್ಮನು ।
ತಂದನಿಹಪರ ಸೌಖ್ಯ ಸಂಪದ ।
ಕೆಂದು ನೆರೆದೋಲಗದೊಳಗೆ ಹೊಗಳಿದನು ಭೂಪಾಲ ॥ ೧೮ ॥

ಹಲವು ಮಕ್ಕಳ ಹಡೆದು ಪಡೆದೇ ।
ನೆಲೆಯು ಗಂಡಳು ಜಗದೊಳೀ ಕುಲ ।
ತಿಲಕನೊಬ್ಬನ ಸುಕೃತ ಪುಂಡಳು ಕೊಂತಿ ಹರುಷದಲಿ ॥
ಉಳಿದ ಮೂರ್ಖರಲೇನು ಫಲ ಛಲ ।
ಭಲರೆ ಫಲ್ಗುಣನೊಬ್ಬ ಸಾಕನೆ ।
ಕುಲಶಿರೋಮಣಿ ರಾಯನೆಂದವನೀಶ ಹೊಗಳಿದನು ॥ ೧೯ ॥

ಕೇಳಿದನು ಧೃತರಾಷ್ಟ್ರ ಭೂಪತಿ ।
ವೋಲಗದ ಮನ್ನೆಯರ ಮಹಿಪರ ।
ಸೋಲನೆಸೆದರು ಭುಜವ ಧರ್ಮಜ ನೀ ಕೃತಾರ್ಥನಲ ॥
ಮೇಲೆ ಯಿಳೆಯೊಳು ಮೂರು ಲೋಕದೊ ।
ಳಾಳೊಳಗೆ ಸಾಹಸಿಗರಿಲ್ಲೆಂ ।
ದೋಲಗದೊಳಬ್ಬರಿಸಿ ಹೊಗಳಿದರಿಂದ್ರನಂದನನ ॥ ೨೦ ॥

ಸರ್ಪಭೂಷಣನರಸಿ ಮೆಚ್ಚುವ ।
ವಿಪ್ರಯುಕ್ತದ ನೋಂಪಿಯೆಂದರು ।
ತಪದಿ ನೋನುದು ಸತ್ಯವಿದು ತಾನುಳಿದ ಮನುಜರಿಗೆ ॥
ಬಪ್ಪಭೂಪರು ಅವರಿಗಧಿಕವು ।
ಒಪ್ಪಿನಲಿ ನೋಡಿದರೆ ಯಿದು ಹಿರಿ ।
ಯಪ್ಪ ಬಿಜಯಂಗೈಯ್ಯಬೇಕೆಂದೆರಗಿ ಚರಣದಲಿ ॥ ೨೧ ॥

ಮಗನೆ ಬಹೆನೈ ನಿಮ್ಮ ಐವರ ।
ನಗಲ ಬಲ್ಲೆನೆ ನಮ್ಮ ಸೊಗಸಿನ ।
ಮಗುವೆ ನೀ ಕೇಳೈಯ್ಯ ಭೂಪತಿಯೆಂದನವನೀಶ ॥
ವಿಗಡನೈ ಕುರುರಾಯ ಬಂದರೆ ।
ದುಗುಡವನು ತಾಳುವನು ಬಾರದೆ ।
ರಗಡುಗೊಂಬಿರಿ ಕಂದ ಯೆಂದವನೀಶ ಕೇಳೆಂದ ॥ ೨೨ ॥

ತಂದೆ ಬಿನ್ನಹ ನಿಮ್ಮ ಮೋಹದ ।
ಕಂದರೆಮ್ಮ ಸಹೋದರರು ಅವ ।
ರಿಂದು ಮುನಿಸುವರಲ್ಲ ನಿಮ್ಮಯ ಮಕ್ಕಳಿದ್ದೆಡೆಗೆ ॥
ಬಂದರಾದರೆ ಪಾಂಡುನಂದನ ।
ಬಂಧುಬಳಗುಳ್ಳವರು ಯೆನುತಲಿ ।
ಛಂದದಲಿ ಮನ್ನಿಸುವರವನಿಯೊಳೆಂದು ಕೈಮುಗಿದ ॥ ೨೩ ॥

ನಾವು ಬಂದರೆ ಕೌರುರಾಯುನ ।
ಭಾವವೇನೆಂದರಿಯಬಾರದು ।
ನೀವು ಮುನಿವಿರಿ ಬಾರದಿದ್ದರೆ ಬುದ್ಧಿಯೇನಿದಕೆ ॥
ಆವು ನುಡಿವರು ಲೋಕ ಪಾಂಡವ ।
ಜೀವಿಗಳು ನೆರೆ ಧಿಟ್ಟನೇ ನರ ।
ನಾವು ಪ್ರಪಮಿಸದೆನಗೆನುತ ಧರಣೀಶ ಬಿಸುಸುಯ್ದ ॥ ೨೪ ॥

ಚಿಂತೆಯೇತಕೆ ತಂದೆ ನೀ ನಿ ।
ಶ್ಚಿಂತನೈವರ ಪಾಂಡು ಕೌರವ ।
ಸಂತತಿಗೆ ಸೂರಾರಕೊಡೆಯನು ನೀನು ಜಗವರಿಯೆ ॥
ಅಂತರಂಗವನರಿದು ನಿರ್ವಹಿ ।
ವಂತರಂಗದ ನುಡಿಗಳಿಗೆ ತಾ ।
ದ(ನ)ಂತಕಾತ್ಮಜ ನುಡಿಯೆ ಬಳಿಕಿಂತೆಂದನವನೀಶ ॥ ೨೫ ॥

ಇಂದು ನಿಮ್ಮಯ ತಾಯ ನೋಂಪಿಗೆ ।
ಕಂದ ಕೇಳೈ ವಾದಿಸಲುಮಭೆ(?) ।
ಬಂದ ಹುಣ್ಣಿಗೆ ತಾಕಿದಂತೆನ್ನಾಣೆ ಮುನಿಯದಿರು ॥
ತಂದು ವಸ್ತ್ರಾಭರಣವಿಟ್ಟಾ ।
ನಂದದಲಿ ತೆಗೆದಪ್ಪಿ ನಿಂದನು ।
ಮುಂದಣಯ ಪರಗತಿಗೆ ನಂಬಿದೆನೆಂದನವನೀಶ ॥ ೨೬ ॥

ಇಂದು ನಿಮ್ಮಯ ತಾಯ ನೋಂಪಿಗೆ ।
ಬಂದವರೆ ನಾವೆಂದು ನಮ್ಮನು ।
ಕುಂದನೆಣಿಸದಿರೆನ್ನ ನಿನ್ನಲಿ ಭೇದ ಮುನ್ನಿಲ್ಲ ॥
(?)ಇಂದಿರಾಕ್ಷನನಂಘ್ರಿಕಮಲದ ।
ಸ್ಪಂದರದ ನಿಜಭಕ್ತಿ ಸೇವೆಗೆ ।
ಒಂದು ಬಾರದು ಕೊರತೆಯೆನುತವನೀಶ ಪೇಳ್ಕೊಟ್ಟ ॥ ೨೭ ॥

ಎದ್ದನವನಿಪನ್ಸೈಯ್ಯನಂಘ್ರಿಗೆ ।
ಬಿದ್ದು ಕಳುಹಿಸಿಕೊಂಡು ಯೆಡಬಲ ।
ಕಿದ್ದ ಭೂಪರ ಕೞದನೈರಾವತ(ದ) ಮಹೋತ್ಸಹಕೆ ।
ಅಂದಣವನೇರುತ್ತಲವನಿಪ ।
ನಿದ್ದೆಸೆಯ ನೋಡುತ್ತ ಬರಬರ ।
ಲಿದ್ದಿತ್ತೈ ಭೂಪಾಲ ನೀ ಕೇಳೆಂದನಾ ಮುನಿಪ ॥ ೨೮ ॥

ನಿಲ್ಲಿರೈ ಭೂಮಿಪರು ಕಳುಹಿಸಿ ।
ಕೊಳ್ಳಿರೈ ನೀವೆಲ್ಲ ನೇಮವ ।
ಕೊಳ್ಳಿರೈ ಸಹದೇವ ಬರುವರು ನಿಮ್ಮ ಮನೆಗಳಿಗೆ ॥
ಅಲ್ಲಿಗವರೊಡಗೂಡಿ ಬಹುದೆಂ ।
ದೆಲ್ಲರನು ಸತಿಕರಿಸಿ ಭೂಮೀ ।
ವಲ್ಲಭನು ಮರಳಿದನು ತನ್ನಯ ರಾಜಮಂದಿರಕೆ ॥ ೨೯ ॥

ಅಂತು ಸಂಧಿ ೩ಕ್ಕೆ ಪದ ॥ ೧೦೦ ॥ ಕ್ಕೆ

ಮಂಗಳ ಮಹಾ ಶ್ರೀ ಶ್ರೀ ಶ್ರೀ

ಮೂರನೆಯ ಸಂಧಿ

ಸೂಚನೆ ॥

ಭೀಮ ಫಲ್ಗುಣ ಯಮಳರಾಗಳೆ ।
ಭೂಮಿಪಾಲರ ಕರೆದು ವಿನಯದಿ ।
ಪ್ರೇಮದಿಂದೊಡಗೂಡಿ ಬಂದರು ರಾಜಮಂದಿರಕೆ ॥ ಪದ ॥

ಅರಸ ಕೇಳ್ಕುರುರಾಯನರಮನೆ ।
ಸರಿಗೆ ಬಂದನು ಭೀಮ ಬಾಗಿಲ ।
ಪೊರಗೆ ಬಂದುದ ಕಂಡು ಕಂಚುಕಿನಿಕರವೈತಂದು ॥
ಕುರುನೃಪಾಲರ ರಾಜಪುತ್ರರು ।
ನೆರೆದುದೋಲಗದೊಳಗೆ ರಾಯನ ।
ಸ್ವರದ ಚಿತ್ರವನರಿದು ಕೈಗಳಮುಗಿದು ಪೊಡೆಯುಂಗೆ ॥ ೧ ॥

ಜ್ಯೇಷ್ಠ ಪಾಂಡುಕುಮಾರ ಧರ್ಮ್ಮ ।
ರಾಯನನುಜನು ವಾಯುಸುತ ತಾ ।
ತಾಯ ನೋಡಿಗೆ ಕರೆಯಲೈದಿದನೆಂದು ತಾ ಕೇಳಿ ॥
ಬಾಯ ಮೌನದ ಮನದ ಬೆದರಿನ ।
ಕಾಯದೊಲವಿನ ನಟ್ಟ ನೋಟದ ।
ರಾಯರಿರೆ ಕುರುರಾಯ ಬರಹೇಳೆಂದು ನೇಮಿಸಿದ ॥ ೨ ॥

ಇತ್ತ ದೂತರು ಹರಿದು ಕೈಮುಗಿ ।
ವೃತ್ತ ಬರಹೇಳಿದರೆ ಲೇಸೆ ।
ನ್ನುತ್ತ ಲೋಲಾಡುತ್ತ ಬಂದನು ಬಾಗಿಲವ ಕಳೆದು ॥
ಸುತ್ತ ಬಳಸಿದರಂಗರಕ್ಷಕ ।
ರಿತ್ತರದ ಕೈವಾರಿಗಳ ನೆರೆ ।
ದೊತ್ತಿನಲಿ ಕಲಿಭೀಮ ಬಂದನು ಕುರುಪತಿಯ ಸಭೆಗೆ ॥ ೩ ॥

ಘಳಿಲನಿದಿರೆದ್ದವನು[1] ಪಾಲಕ ।
ತಿಳಿತೆಗೆದು ತರ್ಕೈಸಿ ಮುದದಲಿ ।
ಲಲಿತ ಸಿಂಹಾಸನದೊಳರ್ಘವನಿತ್ತು ಕುಳ್ಳಿರಿಸಿ ॥
ಉಲಿವ ಪಾಟಕನಿಕರದಗ್ಗದ ।
ಕಳಕಳವ ನಿಲಿಸಿದರು ಭೂಪತಿ ।
ತಿಲಕನೀತನ ಕ್ಷೇಮ ಕುಶಲವನೊಲಿದು ಬೆಸಗೊಂಡ ॥ ೪ ॥

ತರಿಸಿ ಹೊಂಬಟ್ಟಲಲಿ ವೀಳ್ಯವ ।
ನರಸು ಕೊಟ್ಟುಪಚರಿಸಿ ಲೋಕದ ।
ಪರಿವಿಡಿದು ಪತಿಕರಿಸಿದನು ತಾ ವಾಯುನಂದನನ ॥
ವರ ಸಮಾಧಾನದಲಿ ಅನಿಲಜ ।
ವರಕ್ಷತಿಯ ವಿಡಿದಿದರು(ದಿರು) ನೊಸಲಲಿ ।
ಯಿರಿಸಿ ಕರೆದನು ಭೀಮ ತಾಯಿಯ ನೋಪಿಗವನಿಪನ ॥ ೫ ॥

ಭೂಪ ಕೇಳೈ ನಿಮ್ಮ ಪಾಂಡು ಮ ।
ಹೀಪತಿಯ ವಲ್ಲಭೆಗೆ ಸುರಪುರ ।
ಹೋಪ ಗಜವನು ತರಿಸಿ ಕೊಡುವೆನೆನುತ್ತೆ ಬೀಳ್ಕೊಂಡು ॥
ಈ ಪರಿಯುಲನುವಾದನರ್ಜುನ ।
ನಾ ಪರಿಯ ಬಿನ್ನಪದ ವೋಲೆಯ ।
ನಾ ಪರಾಕ್ರಮಿ ಯೆಸೆದನಮರರ ಸಭೆಗೆ ಸಾಯಕವ ॥ ೬ ॥

ಕಂಡನಾ ದೇವೇಂದ್ರ ನರನು ।
ದ್ದಂಡತನ ಕತಿಮೆಚ್ಚಿ ದಿವಿಜರ ।
ಹಿಂಡು ಸಹಿತ್ಯೈರಾವತವ ಕಳುಹೆಂದು ಕಳುಹಿದನು ॥
ಮಂಡಲಾಧಿಪ ನೀನು ಬಾರದೆ ।
ಕಂಡು ಮಾತೆಯು ನೋನೆನೆನುತಲಿ ।
ದಂಡಭುಜಬಲ ಬಳಿಕ ತೆರಳುವದೆಂದನಾ ಭೀಮ ॥ ೭ ॥

1. ಆ: ದ್ದವನಿಪಾಲಕ.

ಅನಿಲನಂದನ ಕೇಳು ನಮ್ಮಯ ।
ಜನನಿ ಐರಾವತದ ನೋಂಪಿಗೆ ।
ಮನೆಗೆ ಕರೆಯದೆ ಮರೆದು ಕಳೆದಳು ಕೊಂತಿದೇವಿಯನು ॥
ಅನುವ ಕಾಣೆನು ನಮಗೆ ಬಾಹುದು ।
ಮುನಿಯದಿರು ನೀನೆಂದು ಭೂಪತಿ ।
ವಿನಯದಿಂದಲಿ ನುಡಿಯೆ ಬಳಿಕಿಂತೆಂದನಾ ಭೀಮ ॥ ೮ ॥

ಅಂದು ತಾಯನು ಕರೆಯದಿದ್ದರೆ ।
ನೊಂದವರು ನಾವಲ್ಲ ಆದೊಡೆ ।
ಯಿಂದು ನಿನ್ನನು ಕರೆಯ ಬಂದೆನು ಮರುಳನಾಡದಿರು ॥
ಇಂದಿಗಂದಿನ ಪರಿಯ ತಾಳದೆ ।
ಮುಂದೆ ನೀನ್ನೈ ಬಂದು ನೋಂಪಿಯ ।
ಛಂದದಲಿ ನೋನಿಸುವದೆಂದನು ಭೀಮ ಕುರುಪತಿಗೆ ॥ ೯ ॥

ಎರೆಯ ಮಣ್ಣನು ತಂದು ನೋಂಪಿಯ ।
ಕರಿಯ ಕೋಲಿಕೆಯಿಂದ ನೋಂತರೆ ।
ಸುರಪನೈರಾವತವನಿಳುಹಲು ಯಿಂದು ಸರಿಯಹುದೆ ॥
ಕರನುಡಿಯಬೇಡಕ್ಕ ನಮ್ಮಯ ।
ಬರವು ತಾ ಮುನ್ನಿಲ್ಲವೆನುತಲಿ ।
ವರನೃಪಾಲನು ನುಡಿಯೆ ಬಳಿಕಿಂತೆಂದನಾ ಭೀಮ ॥ ೧೦ ॥

ಬಂದು ನಿನ್ನನು ಕರೆದೆ ನೋನ್ನೈ ।
ಬಂದರೊಳ್ಳಿತು ಬಾರದಿದ್ದರೆ ।
ಮುಂದೆ ಬಹು ಕಾರ್ಯಾರ್ಥ ಸಿದ್ಧಿಗೆ ಸಾಧನವು ನಮಗೆ ॥
ಇಂದು ಗರ್ವದಲಿದ್ದ ಫಲವನು ।
ಮುಂದೆ ತೋರುವೆನೆನುತ ಭೀಮನು ।
ಅಂದ ಸಂಧ್ಯೆಯರ್ಕಕ್ಕೆ ನಡುಗಿತು ಕೌರವರ ಸ್ತೋಮ ॥ ೧೧ ॥

ಇತ್ತ ವಾಯುಜ ಸಕಲ ಭೂಪರ ।
ಮೊತ್ತವನು ಕರೆಕರೆದು ಅಕ್ಷತೆ ।
ಯಿತ್ತು ಬರಹೇಳಿದನು ಜನನಿಯು ನೋಂಪಿಯುತ್ಸಹಕೆ ॥
ಉತ್ತಮವು ಬಹೆವೆನುತ ನೇಮವ ।
ನಿತ್ತ ಕೌರುವರಾಯ ಮದಗಜ ।
ಮಸ್ತಕಾಂಕುಶ ಬಂದು ಹೊಕ್ಕನು ರಾಜಮಂದಿರವ ॥ ೧೨ ॥

ಅಂದು ದುಶ್ಶಾಸನನ ಮನೆಗೈ ।
ತಂದನಾಗಳೆ ಪಾರ್ಥ ಬಾಗಿಲ ।
ಮುಂದೆ ಕಂಚುಕಿ ನಿಕರ ಕಂಡೆರಗಿದರು ಪದಯುಗಕೆ ॥
ಬಂದು ಕರಗಳ ಮುಗಿದು ಜೀಯ್ಯ ಮು ।
ಕುಂದ ಸನ್ನಿಭಬಂಡನೆನಲವ ।
ಬಂದು ಬಿಗಿಯಪ್ಪಿದನು ಕೌರವನನುಜನಾಕ್ಷಣಕೆ ॥ ೧೩ ॥

ಕರವ ಹಿಡಿದೊಡಗೊಂಡು ಬಂದಿಸಿ ।
ಮೆರೆವ ಸಿಂಹಾಸನದ ಮೇಲ್ಕೆ ।
ಕರೆದು ಕುಳ್ಳಿರಿಸಿದನು ಕೊಟ್ಟನು ವಾತ್ತೆ ವೀಳ್ಯಯವ ॥
ಬರವಪೂರ್ವವದೇನು ಕಾರಣ ।
ಪರಮ ಸಾಹಸಿ ಹೇಳಿದೇನ್ನೈ ।
ಅರುಣವಕ್ಷತೆ ತಾದಾಯಿತ್ತನು ನಗುತ ಕಲಿಪಾರ್ಥ ॥ ೧೪ ॥

ಇತ್ತ ಕೇಳ್ಳೈ ನಮ್ಮ ಐವರ ।
ಹೆತ್ತವಳು ವರ ಕೊಂತಿ ಸುರಪನ ।
ಪೊತ್ತಗಜ ನೋಂಪಿಯನು ಮನದಲಿ ಬರುಗಿದಳು ಹದನ ॥
ಮತ್ತೆ ನಾನದ ಕೇಳಿ ಚಾಪದ ।
ತೆತ್ತಿಗನ ಕೈಯಿಂದ ಲಿಖಿತವ ।
ನಿತ್ತ ಕಳುಹಲು ಹೋದದಾಗಳೆ ಸುರಪನಂ ಸಭೆಗೆ ॥ ೧೫ ॥

ಕಂಡನಾಗಳೆ ಬಾಣಗರಿಯಲಿ ।
ಮಂಡಳೇಶ್ವರನಿದನು ಕೇಳಿದ ।
ಪುಂಡರೀಕಾತ್ಮಜನು ತಿಳುಹಿದನಂದು ಕರುಣದಲಿ ॥
ಖಂಡಲನ ಮದಗಜವ ಧರಣಿಗೆ ।
ಚೆಂಡ ಕಳುಹುವೆನೆಂದು ನರಪುರ ।
ಕಂಡು ಬಾ ಹೋಗೆನುತ ಖಚರನ ಕಳುಹಿದನು ಇಂದ್ರ ॥ ೧೬ ॥

ಅದುವೆ ಕಾರಣ ನಿಮ್ಮ ಭವನಕೆ ।
ಮುದದಿ ಕರೆಯಲಿ ಬಂದೆನೆಲವೊ ।
ಹದುಳದಲಿ ನೆರೆಕಂಡು ಜನನಿಯು ನೋಂಪಿಯುತ್ಸಹವ ॥
ಸಮಗುಣದಿ ನೆರೆವಡಸಿ ಯಿಂದ್ರನ ।
ಮದಗಜವನಿದಿಗೊಂಡು ಭುವನದೊ ।
ಳದುಭುತವ ಮಾಡಿದರೆ ಇಹಪರ ತಮ್ಮ ಕೇಳೆಂದ ॥ ೧೭ ॥

ಕೇಳಿ ದುಶ್ಶಾಸನನು ಪಾರ್ಥನ ।
ದಾಳುಮತಿಯನು ಹದನನೆಲ್ಲವ ।
ಶೂಲಪಾಣಿಯ ಕರುಣದಳತೆಯೊ ಜಗದೊಳಕಟೆನುತ ॥
ಮೇಲಣವರಿಂ ಪಾಂಡುಪುತ್ರರ ।
ಧಾಳಿ ಸುಲಿ ಕಳುಹುವೆನೆನುತ ತಾ ।
ಕೇಳಿದನು ಪಾರ್ಥನ ಪರಾಕ್ರಮ ತೂಗಿದನು ಶಿರವ ॥ ೧೮ ॥

ಅಹುದು ಬಳಿಕಿನ್ನುಳಿದವರಿಗೀ ॥
ಮಹಿಮೆಯೆಲ್ಲಿದು ಪಾಂಡುಪುತ್ರರ ।
ಬಹಳ ಬಲ ನೋಡಕಟ ಜಗದೊಳಗಿವಪೂರ್ವವಲ ॥
ಸಹಸ ಪುಣ್ಯವ ಮಾಡಿ ಕೊಂತಿಯು ।
ವಹಿಸಿ ನಿನ್ನನು ಪಡೆದಳೈ ನೀ ।
ನಿಹಪರಕೆ ಸೌಖ್ಯವನು ತಂದೈ ನಮ್ಮ ಕುಲಕೆಂದ ॥ ೧೯ ॥

ನಾವು ಮಾಡುವದೇನು ಇನಕುಲ ।
ಭೂವರರ ವಲ್ಲಭರದಲ್ಲದೆ ।
ಭಾವಿಸಲು ಕಳುಹುವದು ಖಿಕ್ಕವರೆನ್ನ ನುಡಿಗೇಳು ॥
ನೀವು ನೂರ್ವರು ಬಂದು ಛಂದದಿ ।
ನೋವಿ ನಡಸಿದಡಹುದದಲ್ಲದೆ ।
ದಾವ ನೋಪಿಯ ಗೊಡವೆ ತಮಗೆಲೆ ತಮ್ಮ ಕೇಳೆಂದ ॥ ೨೦ ॥

ಪಾರ್ಥ ಕೇಳೈ ನಮ್ಮ ಜನನಿಗೆ ।
ಅರ್ಥಿಯಲಿ ಸುರಕರಿಯ ರೂಪವ ।
ವರ್ತಿಸಿದರೈ ಚಿತ್ರಕರು ತಾವು(ವ್) ನೋಪಿಯುತ್ಸಹವ ॥
ಅತ್ತಳಾ(ಲಾ)ದರೆ ಕೊಂತಿದೇವಿಯು ।
ಪ್ರೀತಿಯಲಿ ನೆರೆ ಕರೆಯುಲರಿಯದೆ ।
ಖ್ಯಾತಿಯಃನು ಮಾಡಿದಳು ಬಾ(ಬ)ಹಳರಿದಲ್ಲ ಕೇಳೆಂದ ॥ ೨೧ ॥

ಮೃತ್ತಿಕೆಯ ಗಜಡಿಂದ ನೋತರೆ ।
ಅತ್ತಲೈರಾವತವನಿಳುಹಿದೆ ।
ಇತ್ತ ನೂರ್ವರಲೇನು ಫಲವಿದು ನಮ್ಮ ನೋಪಿಯುಸು ॥
ಮತ್ತೆ ನಿಮ್ಮಯ ನೋಪಿಗಹಿತಳ ।
ಯತ್ತ ನಮುಗಳವಲ್ಲ ಕೇಳೈ ।
ವಿಸ್ತರಿಸಿ ನೀ ಹೇಳಬೇಡೆಲೆ ಪಾರ್ಥ ನಮಗೆಂದ ॥ ೨೨ ॥

ಹರಿಯು ಶಕ್ರನ ಲೋಕವಂದೇ ।
ಹರುಷ ವೇಗವ ಮಾಡಿ ಲೋಕದ ।
ಬರು ವಿಧದ ಜಪಮಂತ್ರ ಹೋಮಂಗಳನು [ಸಲೆ*] ಮಾಡಿ ॥
ಸರಸ ಮೋಕ್ಷವ ಕಾಣಲರಿಯರು ।
ಹಿರಿದು ಯಿಂದ್ರನ ಗಜನ ನೋಡಿರಿ ।
ಬರಿಯು ಮಾತೇಕೆನುತ ಕರೆದನು ಮತ್ತೆ ಕಲಿಪಾರ್ಥ ॥ ೨೩ ॥

ಆಹುದು ಹೃದಯದಲಿಹುದು ಭೇದವು ।
ಬಹಳ ಮಾತುಗಳೇಕೆ ಮನೆಗಿಂ ।
ಬಹುದಕ್ಕೆ ಥರವಲ್ಲ ಮನೆವಿಲ್ಲಿಮಗೆ ಭಾವಿಸಲು ॥
ಬಹಳ ಪುಣ್ಯವ ಮಾಡಿ ನೀ ಗಜ ।
ವಹಿಸಿ ತಂದೆಲೆ ನೀವು ನೋನುದು ।
ಸಹಸಫಲ ನಿನಗೆಂದು ನುಡಿದನು ಮತ್ತೆ ದುಶ್ಶಾಸ ॥ ೨೪ ॥

ಎಲೆ ಮರುಳೆ ಧೃತರಾಷ್ಟ್ರ ಪಾಂಡುವಿ ।
ನೊಳಗೆ ಭೇದವು ಯಿಲ್ಲಲಾ ಕೇಳ ।
ಕೊಳವುದೇ ಪೊಂದೆಂದು ನುಡಿವರು ಮೂರು ಜಗವರಿಯೆ ॥
ಅಳುಕದೀ ಪರಿಮನಕೆ ಭೇದವ ।
ನೊಲಿದು ತುಂಬಿದೆ ನಿನ್ನ ನುಡಿಗಳು ।
ಗಳಹತನವಿದು ನೀತಿಯೇ ದುಶ್ಶಾಸ ಕೇಳೆಂದ ॥ ೨೫ ॥

ಆಗಲದು ತಪ್ಪೇನು ಮೂರ್ಖರು ।
ಹೋಗಿ ಭಾಗಾದಿಯರ ಕರೆದರೆ ।
ಹೋಗಬಾರದೆ ನೀವು ಯೆಂಬರು ಸಕಲ ಜನವೆಲ್ಲ ॥
ಈಗ ಗರ್ವದಲಿದ್ದು ನೂರ್ವರು ।
ಭೋಗಗಳು ಬಿಡುವಾಗವೆನುತಲಿ ।
ಸಾಗರೇಶನ ಬಲುಹು ನಮಗಿರೆ ಪಾರ್ಥಯೆನುತೆದ್ದ ॥ ೨೬ ॥

ಆಂದಣವನೇರಿದನು ಯೊಡಬಲ ।
ನಿಂದು ಚಮರಗಳಾಡಿ ಮೆರೆದವು ।
ಮುಂದೆ ನಲಿದುಘ್ಘಡಿಸಿ ಪಾಠಕನಿಕರದಬ್ಬರದ ॥
ಹಿಂದೆ ಮುಂದಿಕ್ಕೆಲದ ಪಟುಭಟ ।
ವೃಂದ ಸಹಿತೈತಂದು ತನ್ನಯ ।
ಮಂದಿರವ ಬೇಗದಲಿ ಹೊಕ್ಕನು ಕಂಡನವನೀಶ ॥ ೨೭ ॥

ಮುಂದೆ ಧರ್ಮಕುಮಾರನಾತನ ।
ಹಿಂದೆ ಮುಖ್ಯಪ್ರಾಣನಾತ್ಮಜ ।
ನಿಂದ್ರಸುತ ಸಹಿತಿರದೆ ಬಂದರು ಭೀಷ್ಮನರಮನೆಗೆ ॥
ಇಂದು ಧೃತರಾಷ್ಟ್ರಾದಿ ಕೌರವ ।
ವೃಂದವನು ಬರಹೇಳಿ ಕರೆದರೆ ।
ಬಂದದಿಲ್ಲವು ಯೆಂದು ಬಿನ್ನಹ ಮಾಡಿದರು ಹದನ ॥ ೨೮ ॥

ಲೇಸು ಲೇಸೈ ನಿಮ್ಮ ಚಿತ್ತವು ।
ಬೇಸರದೆ ನೀನವರ ಸದನಕೆ ।
ವಾಸಿಪಂಥವ ನೀಗಿ ಹೋದಿರಿ ಕೊರತೆ ನಿಮಗಿಲ್ಲಾ ॥
ಸಾಸಿರಾಕ್ಷನ ಗಜವ ನೋಡುವ ।
ಲೇಸು ಕುರುಬಲಕಿಲ್ಲ ನೀ ನಿಂ ।
ದೋಸರಿಸಬೇಡಕಟ ನಾನಿಹೆ ಅಂಜಬೇಡೆಂದ ॥ ೨೯ ॥

ಚಿತ್ತವಿಸು ಮುನಿನಾಥ ಪಾಂಡವ ।
ನತ್ತ ಬಿಜಯಂಗೈದು ಕೌರವ ।
ನೊತ್ತವಸು ನೆರೆಕರೆಯಲೈದಿದ ನೋಪಿಯುತ್ಸಹಕೆ ॥
ಮತ್ತೆ ದಾಯಿಗರವರು ಹೇಳಿದ ।
ರಿತ್ತ ಬಹರೇಕೆಂಬದನು ನೆರೆ ।
ಚಿತ್ತದಲಿ ತಾವರಿಯರೇ ಹೇಳೆಂದನವನೀಶ ॥ ೩೦ ॥

ಕೇಳು ಜನಮೇಜಯ ಧರಿತ್ರೀ ।
ಪಾಲ ನಿನ್ನಯ ಪೂರ್ವಜರು ಮನ ।
ವಲಿದು ಕೌರವನ ಮನೆಗೆ ಬಂದರು ಲೋಕ ಮೆಚ್ಚಲಿಕೆ ॥
ಮೇಲೆ ಮೂರ್ಖರು ಬಾರರೆಂಬುದು
ವಲ್ಲಭನು ತಾ ಬಲ್ಲನೈ ಸಲೆ ।
ಹೇಳುವದು ಜನಮತವು ಯೆಂದನು ಮುನಿನೃಪಾಲಂಗೆ ॥ ೩೧ ॥

ಆವನಲಿ ನೆರೆ ಲೇಸು ಕಾರ್ಯದ ।
ಲೋವಿ ಬಂದು ಸಹೋದರರ ಸಂ ।
ಭಾವಿಸುವದನುನಯವು ನೀತಿಯನರಿವ ಮನುಜರಿಗೆ ॥
ತಾವು ಬರಲ್ಕೆ ಬಾರದಿದ್ದರೆ ।
ಆವ ಯೆಲಾ ಕುರುಕುಲದಲೊಬ್ಬನ ।
ಸವನ ಬಾರದೆ ಕೇಳು ಭೂಪತಿ ಹೆಗ್ಗತನು ಅವನ ॥ ೩೨ ॥

ಇತ್ತ ಮಾದ್ರೀಸುತರು ಭರದಲಿ ।
ಸುತ್ತಣರಸುಗಳಿದ್ದ ನಗರವ ।
ಮುತ್ತೆ ಹೊಕ್ಕರು ಕರೆದರವರನು ನೋಪಿಯುತ್ಸಹಕೆ ॥
ಉತ್ತಮವು ನಿಮ್ಮೊಡನೆ ಬಹೆವೆಂ ।
ದೊತ್ತಿ ಹೊರಹೊಂಟರು ನಿವಾಸವ ।
ಸತ್ತ ಚತುರಾಂಬುಧಿಯ ಮಧ್ಯದ ನೃಪರು ಕೇಳೆಂದ ॥ ೩೩ ॥

ಎತ್ತಿದವು ಪರಿಪರಿಯ ಪಲ್ಲವ ।
ಸತ್ತಿಗೆಗಳಗಲದಲಿ ಗಗನವ ।
ಮುತ್ತಿದವು ಸೆಳಿಸಿಂದು ಸಿಗುರಿಯ ಛತ್ರಚಾಮರವ ॥
ಒತ್ತಿಬರೆ ತೆರಹಿಲ್ಲದನಿಲನ ।
ಸತ್ವ ನಗೆಗೇಡಾಯ್ತು ಭೂಪರ ।
ಮೊತ್ತ ಸಹಿತೈತಂದರಶ್ವಿನಿದೇವನಂದರು ॥ ೩೪ ॥

ಭರದಿ ಹೊಕ್ಕನು ಬಂದು ಭೀಷ್ಮನ ।
ಚರಣಕೆರಗಿ ಯುಧಿಷ್ಠರನ ಪದ ।
ಸರಸಿಜಕೆ ವೈಯಿಕ್ಕಿ ಪವನಜ ಪಾರ್ಥರಿಗೆ ನಮಿಸಿ ॥
ವರ ಚತುಃಸಾಗರದ ಮಧ್ಯದ ।
ಧರಣಿಪಾಲರು ಬಂದರೆಂದರೆ ।
ಹರುಷದಲಿ ಗಾಂಗೇಯ ಕೊಂಡಾಡಿದನು ಮಾದ್ರಿಜರ ॥ ೩೫ ॥

ಅಂದು ಭೀಷ್ಮ ದ್ರೋಣ ವಿದುರರು ।
ಮುಂದೆ ಧರ್ಮಜ ಭೀಮ ಫಲ್ಗುಣ ।
ರೊಂದುಗೂಡಿ ಸಮಸ್ತ ಪರಿಜನ ಸಹಿತ ನಲುವಿನಲಿ ॥
ಬಂದವರನಿದಿರ್ಗೊಂಡರವರವ ।
ರಂದು ವರ ನೃಪಚರಿಸಿ ಭೂಪರ ।
ಸಂದಣಿಸಿ ಬರುತಿರ್ದರಾಗಳೆ ಹಸ್ತಿನಾಪುರಕೆ ॥ ೩೬ ॥

ದೇಶದೇಶದ ಭೂಮಿಪಾಲರ ।
ಕೇಸರಿಯ ಪೀಠದಲಿ ಅಡರಿಸಿ ।
ಆ ಸಮಯದೊಳಗಿತ್ತರವರಿಗೆ ತಳಿಗೆ ತಾಂಬುಲವ ॥
ಹಾಸುವರೆ ಕಸ್ತೂರಿ ಸಹಿತ ಸು ।
ವಾಸನೆಯ ಗಂಧವನು ಕೊಟ್ಟರು ।
ಶಾಸಿಯುಲಿ ಪತಿಕರಿಸಿ ಗಂಗಾತನಯನೊಲವಿನಲಿ ॥ ೩೭ ॥

ಬಾ ಮಗನೆ ಕಲಿಪಾರ್ಥ ಕೇಳೈ ।
ಭೂಮಿಪಾಲರು ನಿನ್ನ ನೋಂಪಿಗೆ ।
ಸ್ತೋಮ ನೆರೆದಿದೆ ವರ್ಣ ನಾಲ್ಕರ ಬಹಳ ಬಲ ಜಲಧಿ ॥
ಆ ಮಹಾದ್ಭುತ ಯಿದರ ಮುದದಲಿ ।
ಸೀಮೆ ತಪ್ಪದೆ ನಡಸಿ ಕೊಡುವೆನು ।
ಸ್ವಾಮಿ ಸರ್ವಾತ್ಮಕನ ಕರೆತಾರೆಂದನಾ ಭೀಷ್ಮ ॥ ೩೮ ॥

ಅಂತು ಸಂಧಿ ೩ ಕ್ಕೆ ಪದ ॥ ೧೩೮ ॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ನಾಲ್ಕನೆಯ ಸಂಧಿ

ಸೂಚನೆ ||

ಚಂಡಭುಜಬಲವೀರ ಶೌರ್ಯೋ |
ದ್ದಂಡ ಫಲುಗುಣ ಕೃಷ್ಣದೇವರ |
ಕಂಡು ಬಿಜಯಂಗೈಸಿ ತಂದನು ಹಸ್ತಿನಾವುರಕೆ || ಪದ |

ಅರಸ ಕೇಳ್ಳೆ ಬಳಿಕ ಪಾರ್ಥನು |
ಯರದೆ ಭೀಷ್ಮಂಗೆರಗಿ ದ್ರೋಣನ |
ಸರಸಿಜಕ್ಕಭಿನಮಿಸಿ ಯಮನ ಸುತಂಗೆ ಕೈಮುಗಿದು ||
ವರ ಕನಕ ರಥವದನು ಹೂಡಿಯೆ |
ಶರಧನುಗಳನು ಕೊಂಡು ಹರುಷದಿ |
ಮುರಹರನ ಸ್ಮರಣೆಯಲಿ ಛಪ್ಪಂಸಿದನು ವಾಜಿಗಳ || ೧ ||

ಬಂದನಾ ಪುರವರಕೆ ಸಗುತ ಪು |
ರಂದರಾತ್ಮಜ ರಾಜಬೀದಿಯ |
ಮುಂದೆ ರಥವನು ಯಿಳಿದು ಕಂಡನು ಹರಿಯ ಮಂದಿರವ ||
ಸೆಂದನವನಿಳಿದ್ಯೆದಿ ನೆರೆ ತಂ |
ದಿಂದಿರಾಪತಿ ಮನೆಯ ಬಾಗಿಲ |
ಮುಂದೆ ಬಂದನು ಕಾಯ್ವನವರಿಗೆ ಹೇಳಿದನು ಹದನ || ೨ ||

ದ್ವಾರಪಾಲರು ಹೋಗಿ ಭರದಲಿ |
ಕ್ಷೀರವಾರುಧಿಶಯನನಂಘ್ರಿಗೆ |
ಚಾರು ನೊಸಲನು ಚಾಚಿ ಕರಗಳ ಮುಗಿದು ಬಿನ್ನೈಸಿ ||
ವೀರನರ್ಜುನ ಬಂದು ಬಾಗಿಲ |
ಸಾರಿದನು ನಿಮ್ಮಡಿಯ ಕೋಮಳ |
ಚಾರು ಚರಣಾಂಬುರುಹ ದರುಶನಕೆಂದು ಕೃಷ್ಣಂಗೆ || ೩ ||

ಕೇಳಿದನು ಮುರವೈರಿ ಪಾರ್ಥನ ।
ಮೇಲೆ ಮೋಹದ ಮಮತೆಯಿಂದಲಿ ।
ಲೋಲ ಫಣಿಮಣಿಯೆಸೆವನಂತನ ಸಿಂಹಪೀಠದಲಿ ॥
ಶ್ರೀಲತಾಂಗಿಯ ಮನೋಹರ ವರ ।
ಮೇಲೆ ವಸುಮತಿ ಸಹಿತ ಲಕ್ಷ್ಮೀ ।
ಲೋಲನೋಲಗಗೊಟ್ಟು ಬರಹೇಳೆಂದು ನೇಮಿಸಿದ ॥ ೪ ॥

ರಾಗದಲಿ ನಡೆತಂದು ಪಾರ್ಥಗೆ ।
ಬಾಗಿಲವರಾ ಕೃಷ್ಣರಾಯನು ।
ಬೇಗದಲಿ ಬರಹೇಳಿದನು ತಾ ತನ್ನ ಸನ್ನಿಧಿಗೆ ॥
ಆಗ ಕಾಣಿಕೆವಿಡಿದು ಹರುಷದ ।
ಸಾಗರದಲುಬ್ಬೆದ್ದು ಮುದದಲಿ ।
ಭೋಗಿಶಯನನ ಕಂಡನಿಂದ್ರಕುಮಾರ ನಲುವಿನಲಿ ॥ ೫ ॥

ನೆರೆ ಸುಮೇಘಶ್ಯಾಮಲಾಂಗದ ।
ಕರುಣದಲಿ ಯೆಲ್ಲೆಸೆವ ಮುಕುಟದ ।
ವರ ಲಲಾಟದೊಳೂರ್ಧ್ವ ತಿಲಕದ ಮಕರಕುಂಡಲದ ॥
ಸರಸಿರುಹದಳ ದೃಶ ಸುನಾಸಿಕ ।
ಅರುಣಧರ ವರನಿತ್ತು ದಂತದ ।
ಸಿರಿಮೊಗದ ನಸುನಗೆಯ ಮೂರ್ತಿಯ ಕಂಡನಾ ಪಾರ್ಥ ॥ ೬ ॥

ಕರಿಯ ಧರರಂದದಲಿ (ಕರದಂಡದಲಿ) ರಂಜಿಸಿ ।
ಕರ ಚತುರ್ಭುಜ ಕಂಕಣಂದದ ।
ವರಗದಾಂಬುಧಿ ಶಂಖಚಕ್ರದ ಪದಕ ಮುದ್ರಿಕೆಯ ॥
ಕೊರಳ ಕೌಸ್ತುಭ ವೈಜಯಂತಿಯ ।
ಸಿರಿ ಪಿತಾಂಬರದೆಸೆವ ನಾಭಿಯ ।
ಸರಸಿಜದ ಪರಮೇಷ್ಠಿವೆರಸಿದ ಹರಿಯನೀಕ್ಷಿಸಿದ ॥ ೭ ॥

ಘೋರ ಕದಳಿಯ ಕಂಭದುರಸದ ।
ಲೇರಿಸಿದ ತೊಡರುಗಳು ಜಗದಲಿ ।
ವೀರದೈತ್ಯರ ಗಂಡನೆನಿಸುವ ಬಿರುದು ಮುಂಡಿಗೆಯ ॥
ಚಾರುಧ್ವಜವಂಕುಶ ಮನೋಹರ ।
ಕಾರ ಪಾದದಿ ಜಗವನೆಲ್ಲವ ।
ಮೂರಡಿಯೊದಳೆದಮಳದಂಘ್ರಿಯ ಕಂಡನಾ ಪಾರ್ಥ ॥ ೮ ॥

ಭೂಮಿ ಲಕ್ಷ್ಮಿಯರಾದ ವಾಮಹ ।
ಲಾ ಮಹಬಲ ಗರುಡನಾಭಿಯ ।
ಸೀಮೆ ತಪ್ಪದೆ ಬೆಡೆಯ ಕೊಡೆವಿಡಿದಹಿಪನೆಸೆದಿರಲು ॥
ಕಾಮ ಸಂಭಾವಿಗಳು ಮೆರೆದಿರೆ ।
ಸೋಮಮುಖ್ಯ ಕುಲೇಶನಾಗಳೆ ।
ರಮಣಿನಾಥನ ಕಂಡು ಪಾದಕೆ ಬಿದ್ದನಾ ಪಾರ್ಥ ॥ ೯ ॥

ದೇವ ಜಯ ಜಯ ಭಕ್ತ ಜನರನು ।
ಕಾವ ಜಯ ಜಯ ದುರಿತ ಯಿನಕುಲ ।
ದೇವ ಜಯ ಜಯ ಸಕಲ ಭುವನೇಶ್ವರನೆ ಜಯ ಜಯತು ॥
ಭಾವಿಸುವ ಮುನಿವರನೆ ಜಯ ಜಯ ।
ಶಿವ ನೆನೆವರ ದೇವ ಜಯ ಜಯ ।
ಪಾವನಾಂಬುಧಿಶಯನ ಜಯ ಜಯ ಯೆನುತ ಪೊಡಮಟ್ಟ ॥ ೧೦ ॥

ಸತ್ಯ ಜಯ ಜಯ ಸಕಲ ಲೋಕದ ।
ಕರ್ತ ಜಯ ಜಯ ಭಾಗವತಜನ ।
ವಸ್ತು ಜಯ ಜಯ ಜೀವಿಚೇತಾತ್ಮಕನೆ ಜಯ ಜಯತು ॥
ಮತ್ತಗಜ ಮೋಕ್ಷಕನೆ ಜಯ ಜಯ ।
ಚಿತ್ತಜನವರ ಪಿತನೆ ಜಯ ಜಯ ।
ಸತ್ಯಭಾಮೆಯ ರಮಣ ಜಯ ಜಯ ಯೆನುತ ಪದಯುಗಕೆ ॥ ೧೧ ॥

ಹರಿಯೆ ಜಯ ಜಯ ತನ್ನ ನೆನೆವರ ।
ಸಿರಿಯೆ ಜಯ ಜಯ ಸುರಕಟಕ ಮಣಿ ।
ಚರಣ ಜಯ ವರ ಕಾವ ವಂದ್ಯನೆ ಜಯತು ಜಯತೆಂದ ॥
ಹರಿ ನಮೋ ಜಯ ಭಕ್ತರಘ ಸಂ ।
ಹರನೆ ಜಯ ಜಯ ಸಕಲ ಲೋಕದ ।
ಪರಮ ಪುರುಷರ ಪುರುಷ ಜಯ ಜಯ ಹರಿಮುರಾಂತಕನೆ ॥೧೨॥

ಪರಮ ಪುರುಷೋತ್ತಮನೆ ಜಯ ಜಯ ।
ದುರಿತದಘಕುಲ ಹರನೆ ಜಯ ಜಯ ।
ಕರುಣಿ ಭಕ್ತರ ಕಾವ ಜಯ ಜಯತೆಂದನಾ ಪಾರ್ಥ ॥
ಶರಣು ಜಯ ಜಯ ಲಕ್ಷ್ಮಿದಾತನೆ ।
ಮರಣ ಸಂಹರ ದೇವ ಜಯ ಜಯ ।
ಸುರರ ಸಲಹುವ ದೇವ ಸಲಹೆಂದೆರಗಿದನು ಪದಕೆ ॥ ೧೩ ॥

ಇಂತು ಫಲುಗುಣ ಸ್ತುತಿಸಿ ಲಕ್ಷ್ಮೀ ।
ಕಾಂತ ಕರುಣವ ತೋರಿ ಮನದಲಿ ॥
ಸಂತಸವು ನಮಗಾಯ್ತು ಬಳಲಿದೆ ಸಾಕುನಿಲ್ಲೆನುತ ॥
ಅಂತರಂಗದಿ ನೆನೆದಿಹುದು ತಾ ।
ನೆಂತು ಹೇಳ್ವೆ ಬಂದ ಕಾರ್ಯವ ।
ಚಿಂತೆ ಬೇಡೆಲೆ ಪಾರ್ಥ ಯೆಂದನು ಕೃಪೆಯ ಭಾವದಲಿ ॥ ೧೪ ॥

ಜೀಯ ಚಿತ್ತೈಸೆಂದು ಭೂಪತಿ ।
ಆಯತಾಂಬಕಿ ಸುಬಲೆ ಪತಿ ಸುರ ।
ರಾಯಗಜ ಹೋಲಿಕೆಗೆ ಮೃತ್ತಿಕೆಯಿಂದೆ ನೆರೆಮಾಡಿ ॥
ತಾ ಯುವತಿ ನೋಂಪಿಯನು ಕೊಟ್ಟಳು ।
ಕಾಯದುಬ್ಬಿನದಲ್ಲಿ ನಮ್ಮಯ ।
ತಾಯ ಕರೆಯದೆ ಮರೆದು ನೋಂತಳು ದೇವಿ ಗಾಂಧಾರಿ ॥ ೧೫ ॥

ಅಂದು ಮನದಲಿ ಮರುಗಿ ಕೊಂತಿಯು ।
ನೊಂದು ನಮಗೆವೆ ಹೇಳಿದಾಗಳೆ ।
ಯಿಂದ್ರಪುರಕೋಲೆಯನು ಬಿನ್ನಪದಿಂದ ಬರೆಸಿದೆನು ॥
ಒಂದು ಕ್ಷಣ ನಾ ನಿಮ್ಮ ಚರಣ ।
ದ್ವಂದ್ವವನು ನೆನೆವುತ್ತ ಸರಳನು ।
ತಂದು ಲಿಖಿತವ ಕೊಟ್ಟು ಕಳುಹಿದೆನ್ನೆಮ್ಮನಿದ್ದೆಡೆಗೆ ॥ ೧೬ ॥

ಅಲ್ಲಿ ನಾರದ ಮುನಿಪನೋಲೆಯು ।
ಸೊಲ್ಲನೆಲ್ಲವ ತಿಳುಹಿ ಸುರಪುರ
ವಲ್ಲಭನು ಮದಗಜವ ಕಳುಹುವನೆಂದು ಕಳುಹಿದನು ॥
ಅಲ್ಲಿ ನೋಡುವರಿಲ್ಲ ದೇಶವ ।
ವಲ್ಲಭರ ಕರೆತಂದರ್ಕೆ ಸಲೆ ।
ನಿಲ್ಲದ್ಹೇಳಿಸಲಾಯ್ತು ನನ್ನನು ನಿಮ್ಮ ಬಳಿಗೈಸೆ ॥ ೧೭ ॥

ನಮಗೆ ಹಿರಿಯರು ಭೀಷ್ಮಚಾರಿಗ ।
ಳಮಳ ಬಾಂಧವ ಹೇಳಿಸಿದ ಯೀ ।
ನಿಮಗೆ ನೋಂಪಿಗೆ ಕರೆವುದುಚಿತವು ತಮ್ಮ ಬಂಧುಗಳ ॥
ಈ ಮಹಾ ಬುದ್ಧಿಯನು ಹರುಷದಿ ।
ಭೀಮ ಯಮಸುತ ನಾವು ಬೇಗೇ ।
ಸಮಯ ಕರೆಯಲಿ ಹೋಗಿ ಪುತ್ಸಹವೆಂಬವರ ಮನೆಗೆ ॥ ೧೮ ॥

ನಾವು ಕರೆದೆವು ಭೀಷ್ಮರೊಚನದಿ ।
ನೀವು ಬರಬೇಕೆಂದು ಕುರುಪತಿ ।
ಯೊವ ಧೃತರಾಷ್ಟ್ರಂಗೆ ದುಶ್ಯಾಸನನ ಸದನಕ್ಕೆ ॥
ಸಾವಿರಕ್ಷನ ಗಜದ ನೋಂಪಿಗೆ ।
ನಾವು ಕರೆದೆವು ಹರುಷದಿಂದಲಿ ।
ನಾವು ಬಾರೆವು ನಿಮ್ಮ ನೋಂಪಿಗೆಯೆಂದು ಗರ್ವದಲಿ ॥ ೧೯ ॥

ಸುತ್ತ ಗ್ರಾಮದ ರಾಯರುಗಳಿಗೆ ।
ಭೂತಳದೊಳಾರುಂಟು ಅಕಟಕ ।
ಟೋತು ಯೀ ಜಗದೊಳಗೆ ನಿನ್ನಂತವರು ಮುನ್ನುಂಟೆ ॥
ಪೂತು ಫಲುಗುಣ ನಿನ್ನ ಹೋಲುವ ।
ಖ್ಯಾತರುಂಟೇ ಜಗದೊಳಿಂದು ।
ಪ್ರೀತಿಯಿಂದಲಿ ಹೊಗಳಿದನು ಮುರಹರನು ಕರುಣದಲಿ ॥ ೨೦ ॥

ಬಿನ್ನಹವ ಚಿತ್ರೈಸು ದೇವರ ।
ರನ್ನದೊಲಹಿನ ಕರುಣವಲ್ಲದೆ ।
ನನ್ನ ಘನತೆಯು ಯೇನು ಯಿದ್ದದು ನಿಮ್ಮ ಕೃಪೆಯಿಂದ ॥
ಅನ್ಯ ಭೇದವನರಿಯದೀಪರಿ ।
ಪುಣ್ಯ ವಸ್ತುವನಂಬಿದರೆ ನೀ ।
ಭಿನ್ನವಾಗಿರೆ ಯೆಂದಿಗಾದರೆ ಯೆಂದನಾ ಪಾರ್ಥ ॥ ೨೧ ॥

ದೇವ ಚಿತ್ರೈಸೆನ್ನ ಜನನಿಯು ।
ಸಾವಿರಕ್ಷನ ನೋಪಿನೋಸಲ ।
ದಾವಕೊಡೆಯರ ಕಾಣೆ ನಾವೇ ತರಳರಿದರೊಳಗೆ ॥
ಭಾವಿಸಲು ಕರುಣಾವ ವರಗುರು ।
ದೇವ ನೀ ಗತಿಯೆಂದು ಯೆಮ್ಮಯ ।
ಕಾವ ಕರುಣವ ತೋರಿ ಬಿಜಯಂಗೈಸ ಬೇಕೆಂದ ॥ ೨೨ ॥

ಆದರಿನ್ನೇನಾಯ್ತು ನಮ್ಮಯ ।
ಸೋದರತ್ತೆಯ ನೋಪಿಯನು ನಾ ।
ಭೇದವಿಲ್ಲದೆ ನಡೆಸಿ ಕೊಡುವೆವು ನಿಮಗೆ ಕರುಣದಲಿ ॥
ಮೇದಿನಿ ಶೀದೇವಿ ಸಹಿತವೆ ।
ವೇದವಂದ(ವೇದ್ಯ)ನು ನಿಗಮ ಗೋಚರ ।
ವೇದಪುರುಷನು ಕೃಷ್ಣನೊರವಂಟನು ನಿಜಾಲಯುವ ॥ ೨೩ ॥

ದಾರುಕನು ಸೆಂದನವ ಹೂಡಿದ ।
ವೀರಗರುಡನ ಧ್ವಜವನಡರಿದ ।
ಮುರಮುರಾಂತಕ ನೊರಟ ದೇವಿಯು ಸಹಿತ ರಭಸದಲಿ ॥

ಭೇರಿ ನಿಸ್ಸಾಳಗಳು ತಮ್ಮಟ ।
ವುರವಣಿಸಿ ಡುಡುಹುಗಳನಿಕ್ಕಿದ ।
ವರ ಘುಡಿಸಿ ಕಹಳೆಗಳು ದೈತ್ಯಾರಾತಿ ಬಿರುದುಗಳ ॥ ೨೪ ॥

ಕೊಡೆಯ ಡೊಳ್ಳಿನ ನಾಗಸರಗಳ ।
ಗಿಡಿಬಿಡಿಯ ವುಪಾಂಗುಳ ಮೊದಲಿನ ।
ಮೃಡ ಮೃದಂಗದ ಢಕ್ಕೆಡೌಡಿಯು ಬಗೆಗು ಬೊಬ್ಬೆಯು ॥
ಹಿಡಿವ ಚೆಗ್ಗಾಳೆಗಳ ಕೊಂಬಿನ ।
ಘುಡಿಘುಡಿಪ ಡಮರುಗಳ ರಭಸಕೆ ।
ಒಡೆದುದಬುಜಾಂಡದಲಿ ಮೊರೆದವು ನಾನ ಬಹುವಾದ್ಯ ॥ ೨೫ ॥

ಎತ್ತಿಹಿಡಿದವು ಮೇಲೆ ಮುತ್ತಿನ ।
ಸತ್ತಿಗೆಗಳಗಲದಲಿ ಗಗನವ ।
ಮುತ್ತಿ ಕೆಂಬೊಲೆಸೆವದಗಣಿತ ಧ್ವಜ ಪತಾಕೆಗಳು ॥
ಮುತ್ತು ಮಾಣಿಕ ಕನಕ ದಂಡದ ।
ಕೆತ್ತಿಸಿದ ನಿಜಸ್ವೇತ ಚಾಮರ ।
ಝುತ್ತರದಲಾಡಿದವು ಸರ್ವಾತ್ಮಕನ ಸಿರಿಮುಡಿಗೆ ॥ ೨೬ ॥

ಮುರವಿರೋಧಿಯ ತೊಟ್ಟ ದೈತ್ಯನ ।
ಸುರವಿಭಾಡನ ಮೆಟ್ಟ ಕಡಹಿಪ ।
ಖರ ಹಿರಣ್ಯನ ಸೀಳೆ ಹೊಟ್ಟೆಯ ಕರುಳತೆಗೆದವನೆ ॥
ವರ ಮಹಾ ಲಂಕಾಧಿನಾಥನ ।
ನೊರಸಿದಾತನೆ ಮೆಟ್ಟ ಬಲಿಯನು ।
ಯಿರದೆ ತುಳಿದನ ತೋಟೆ ಚೇರೆಂದೂದರಿದವು ಕಹಳೆ ॥ ೨೭ ॥

ನಿರದೆ ಕೇಶಿಯ ಮಡಹಿದಾತನೆ ।
ಧರೆಯ ಕಂಸಾಸುರನ ಕೊಂದನೆ ।
ಮಾರಿ ಪೂತನಿ ವಿಷವನೈದನೆ ಕೈಟಭಾಂತಕನೆ ॥
ಸಾರಿದೆಮಳಾರ್ಜುನರ ಮುರಿದನೆ ।
ವೋರುಗುಡಿಸಿದ ಭೇದ ಭೂಪರ ।
ಸಿರಿಯನರಿದನ ತೋಟ ಬೇರೆಂದೊದರಿದವು ಕಹಳೆ ॥ ೨೮ ॥

ಅಂದು ಗೋಕುಲದೊಳಗೆ ದೇವ ಪು ।
ರಂದರನು ಬಲು ಮಳೆಯ ಕರೆಯಲು ।
ಮುಂದೆ ಗಿರಿಯನು ಜೊಟ್ಟನಿಂದಲಿ ನೆಗಹಿ ಕಾಯಿದನೆ ।
ಪೋಷಿಸಿಯನೆಳೆದೊಯ್ದು ದೈತ್ಯನ ।
ಕಂಧರವ ಕತ್ತರಸಿ ಭೂಮಿಯ ।
ತಂದವನ ಬಲುತೋಟ ಬಿಡದೆಂದೊದರಿಡವು ಕಹಳೆ ॥ ೨೯ ॥

ಆಗ ಫಲುಗುಣ ಪುರಕೆ ದೂತರ ।
ಬೇಗ ಕಳುಹಿದರೈದೆ ಬಂದರು ।
ಭೋಗಿ ಶಯನನು ಜೀಯ್ಯ ಬಿಜಯಂಗೈದನೆಂದೆನುತ ॥
ಬೇಗ ವಸ್ತ್ರಾಭರಣ ವಿತ್ತನು ।
ಭಾಗಿರಥಿಸುತಗರುಹಿ ಯದುಕುಲ ।
ಸಾಗರೇಶನ ದರುಶನಕೆ ಬನ್ನೆನುತಲನನೀಕ ॥ ೩೦ ॥

ಅಲ್ಲಿ ನೆರದಿರ್ದಖಿಳ ಭೂಮಿಪ ।
ವಲ್ಲಭರು ಬಂಧುಗಳು ಸುಜನರು ।
ಹೇಳಲೇನದ ಸಕಲ ಸಡಗರದಿಂದಲಂಕರಿಸಿ ॥
ಪುಲ್ಲನಾಭನ ಕಾಂಬು ಸುಕೃತವ ।
ದಲ್ಲಿ ಸೇರುವದೆನುತ ಚೌಪಟ ।
ಮಲ್ಲರನುಗೈದಿದರು ರಥಹಯರೊಂದು ವೊಗ್ಗಿನಲಿ ॥ ೩೧ ॥

ಅಸಿಯು ನಡುವಿನಲೆಸೆವ ವಸನದ ।
ಮುಕುಳ ಭಾಷೆಯು ಘೋರ ಕುಚಗಳ ।
ಮುಕುಳ ಕಾಂತಿಯು ತೊಳಗಿ ಬೆಳಗುವ ಚರಣ ಪಲ್ಲವದ ॥
ಬಿಸಜವಳ ಲೋಚನದ ಚಲುವಿನ ।
ಮುಕುಳಿದಾಭರಣಗಳ ಕಾಂತಿಯು ।
ಶಶಿಮುಖಿಯರಾರತಿಯ ಪಿಡಿದರು ಪಾದದೊಗ್ಗಿನಲಿ ॥ ೩೨ ॥

ತೊಂಗಳಸ ಕನ್ನಡಿಯು ತಳಗಿಯು ।
ಮಂಗಳಾರತಿಗಳ ಸುಜಲದ ।
ರಂಗ ಮೌಕ್ತಿಕದಕ್ಷದಾರತಿಗಳ ಸುವಿಭವದಲಿ ॥
ಸಿಂಗರದ ಸುಗಂಧ ಪರಿಮಳ ।
ದಂಗವಟ್ಟಿದ ಹಂಸಗಮನದ ।
ತುಂಗ ಕುಚೆಯರು ನಡೆದರಾಗಣಿಕದದರೆ ಕೇಳೆಂದ ॥ ೩೩ ॥

ತೇರಲಂಕರಿಸಿದರು ರಥಿಕರು ।
ವಾರಣವ ಸಿಂಗರಿಸಿ ಮಾವುತ ।
ರೇರಿದರು ತೇಜಿಗಳ ಹಲ್ಲಣಿಸಿದರು ರಾವುತರು ॥
ವೀರ ಕಾಲಾಳೊದಗಿತಂಬುಧಿ ।
ಮೇರೆದಪ್ಪಿತೊ ಯೆಂದು ವನ ಭೂ ।
ಕಾಂತಮಳೆ ದೂಳಿಟ್ಟು ನಡೆದರು ನಾಲ್ಕು ದೆಸೆ ದೆಸೆಗೆ ॥ ೩೪ ॥

ಪೌರಜನ ಸಹಿತರಸನೈದಿಯೆ ।
ಗುರು ಭೀಷ್ಮಕ ವಿದುರಾದಿಗಳು ಸಹಿ ।
ತಿರದೆ ಬಂದರು ದೇವದೇವನ ಕಾಂಬ ತವಕದಲಿ ।
ಬೀರಿದವು ಕಹಳೆಗಳು ಬಿರುದಿನ ।
ಭೇರಿ ನಿಸ್ಸಾಳೂದ ತಮ್ಮಟ ।
ವೇರಿದವು ಕುರು ಹೊಗಳುಕಿಗಳನು ಬಿರಿದು ಕಮಲಜನ ॥ ೩೫ ॥

ಜನರು ಸಹಮಿಗೆ ಯಿರದೆ ಬಂದರು ।
ವೀರ ಗರುಡನ ಹಳವಿಗೆಯು ನೆರೆ ।
ಸರಿಸಿ ಯಿಳಿದರು ಬೇಗದಲಿ ತಮತಮಗೆ ಯಾ ರಥವ ॥
ಅರರೆ ಮೂಡಣ ಕಡಲು ಪಡುವಣ ।
ಶರಧಿಗೆರಗಿತೊ ಹರಿ ಪದವಿ ಸುರ ।
ಶಿರವಡಗಿತಾ ಕೆಡಹಿತಂಬುಜನಾಭ ಜಯಾಯೆನುತ ॥ ೩೬ ॥

ಅಂಗನೆಯನಿದಿಗೊಂಡು ತಳಿಗೆಯ ।
ಮಂಗಳಾರತಿಗಳ ನಿವಾಸ ನಿ ।
ರಂಗ ಮೌಕ್ತಿಕದಕ್ಷತೆಯು ಶಾಶಿ(ಸೇಸೆ)ಯಲಿ ಮಳೆಗರೆದು ॥
ಹಿಂಗದಚ್ಯುತನಂಘ್ರಿ ಕಮಲದ ।
ಸಂಗದಲಿ ಮೋಹಿಸುತ ನಾರಿಯು ।
ರಂಗಜನ ವರ ಪಿತನ ಕಂಗಳಲಿಕ್ಕಿದರು ಬಿಡದೆ ॥ ೩೭ ॥

ಎರಡು ಹಿಡಿಯಲಿ ತುಂಬಿ ರತ್ನವ ।
ಸುರಿದನವನೀಶ್ವರನು ಪಾದಕೆ ।
ಕರವ ಚರಣದಲಿಕ್ಕಿ ಮುರಹರ ತ್ರಾಹಿ ಯೆಂದೆನುತ ॥
ಕರವೆರಡ ಮುಗಿದೆದ್ದ ನನ್ನನು ।
ಪೊರವ ಕರುಣಾಜಲನಿಧಿಯೆ ನೀ ।
ವರವನಿತ್ತೆಮಗೆನುತ ಪೊಡಪಟ್ಟರು ಮಹೀನೃಪರು ॥ ೩೮ ॥

ಭೀಮ ಮಾದ್ರೀತನಯರಾತನ ।
ತಾಮ ರಸವನು ಮುಗಿದು ಲಕ್ಷ್ಮೀ ।
ಪ್ರೇಮನಂಘ್ರಿಯುಗಕ್ಕೆ ಕಾಣಿಕೆ ಕೊಟ್ಟು ಪೊಡಮಟ್ಟು ॥
ಸ್ವಾಮಿ ರಕ್ಷಿಸು ನಿನ್ನ ನೆನೆವರ ।
ಪ್ರೇಮ ರಕ್ಷಿಸು ಬಂಧು ಜನ ಸು ।
ಕ್ಷೇಮ ರಕ್ಷಿಸು ಕೃಷ್ಣ ಯೆಂದೆರಗಿದರು ಪದಯುಗಕೆ ॥ ೩೯ ॥

ಎದ್ದು ದ್ರೋಣಾಚಾರ್ಯ ಭೀಷ್ಮರು ।
ಸದಮಲಾನಂದೈಕ್ಯ ಭರಿತನ ।
ಪದಯುಗಕೆ ಅಭಿನಮಿಸಿ ಕರಗಳ ಮುಗಿದು ನಮೊ ಯೆನುತ ॥
ವದದ ಮುನಿವರಗೊಲಿದು ತೇಜವ ।
ಮುದದಿ ಕೊಟ್ಟೆ ಮಹಾತ್ಮ ಜಯ ಜಯ ।
ಯದುಕುಲಾಂಬುಧಿಚಂದ್ರ ಸಲಹೆಂತೆಂದರಚ್ಯುತನ ॥ ೪೦ ॥

ಲೋಕನಾಥನ ಕಂಡು ಭೂಸುರ ।
ರೇಕ ಮತದಲಿ ಬಂದು ಕೊಟ್ಟರು ।
ನಾಕು ವೇದೋಚ್ಚರಣೆಯಿಂದನೆ ಮಂತ್ರಪಕ್ಷತೆಯ ॥
ನಾಕ ಪುರಪತಿ ವಂದ್ಯ ಜಯ ಹರಿ ।
ನಾಕು ಲೋಕದ ವಿಜಯವಂದ್ಯನೆ ।
ಹೇ ಕಮಲನಾಭೆಂದು ಸಹಿಸಿದರ ರಾಜ ಘೋಷವಲಿ ॥ ೪೧ ॥

ಆ ಸಕಲ ಪರಿವಾರ ಪುರ ಜನ ।
ವಾ ಸಕಲ ಪುರವರ್ಗ ಮೊದಲಾ ।
ದಾ ಸಕಲ ಸ್ತ್ರೀ ಬಾಲ ವೃದ್ಧರು ಕಂಡರಘಹರನ ॥
ವಾಸವಾರ್ಚಿತ ಚರಣ ಜಯ ಜಯ ।
ಸಾಸಿರಕ್ಷಕ್ಷರನೆ ನಮೋ ಜಯ ।
ವಾಸುದೇವ ಮುಕುಂದ ನೀ ಸಲಹೆಂದರಚ್ಯುತಗೆ ॥ ೪೨ ॥

ಸೊಂಡಿಲನು ನೆರೆ ನೆಗಹಿ ಕರಿಘಟೆ ।
ಪುಂಡರೀಕಾಕ್ಷನನ ನಮಿಸಿದ ।
ಮಂಡಲದ ವಳಗೊಳಗೆ ತೇಜಿಗಳೊಗ್ಗಿದವು ತಮಗೆ ॥
ಚಂಡರುಚಿರದ ಕೋಟಿ ತೇಜನ ।
ಕಂಡುವೀ ಜಗವೆಲ್ಲ ಭಕ್ತರ ।
ನಂಡಲೆದು ಪಾಲಿಸಿದನವನೀಪಾಲ ಕೇಳೆಂದ ॥ ೪೩ ॥

ಎನಲು ವುಪಚರಿಸಿದನು ಸಾರಥಿ ।
ಕನಕಮಯ ನಿಜರಥವನಾಗಳೆ ।
ಎನಿತು ವಿಭವದಲೈಸಿದುಬ್ಬಿನ ಮೇಳದೊಲವಿನಲಿ ॥
ಮನುಮಥನ ಪಿತ ಬರಲು ನಾಲ್ಕುವ ।
ವನಧಿ ನಡಿಗುಡುವಂತೆ ಭರದಲಿ ।
ಚಿನುಮಯನು ಬರುತಿರ್ದನಧಿಕ ಮನೋನುರಾಗದಲಿ ॥ ೪೪ ॥

ಕರಿಘಟೆಯು ಕುರುವಗಲ ತೇಜಿಯು ।
ಭರದಳುಳಿ ಥೆರೆ ಥೆರೆ[ಯು*]ತೇರಿನ ।
ಹೊರಳಿಸುಳಿಗಳ ಛತ್ರಚಾಮರ ಬಾ(ಬ)ಹಳದಬ್ಬ[ರ*]ದ ॥
ವರಜಲೊಪ್ಪುವ ಜಲಚರಂಗಳ ।
ಮೊರೆವ ವಾದ್ಯದ ಘೋರ ಘೋಷದ ।
ಅರರೆ ಜಲನಿಧಿಯಂತೆ ಮೆರೆದುದು ಹರಿಯ ಬಲಜಲಧಿ ॥ ೪೫ ॥

ಬಂದನಾ ಪುರವರಕೆ ಪರಮಾ ।
ನಂದದಲಿ ಮುರವೈರಿ ದಾರುಕ ।
ಸೆಂದನವನಿಳಿಸಿದನು ಮೊಳಗಿದವಖಿಳ ಬಹುವಾದ್ಯ ॥
ಇಂದಿರಾಚಲ ನಭದೊಳಗೆ ಯಿಳಿ ।
ವಂದು ಧರೆಗಿಳಿವಂತೆ ದೇವಮು ।
ಕುಂದನಿಳಿದನು ರಥವ ಜಯ ಜಯತೆಂದುದಾ ಸ್ತೋಮ ॥ ೪೬ ॥

ಅಲ್ಲಿ ಗಂಗಾತನುಜ ಕೈಗುಡೆ ।
ಮೆಲ್ಲ ಮೆಲ್ಲನೆ ಕಾಲ ನಡೆಯಲಿ ।
ವಲ್ಲಭಗೆ ಧ್ವಜ ವಜ್ರದಂಕುಶ ರೇಖೆಗಳನಿಡುತ ॥
ಚಲ್ಲಿದರು ಸೇಸೆಯನು ನಾರಿಯ ।
ರೆಲ್ಲ ರತ್ನಾರತಿಯನೆತ್ತಲು ।
ಫುಲ್ಲನಾಭನು ಬಂದು ಹೊಕ್ಕನು ರಾಜಮಂದಿರವ ॥ ೪೭ ॥

ಮುಂದೆ ಮಣಿಪೀಠದಲಿ ರಾವಣ ।
ದಿಂದೆ ವೋಲಗ ಕೊಟ್ಟು ಕುಳ್ಳಿರೆ ।
ತಂದು ಗಂಗಾ ಜಲವ ಹೊಂಗಳಸಂಗಳಳವಡಿಸಿ ।
ಮಂದರಾಧರನಂಘ್ರಿಕಮಲದ ।
ದ್ವಂದ್ವಕಭಿಷೇಕವನು ಮಾಡಿದ ।
ರಂದು ತೀರ್ಥವ ಧರಿಸಿಕೊಂಡರು ಪಾಂಡುನಂದನರು ॥ ೪೮ ॥

ಭರದಿ ಮಧುಪರ್ಕಾದಿ ಷೋಡಶ ।
ವರ ಮಹಾ ಸಾಕಾರದಲಿ ಮುರ ।
ಹರನ ಪೂಜಿಸುತಿರಲು ಬಂದಳು ಕೊಂತಿ ಹರುಷದಲಿ ॥
ಹರಿ (ಹರ)ಚತುರ್ಮುಖ ಪೂಜ್ಯನಂಘ್ರಿಗೆ ।
ಕರವ ಮುಗಿದೆರಗಿದಳು ನಮ್ರಸು ।
ಹೊರೆವ ಕರುಣಾನಿಧಿಯೆ ನೀ ವೈದೋರಿದ್ಯೆ ತನಗೆ ॥ ೪೯ ॥

ಶೌರಿ ಜಯ ಜಯ ಭಕ್ತರಘ ಸಂ ।
ಹಾರಿ ಜಯ ಜಯ ದುರಿತವಿಪಿನಕು ।
ಠಾರಿ ಜಯ ಜಯ ಕೃಷ್ಣ ದಾಮೋದರ ಜಗನ್ನಾಥ ॥
ವರವನಿತ್ತೆ ಕುಲೇಶ ಮದ ಕಂ ।
ಠೀರವ ಜಯ ಜಯ ನಿನ್ನ ಚರಣವ ।
ಸಾರಿದೆನು ಸಲಹೆಂದು ಬಿದ್ದಳು ಹರಿಯ ಚರಣದಲಿ ॥ ೫೦ ॥

ಹರಿಯೆ ರಕ್ಷಿಸು ಮತ್ಸ್ಯ ಕೂರ್ಮ ।
ವರಹ ಶ್ರೀನರಸಿಂಹ ವಾಮನ ।
ಪರುಷಧರ ಶ್ರೀರಾಮ ದಶರಥರಾಮ ಬಲರಾಮ ॥
ವರ ಮಹಾ ಬೌದ್ಧಾವತಾರನೆ ।
ಪರಮ ಘನ ಕಲ್ಕ್ಯವತಾರನೆ ।
ಹರುಷದಲಿ ಪಾಲಿಸುವದೆಂದಳು ಕೊಂತಿ ಕೃಷ್ಣಂಗೆ ॥ ೫೧ ॥

ಮಕರ ಕುಂಡಲ ಧರಿಸಿ ಮೆರೆವಾ ।
ಹಕುಲ ದೈತ್ಯರನೊರಸಿ ಭಕ್ತರ ।
ಸಾಕಿದಾತನೆ ಕೃಷ್ಣ ಮಧುಸೂದನನೆ ಜಯಯೆನುತ ॥
ಪ್ರಕಟ ನೀಲಾಭಂಗ ಜಯ ಜಯ ।
ಅಕುಟಿಲನೆ ಪರಬ್ರಹ್ಮ ಜಯ ಜಯ ।
ರುಕುಮಿಣೀಪತಿ ಕೃಷ್ಣ ಜಯತೆಂದೆರಗಿದಳು ಕೊಂತಿ ॥ ೫೨ ॥

ಪಂಕರುಹದಲನೇತ್ರ ಜಯ ಜಯ ।
ಪಂಕರುಹ ನಿಜವರದ ಜಯ ಜಯ ।
ಪಂಕಜಾಸನ ವಂದಿತಾಂಘ್ರಿಪ ಜಯ ಜಯಾ ಜಯತು ॥
ಪಂಕರುಹನರನಾಭ ಮಹಿಮನೆ ।
ಪಂಕಜೋದರ ಕೃಷ್ಣ ಸಲಹೆನೆ ।
ಪಂಕಜಾದಳನೇತ್ರ ಯೆಂದೆರಗಿದಳು ಪದಯುಗಕೆ ॥ ೫೩ ॥

ವೇದಮಯ ವೇದಾಂತವೇದ್ಯನೆ ।
ವೇದನಿಗಮಾತೀತನೇ ವರ ।
ವೇದಮಯಧಿಕ ಚರಣ ಯುಗಳಿಪ ವೇದ ಜಯ ಜಯತು ॥
ಮಾಧವನೆ ಗೋವಿಂದ ನಮ್ಮಯ ।
ಸೋದರ(ನೆ)ನಧೀಶ್ವರನೆ ಸೇವಿತ ।
ಮೇದಿನೀಪತಿ ಕೃಷ್ಣ ಸಲಹೆಂದೆರಗಿದಳು ಕೊಂತಿ ॥ ೫೪ ॥

ಏಳು ಸಾಕೆಂದೆನುತ ಆಕೆಯ ।
ಭಾಳವನು ಹಿಡಿದೆತ್ತಿ ಲಕ್ಷ್ಮೀ ।
ಲೋಲ ಕೊಂತಿಯ ಭಕ್ತಿಭಾವಕೆ ಮೆಚ್ಚಿ ಕೃಪೆಯಿಂದ ॥
ಶೀಲೆ ಗುಣ ಸಂಪನ್ನೆ ಬಾರಾ ।
ಕೇಳು ನೋಂಪಿಯ ನಡೆಸಿ ಕೊಡುವೆವು ।
ಮೇಲೆ ನೀ ಚಿಂತಿಸದಿರೆಂದನು ದಾನವಾರಾತಿ ॥ ೫೫ ॥

ಅತ್ತ ಸುರಪನ ಗಜದ ನೋಡಿಯು ।
ಯಿತ್ತ ಭಾಗ್ಯವುದೆಂದು ಹರಿ ಸ ।
ರ್ವಾತ್ಮಪದ ದೊರಕುವದು(ದ)ದಾರಿಗೆ ದೈವ ನೋಡೆಂದ ॥
ಯಿತ್ತು ಬಹಳ ಪುಣ್ಯ ಸುಕೃತವ ।
ದೆಂತು ಪಡೆದಳೊ ಭಾವುರಿ ತಾ ।
ಯಿಂತು ಭೂಪಾಲಕರು ನೋಡಿದರು ಜಯಘೋಷದಲಿ ॥ ೫೬ ॥

ಇತ್ತ ಕುಶ್ವರಿ ಸಕಲ ಭೂಪರ ।
ನೊತ್ತ ದಿವ್ಯಾಸನದ ನೆರೆಯಲಿ ।
ಮತ್ತೆ ಪುರಜನ ಸರ್ವ ಜನವಿರಲಿಷ್ಟ ಸಭೆಗಳಲಿ ॥
ಇತ್ತ ನೊಡ್ಡೋಲಗವ ಲಕ್ಷ್ಮೀ ।
ಕಾಂತನತ್ತಲು ಕರೆದು ಕೇಳ್ವೆ ।
ಹೊತ್ತುಗಳೆಯಲಿಬೇಡ ಕರಪಂಜರವ ರಚಿಸೆಂದ ॥ ೫೭ ॥

ಅಂತು ಸಂಧಿ ೪ ಕ್ಕೆ ಪದ ॥ ೧೯೫ ॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಐದನೆಯ ಸಂಧಿ

ಸೂಚನೆ ||

ಕಟ್ಟಿದನು ಶರಪಂಜರಂಗಳ ।
ಬಟ್ಟೆಯಾಯಿತು ಧರೆಗೆ ಗಗನಕೆ ।
ದೃಷ್ಟಿ ಹಲವುಳ್ಳವನು ಕಳುಹಿದ ಸಕಲ ವಸ್ತುವನು ॥ ಪಲ್ಲ ॥

ವನರುಹಕೆ ನಮಿಸಿದನು ಹರಿಪದ ।
[1]ಚರಣಕಭಿನಮಿಸಿದನು ಕರಗಳ ।
ವಿನಯದಲಿ ಮುಗಿದೆದ್ದು ಜಯ ಜಯ ಕರುಣಸಾಗರನೆ ॥
ಮನಸಿಜನ ವರಪಿತನೆ ಜಯ ಜಯ ।
ಸನಕನಾರದವಂದ್ಯ ಜಯ ಜಯ ।
ವಿನಿತು ಗುಣಗಂಭೀರ ಜಯ ಜಯತೆಂದನಾ ಪಾರ್ಥ ॥ ೧ ॥

ದೆಸೆದೆಸೆಯ ನೋಟಕ ಜನಂಗಳು ।
ಮುಸೆದು ಕವಿದದು ಕಾಣೆನಳತೆಯ ।
ವಸುಧಿಪತಿಗಳ ಬರವ ಬಣ್ಣಿಸಬಲ್ಲ ಕವಿಯಾರು ॥
ಮುಸುಕಿದನು ರವಿ ಧೂಳಿಯಿಂದಲಿ ।
ಕುಸಿದುದಾ ದಿಗ್ದಂತಿ ಭಾರಕೆ ।
ಉಸಿರು ತೆಗೆದಂತಾದ ನಾಗನು ಭೂಪ ಕೇಳೆಂದ ॥ ೨ ॥

ನೆರೆದ ದಿವಿಜರು ಯೆಲ್ಲ ಹಿಂದಿನ ।
ತೆರದಿ ನೋಡಲಿ ಯೆನುತ ಫಲ್ಗುಣ ।
ಶರಧನುವ ರಚಿಸಿದನು ನಾನಾಪರಿ ವಿಧಾನದಲಿ ॥
ಅರಸು ಧರ್ಮಜ ಕೊಂತಿ ಭೀಮರ ।
ಚರಣದಲಿ ಚಾಚಿದನು ನೊಸಲಲಿ ।
ಗುರುವು ದ್ರೋಣಾಭೀಷ್ಮಕೃಷ್ಣಂಗೆರಗಿದನು ಪಾರ್ಥ ॥ ೩ ॥

---

1. ಇಲ್ಲಿ ಪ್ರಾಸಭಂಗವಿದೆ

ನರನು ಕೋದಂಡವನು ತಾ ನಿಜ ।
ಕರತಳದಿ ಬಿಗಿದೊತ್ತಿ ಬಾಗಿಸಿ ।
ಪರಬಲಾಂತಕ ಪಾರ್ಥನೇರಿಸಿ ತೊಡಸಿದನು ಸರಳ ॥
ಸರಳಗಳ ಮಂತ್ರಿಸಿದ ಗರುಡಿಯು ।
ಗುರುವ ನೆನೆದನು ಧರ್ಮರಾಯನ ।
ಚರಣದಲಿ ತಾನೆರಗಿ ಜನನಿಯ ಹರಕೆಗಳ ಕೊಳುತ ॥ ೪ ॥

ಹಿಡಿದನೊಂದಂಬುವನು ತಿರುವಿಗೆ ।
ತೊಡಸಿದರೆ ಹತ್ತಾಯ್ತು ಧನುವಿಂ ।
ಬಿಡಲು ನೂರು ಸಹಸ್ರ ಲಕ್ಷವು ಕೋಟಿ ಸಂಖ್ಯೆಗಳು ॥
ಕಡಿಗೆ ಹೆಚ್ಚಿದ ಬಾಣದಳತೆಯು ।
ಮೃಡನು ತಾನೇ ಬಲ್ಲ ಶರದಿಂ ।
ಡಿಡಿದುದಂಬರವೇನನುಸುರುವೆನರಸ ಕೇಳೆಂದ ॥ ೫ ॥

ನರನು ಮಂತ್ರಾಸ್ತ್ರಗಳನೆಚ್ಚರೆ ।
ಸರಳು ಕವಿಯಲು ಸೂರ್ಯನಡಗಿದ ।
ಧರೆಗೆ ಕತ್ತಲೆಗವಿದುದೇನೇನೆಂಬೆನಾಶ್ಚರ್ಯ ॥
ಗರಿಯು ಘಾಳಿಯು ರಭಸದಲಿ ತಾ ।
ನಿರದೆ ಅಂಬುಧಿ ಕಲ್ಲೋಲಾಯಿತು ।
ಶರವ ಬಿಗಿದನು ಪಾರ್ಥ ನೆರೆ ಬೆರಗಾಗೆ ಸಕಲ ಜನ ॥ ೬ ॥

ಸರಳನೈದಾರುಗಳನೆಚ್ಚರೆ ।
ಧರೆಗೆ ಕತ್ತಲೆ ಕವಿದುದೇನದ ।
ಸರಳ ಜಲಧಿಯನೊಡೆದುಬರುತಿರೆ ದಿವಿಜಪುರಕಾಗಿ ॥
ಸುರರು ಬೆದರಿಯೆ ಇಂದ್ರ ನಡುಗಿದ ।
ಹರನು ತಲೆಬಾಗಿದನು ಶರಪಂ ।
ಜರವ ಬಿಗಿದನು ಧರೆಗೆ ಸುರಲೋಕಕ್ಕೆ ಕಲಿಪಾರ್ಥ ॥ ೭ ॥

ಬೆಟ್ಟವನು ತಂದೊಟ್ಟಿ ಶರಧಿಯು ।
ಬಟ್ಟೆಯನು ರಘುನಾಥ ಮಾಡಿದ ।
ಕಟ್ಟುವದು ಅರಿದಲ್ಲ ಫಲುಗುಣ ಬಯಲ ಬಾಣದಲಿ ॥
ಕಟ್ಟಿದನು ಶರಪಂಜರಂಗಳ ।
ಬಟ್ಟೆಯಾಯಿತು ಧರೆಗೆ ಗಗನಕೆ ।
ಸೃಷ್ಟಿ ಮೂರರೊಳೀತಗೆಣೆಯಿಲ್ಲೆಂದುದಖಿಳ ಜನ ॥ ೮ ॥

ಮತ್ತೆ ಕೋದಂಡಾದಿರುದ್ರನೆ ।
ಅತುಳ ವಿಕ್ರಮ ನೃಪ ಶಿರೋಮಣಿ ।
ಭೂತನಾಥಂಗರಿದು ಮಾಡಿದೆ ಶೌರಿ ನೀ ಯೆನುತ ॥
ಸೇತುವನು ನೆರೆ ಕಟ್ಟಿ ಬಳಿಕಾ ।
ಸೀತೆದೇವಿಯ ತಂದ ರಾಘವ ।
ಭೂತಳಾಧಿಪನಿಂದು ಫಲುಗುಣನೆಂದನಮರೇಂದ್ರ ॥ ೯ ॥

ಕಂಡು ಅಮರರು ಬಿಲ್ಲ ವಿದ್ಯೆದ ।
ಖಂಡ ಪರುಷನ ಧಿಟ್ಟತನುವನು ।
ಹಿಂಡು ದಿವಿಜರ ನಡುವೆ ನಡೆದನು ನಗುತ ನಾರದನು ॥
ಚಂಡಭುಜಬಲ ಬಟ್ಟೆಯನು ಭೂ ।
ಮಂಡಲಕೆ ಸುರಪುರಕೆ ಮಾಡಿದ ।
ಗಂಡುಗಲಿ ಪಾರ್ಥನನು ಬೇಡಿದ ಬೇಗ ಕಳುಹೆಂದ ॥ ೧೦ ॥

ತರಿಸಿದನು ಐರಾವತವ ಸಿಂ ।
ಗರಿಸಿದನು ಬಹು ರತ್ನಖಚಿತದ ।
ಹಿರಿಯ ಗುಳವನು ತಂದು ಬಿಗಿದರು ಕನಕ ಕಂಸಿಲವ ॥
ಕೊರಳ ಜತ್ತಿಗೆ ಹಾರ ಕಟ್ಟಿಗೆ ।
ಹಿರಿಯ ರತ್ನದ ಕೊಡಲಿ ಕತ್ತಿಗೆ ।
ಗರದಲಂಕುಶದಿಂದಲಡರಿದರಿಂದ್ರ ಮಾವುತರು ॥ ೧೧ ॥

ಸುತ್ತ ಬೀಸುವ ಚಾಮರಂಗಳ ।
ಮುತ್ತಿ ಸಾವಿರ ಮೇಲೆ ಫಲ್ಲದ ।
ಸತ್ತಿಗೆಗಳರುವತ್ತು ಸಾವಿರ ಹೊನ್ನವಿಣಿ ಬಗಿದು ॥
ಕೆತ್ತಿಸಿದರಿಕ್ಕೆಲವಲೊದರುವ ।
ಹತ್ತುಸಾವಿರ ಪಂಚ ಘಂಟೆಯು ।
ಮುತ್ತಿ ಗಜ ಸಿಂಗರಿಸಿತವನೀಪಾಲ ಕೇಳೆಂದ ॥ ೧೨ ॥

ಆವ ಸಂಭ್ರಮವಾಗಲಾ ಮೇ ।
ಸಾವ ಸಡಗರ ನೋಡಲಾ ಮೇ ।
ಸಾವ ಸಂಪತ್ತಾಗಲಾ ಸುರರಾಯಪುರದೊಳಗೆ ॥
ಈ ವಿಧವಲನುರಿಯುರು ಮೊದಲಾ ।
ಗೀ ವಿಧವ ಶೃಂಗರಿಸಿ ಕಳುಹಲು ।
ದೇವ ಪುರದಿ ಧರೆಗೆ ಯಿಳಿದರು ಅರಸೆ ಕೇಳೆಂದ ॥ ೧೩ ॥

ಏನು ಪುಣ್ಯವ ಮಾಡಿದನೊ ಮೇ ।
ಸಾನೆ ಪುಣ್ಯದ ನೋಪಿಯಿದು ತಾ ।
ಏನು ಸುಕೃತವ ಮಾಡಿ ಪಡೆದನು ಯಿಹಪರಾವೆನುತ ॥
ಆನೆಯನು ಸುರನಾಥ ಕಳುಹಿದ ।
ಯೇನನೇಜೆನು ಸ್ವಾಮಿ ನಿಜಹರಿ ।
ತಾನೆ ಬಿಜಯಂಗೈದು ಪಾರ್ಥನ ಪುಣ್ಯವಕಟೆನುತ ॥ ೧೪ ॥

ಘೋರಮುತ್ತಿನ ಮಾಲೆ ಝುಲ್ಲರಿ ।
ಏರಿಸಿದರೈದು ಕೋಟಿಯು ।
ವೀರ ಕಂಕಣ ತೋಳಬಂದಿಯು ಕರಿಯು ಸಿಂಗರಕೆ ॥
ಸೇರಿಸಿದ ಕಡೆಕಡೆಗೆ ರತ್ನದ ।
ಪೋರಣಿಸಿ ಹದಿನೆಂಟು ಕೋಟಿಯು ।
ತಾರೆಗಳ ನಭದಂತೆ ಕರಿ ರಂಜಿಸಿತು ಗಗನದಲಿ ॥ ೧೫ ॥

ಹೊನ್ನ ಸರಪಳಿ ಯಿಕ್ಕಿ ಹೊಕ್ಕಳ ।
ರನ್ನ ಘಂಟೆಯು ಸುತ್ತ ಬಳಸಿದ ।
ಚೆನ್ನ ಮಾಣಿಕ ಮೌಕ್ತಿಕಾದಿ ಸಮಸ್ತ ವಿಭವದಲಿ ॥
ಮುನ್ನಿನ ಮಹಾ ಮೇರುವೆಯ ನಿಧಿ ।
ಯಿನ್ನು ಸಿಂಗರದಂತೆ ತೋರ್ಪುದು ।
ಸನ್ನಿಭದ ಮೇಲ್ಮೆರೆದ ಕುಂಭಸ್ಥಲವು ರಂಜಿಸಿತು ॥ ೧೬ ॥

ಕಾಲಗಳನಳವಡಿಸಿ ನಾಲ್ಕಕೆ ।
ಮೇಲೆ ರತ್ನದ ಕಡೆಯುಲಿಕ್ಕಿದ ।
ವಾಲಿಗಳ ಕೋರ್ಯೆಸಿದರು ಸುರಕರಿಯ ಝುಳಪದಲಿ ॥
ಸಾಲದಿವ್ಯಾಭರಣ ಕಾಂತಿಯ ।
ಸೂಳವಿಪ ನಿಜ ಕರ್ಣ ಕಾಹಳೆಯು ।
ಕಾಲಮೇಘದ ನಡುವೆ ಮಿಂಚಿನವೋಲು ರಂಜಿಸಿತು ॥ ೧೭ ॥

ಕರಿಯ ಶೃಂಗಾರವನು ಬಣ್ಣಿಸ ।
ಲರಿದು ಫಣಿಪಗೆ ಮಾಪ್ರತರಾತಗೆ ।
ತಿರಿಹಿ ತೋರಲು ಕಂಡು ಮೆಚ್ಚಿ ಸುರೇಂದ್ರ ನಸುನಗುತ ॥
ಧರೆಗಿಳಿದು ಗಜಪುರವ ನೋಡಿಯೆ ।
ಮರಳೆನುತ ಹದಿನೆಂಟು ಸಾವಿರ ।
ಮೆರೆವ ವಾದ್ಯದ ರಭಸವಮರರ ಸ್ತೋಮ ನಡೆತಂದು ॥ ೧೮ ॥

ಸುರಪನಾಜ್ಞೆಯ ಮೇಲೆ ವೋರ್ವಸಿ ।
ಯರ ಮನೆಸು ವಾಲಗದ ಸತಿಯರು ।
ಹಿರಿದು ಶೃಂಗಾರವನನಾಂತರು ಯೇನ ನಾನೆಂಬೆ ॥
ಕೊರಳ ಹಾರವ ರತ್ನ ಪೂರದ ।
ಕರಚರಣದಾಭರಣ ಮೆರೆಯುಲಿ ।
ಸುರಸತಿಯರನುವಾದರವನೀಪಾಲ ಕೇಳೆಂದ ॥ ೧೯ ॥

ಅಂಗನೇಯರು ಚೆಲುವ ಸೊಬಗಿನ ।
ತುಂಗ ಕುಚ ನೀಳ್ದೋಳು ಸೆಳೆನಡು ॥
ಮಂಗಳಾನನ ಕಮಳದಳಲೋಚನದ ಹೊಳಹುಗಳ ॥
ಅಂಗಜನ ವರಬಪ್ಪದೊಲುವೆಯ ।
ಭಂಗಿಸುವ ಭ್ರೂಲತಿಯ ಸೊಬಗಿನ ।
ಭೃಂಗ ಕುಂತಳದೈದು ಬಂದರು ಗಜವ ಯುದ್ದಡೆಗ ॥ ೨೦ ॥

ಬಿಂಬಿನದಧರ ಬೆಳಗಿನಂತದ ।
ಗುಂಪೆಸೆವ ನಾಸಿಕದ ದಂಬಿನ ।
ಕಂಬಿರಿವ ನಿಜ ಪರಿಮಳಂಗದ ಹರಿಣ ಲೋಚನದ ॥
ಕೊಂಪು ನಡಿಗೆಯ ಬಿಡಿಯ ನಡುವಿನ ॥
ಜೊಂಪುಸುಪದದ ಚರಣಕಮಲದ ।
ಕಂಬಿನವ್ಯಕದ ಸುರಿಯು ಜಾಣೆಯರೈದರೊಗ್ಗಿನಲಿ ॥ ೨೧ ॥

ಕಾಲ ಮೇಘದ ನಡುವೆ ಮಿಂಚಿನ ।
ಮಾಲಿಗಳು ಕೋರ್ವಂತೆ ರತ್ನದ ।
ಸಾಲಸೊಸಕ ಮುಡಿಯ ಮುತ್ತಿನ ದಂಡೆ ಬೈತಲೆಯ ॥
ಕಾಲಲಂದುಗಿ ಪಾಮ ವಟ್ಟಿಕ ।
ಮೇಲೆ ಮೆರಹಿನ ಹಂಸ ಗತಿಗಳು ।
ಬಾಲಕಿಯರನುವಾಯಿತು ಚಿತ್ರದ ಚೆಲುವಿನಮರಿಯರು ॥ ೨೨ ॥

ಉಟ್ಟ ದಿವ್ಯಾಂಬರದ ಮೇಲಳ ।
ವಟ್ಟ ಕಟಿಸೂತ್ರಗಳ ಬಂಧದ ।
ತೊಟ್ಟ ರವಕಿಯ ಕೇಲಕಂಕಣ ಕಡಗ ಮಾಣಿಕ್ಯ ॥
ಕಟ್ಟ ದೇವಾವಳಿಯ ನೊಸಲಲಿ ।
ಯಿಟ್ಟ ತಿಲಕದ ಮುಗುಳ ನಗೆಗಳ ।
ನಿಟ್ಟಿಸಲಗಂಗಳದ ಸತಿಯರು ಬಂದರೊಗ್ಗಿನಲಿ ॥ ೨೩ ॥

ಹತ್ತು ಸಾವಿರದಮರ ಸತಿಯರು ।
ಮತ್ತೆ ಶೃಂಗಾರವನು ಆಗಿಯೆ ।
ಪುತ್ತುಮದಲಾಭರಣ ದಿವ್ಯಾಂಬರ ಸುಲೇಪನದ ।
ಚಿತ್ತಜನ ಪರಿವಾರ ಯಿಂದ್ರನ ।
ಹತ್ತಿಲೈತರೆ ನಗುತ ನುಡಿದನು ।
ಅತ್ತ ಶರಪಂಜರದಿ ನಡವುವದೆಂದು ನೇಮಿಸದ ॥ ೨೪ ॥

ಕಾಮಧೇನುವ ಕಲ್ಪವೃಕ್ಷದ ।
ಸೋಮಸೂರ್ಯರ ಕಿರಣಲಾ ಹರಿ ।
ಪ್ರೇಮಗಾನ ರವತದ (ಗಾನದ ರವದ) ತುಂಬುರ ನಾರದಾದಿಗಳು ॥
ಸೀಮೆ ಮಿಗೆ ಬಟ್ಟಲಲಿ ವೀಳ್ಯವ ।
ಆ ಮಹಾತ್ಮರಿಗಿತ್ತು ನಿಜವರ ।
ರಾ ಮಹಾಯುಧವಜ್ರವನು ತಾರರಸೆ ಕೇಳೆಂದ ॥ ೨೫ ॥

ನರನ ಶರಪಂಜರದಿ ಮಾರ್ಗದಿ ।
ಸುರಗಜವು ಧರೆಗಿಳಿವುತಿರಲಾ ।
ಧರಣಿ ಕುಸಿದದು ನೆರದ ಸರ್ವ ಸಮಸ್ತ ಜನ ಕಂಡು ॥
ಇರದೆ ವೈಯಿಕ್ಕಿದರು ತಮ್ಮಯ ।
ಕರವನೊಸಲಲಿ ಚಾಚಿ ಹರುಷದ ।
ಶರಧಿಯೊಳು ಲೋಲಾಡುತಿರ್ದರು ಸಕಲ ಜನನೆಲ್ಲ ॥ ೨೬ ॥

ಅಂತು ಸಂಧಿ ೫ಕ್ಕೆ ಪದ ॥ ೩೨೧ ॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಆರನೆಯ ಸಂಧಿ

ಸೂಚನೆ ॥

ಸಕಲ ಜನರನು ಕೂಡಿ ಸಕಲಾ ।
ತ್ಮಕನು ಭೋಜನಗಳನು ಮಾಡಲು ।
ಸುಕರದಿಂದಲಿ ಕೊಂತಿ ಕರೆಯಲು ಜರಿಯೆ ಗಾಂಧಾರಿ ॥ ಪಲ್ಲ ॥

ರಾಯ ಕೇಳ್ಗೆ ಸಕಲ ಭೂಮೀ ।
ರಾಯರೋಲಗದಖಿಳ ಜನರನು ।
ಕಾಯವನು ಚಾಚಿದರು ಜಯ ಜಯ ಯೆನುತ ಕೈಮುಗಿದು ॥
ಈ ಯುಗದಲರ್ಜುನನ ಪೋಲುವ ।
ರಾಯರೊಳು ಮುನ್ನುಂಟೆ ಯನ್ನರೆ ।
ಮಾಯು ಭಾಗ್ಯದವೆನುತ ಮಿಗೆ ಜನವೆಲ್ಲ ಕೊಂಡಾಡೆ ॥ ೧ ॥

ತರಣಿ ಬಿಂಬ ಸಹಸ್ರಕೋಟಿಯು ।
ಕಿರಣ ನಭಮಧ್ಯದಲಿ ಮೂಡಿದ ।
ತೆರದಿ ಶರಪಂಜರದಿ ಐರಾವತವು ಬರುತಿರಲು ॥
ಸಿರಿನೊಗದ ಕನಿಕೆಯರು ಪೊಗ್ಗಿನ ।
ಸುರಮಹಾಸಭೆ ಸುರಭಿ ವಜ್ರದ ।
ಸುರರು ಧರೆಗಿಳುಹಿದರು ಸುರದುಂದುಭಿಯ ರಭಸದಲಿ ॥ ೨ ॥

ಅರಸ ಕೇಳ್ಧೃತರಾಷ್ಟ್ರ ಭೂಮೀ ।
ಶ್ವರಗೆ ಬಂದುದಿ[illegible]ರ್ತಿ ದುಗುಡವು ।
ತರೆದು ಗಂಗಾಸುತಗೆ ಪೇಳಿದ ಸುರಗಜದ ಬರವ [॥*]
ನರನು ಜನಿಸಿದ ಕುರುಕುಲವನು ।
ದ್ಧರಿಸಿದನು ಮಹಾ ಪುಣ್ಯವಿದು ತಾ ।
ಹರುಷದಲಿ ಯಿದಿರ್ಗೊಂಡು ಬಂದೆನುತೆಂದ ಗಾಂಗೇಯ ॥ ೩ ॥

ಸುರಗಜವು ಧರೆಗಿಳಿದು ಹಸ್ತಿನ ।
ಪುರದ ಹೊರಬಾಗಿಲಲಿ ಬಂದಿದೆ ।
ಸಿರಿಯ ನೋಕಿತು ಮತ್ತೆ ರವಿವುದಯಾಚಲಕೆ ಬಂದ ॥
ಗುರು ನದೀಸುತ ವಿದುರ ತಮ್ಮಯ ।
ಪುರವ ನೆರೆ ರಚಿಸಿದರು ಕೌರವ ।
ಧರಣಿಪಗೆ ದುಮ್ಮಾನಗೊಂಡದು ಹೇಳಲೇನೆಂದ ॥ ೪ ॥

ವಾರಣದ ಬೀದಿಯಲಿ ತಳಿತವು ।
ತೋರಣಂಗಳ ಹಲವು ಪರಿಯಲಿ ।
ಸಾರಿಸಿತು ಮಿಗೆಯೆಸೆವ ಜವ್ವಾದಿನಲಿ ಕಸೇನಲಿ ॥
ಕಾರಣೆಯು ಕುಂಕುಮದ ಲೇಪದಿ ।
ನೀರ ಥಳಿಯಂಗಳಲಿ ತಾ ಭಾ।
ಗೀರತಿಯ ನಂದನನು ಹಸ್ತಿನಪುರವ ರಚಿಸಿದನು ॥ ೫ ॥

ಹೊಳೆವ ಗುಡಿ ತೋರಣವ ಕಟ್ಟಿತು ।
ಲಲನೆಯರು ಶೃಂಗಾರವಾದರು ।
ಕಳಸ ಕನ್ನಡಿ ಸಹಿತ ನಡೆದರು ಭೂಮಿಲಂಬದಲಿ ॥
ಮೊಳಗಿದವು ಬಹುವಾದ್ಯ ತುಂಬುರ ।
ರೊಲಿದು ಗೀತವ ಪಾಡಿಹರು ಹರುಷದ ।
ಜಲನಿಧಿಯಲೋಲಾಡುತಿರ್ದರು ಭೂಪ ಕೇಳೆಂದ ॥ ೬ ॥

ಅರಸೆ ಕೇಳರ್ಜುನನು ತನ್ನಯ ।
ಅರಮನೆಗೆ ನಡೆತಂದು ಕೊಂತಿಯ ।
ಚರಣದಲಿ ಬಂದೆರಗಿ ಕೈಮುಗಿದೆಂದ ವಿನಯದಲಿ ॥
ಸುರಪನೈರಾವತವನಾಗಳೆ ।
ಧರೆಗಿಳಿಹಿದೆನು ಯೆಂದು ಹೇಳಲು ।
ಹರುಷದಿಂದಲಿ ಕೊಂತಿ ತೆಗೆದಪ್ಪಿದಳು ನಂದನನ ॥ ೭ ॥

ಶಶಿಯುದಿಸೆ ಸಾಗರದ ತೆರೆಗಳು ।
ಮಸಕವಿಸದಂದ[ದ°]ಲಿ ಬಿಸರುಹ ।
ಹಸಖನು ಬರೆ ತಮವಡಗಿ ಬೆಳಗಾಯಿತೆಂಬ ಹರುಷದಲಿ[1] ॥

ಎಸೆವ ರಿಪುಕುಲಧೂಮಕೇತುವೆ ।
ವಸುಮತೀಶ್ವರ ಮಣಿಯೆ ಯೆನ್ನಯ ।
ಶಿಶುವೆ ಬಾರೋ ವಪ್ಪಿಕೊಂಡಾಡಿದಳು ನಂದನನ ॥ ೮ ॥

ತನುಜ ತನ್ನಯ ಜಠರದಲಿ ಬಲ ।
ವಿನುತ ಜನಿಸಿದ[ನೀ°]ತ್ರಿಜಗದೀಶ ।
ನಿನಗೆ ಕೀರ್ತಿಯುನಿರದೆ ಮಾಡಿದೆ ತಂದೆ ನೀ ಯೆನುತ ॥

ತನಯನಂ ತಕ್ಕೈಸಿ ತನ್ನಯ ।
ಮನದ ಹರುಷದ ಭರಹಿಸಲಿ ಸು ।
ಜ್ಞನವ ಮಾಡಿ ದೇಶಕಾಲಾದಿ ವಸ್ತ್ರವನುಟ್ಟಳಾ ಕೊಂತಿ ॥ ೯ ॥

ಸುರಗಜವು ಧರೆಗಿಳಿದು ಗಜಪುರ ।
ವರದ ಹೊರಬಾಗಿಲಲಿ ಬಿಟ್ಟಿತು ।
ತರಣಿ ಯಿಳಿದನು ಪಶ್ಚಿಮಾದ್ರಿಯ ಗಿರಿಯ ತಪ್ಪಲಲಿ ॥
ಮಿರುಗಿ ಕವಿದುದು ದೇವ ಕನ್ನೆಯ ।
ಯಿರುಹ ಕಾಂತಿಯ ಝಳಪಿಸಲಿ ।
ಬೆಳಗರಹಿ ತೋರಿತು ಯೆಂಬ ಸರಸಿಜ ಬಂದನುತ್ಸಹದಿ ॥ ೧೦ ॥

ಮಕರಕುಂಡಲ ಧರೆಗೆ ನಮಿಸಿದ ।
ರಕುಟಿಲನೆ ಶರಣೆಂದು ಭೂಪಾ ।
ಲಕರು ನಮಿಸಿದರಂಬುಜಾಸನ ಪಿತನ ಚರಿಮುಡಿಗೆ ॥
ಪ್ರಕಟವಾಗಿದೆ ನಿನ್ನ ರೂಪವು ।
ವಿಕಟಮಾಡಿದೆ ನಮ್ಮ ಮನಕೆಲಿ ।
ಮಕರರೂಪವ ತೋರಬೇಡೆಂದೆರಗಿ ಗಾಂಗೆಯರು ॥ ೧೧ ॥

---

1 ಈ ಚರಣವನ್ನು ಹೀಗೆ ತಿದ್ದಿಕೊಳ್ಳಬಹುದು :—
"ಹಸಖ ಬರೆ ತಮವಡಗಿ ಬೆಳಗಾಯ್ತೆಂಬ ಹರುಷದಲಿ"

ಪಾಂಡುಸುತರೈ ಬಂದು ಹರುಷದಿ ।
ಪುಂಡರೀಕಾಕ್ಷನ ಪದಾಬ್ಜದಿ ।
ಮಂಡೆಯನು ಚಾಚಿದರು ಕರಗಳ ಮುಗಿದು ಭಕುತಿಯಲಿ ॥
ಪುಂಡು ಪವಡಿಸು ದೇವ ನೀನೆಲೆ ।
ಖಂಡಪರುಷನೆ ಸೂರ್ಯ ವುದೆ ಬರೆ ।
ಕಂಡು ನೋಪಿಯು ಸಾಗಬೇಕೆಂದೆಂದು ಬಿನ್ನೈಸೆ ॥ ೧೨ ॥

ಆದರಾಗಲಿ ಯೆನುತ ಬೇಗದಿ ।
ಮೇದಿನೀಪತಿ ಸಹಿತ ತಾವೇ ।
ವೇದಗೋಚರ ಬಂದು ಹೊಕ್ಕನು ಭೋಜನದ ಮನೆಯ ॥
ಯಾದವರು ವರಪಿತರು ಕರುಣದ ।
ಲಾದರಿಸಿ ಕರೆಸಿದರು ಹರುಷಾಂ ।
ಭೋಧಿಯೂ ತಾ ಕೃಷ್ಣನಾರೋಗಿಸಿದ ನಲುವಿನಲಿ ॥ ೧೩ ॥

ಭೂಮಿಪಾಲರು ಸಕಲ ಜನರುವ ।
ನೇಮದಲಿ ಭೋಜನವ ಮಾಡಿದ ।
ರಾ ಮಹಾ ಭೂದಿವಿಜರುಂಡದು ವಿಪ್ರ ಭುವನದಲಿ ॥
ಆ ಮಹಾಪುರ ಪರಿಜನಂಗಳ ।
ಸೀಮೆಯಲಿ ತಾನುಂಡು ತೃಪ್ತಿಯ ।
ನಾಮದಲಿ ಕೈತೊಳದು ವೀಳ್ಯವಗೊಂಡರೊಲವಿನಲಿ ॥ ೧೪ ॥

ಅಷ್ಟಭೋಗದ ವೀಳ್ಯ ಪರಿಮಳ ।
ಗೊಟ್ಟು ಅಡಕಿಯ ಹೋಳು ಮುದದಲಿ ।
ನಿಟ್ಟಿಸಲು ಮೊನೆಯಾದ ಬಿಳಿಯೆಲಿ ಸಳಕು ಕರ್ಪುರದ ॥
ಸೃಷ್ಟಿವಡೆಯಂಗಿತ್ತು ವೀಳ್ಯವ ।
ನಿಟ್ಟು ಮಂಚದ ಮೇಲೆ ಹಾಸನ ।
ಕಟ್ಟಳಿಯ ಜಾವದಲಿ ಮಲಗಿದ ತಾ ಮುರಧ್ವಂಸಿ ॥ ೧೫ ॥

ನಾಲ್ಕು ಜಾವಗಳಾಗ ಮೂಡಣ ।
ದಿಕ್ಕಿನಲಿ ರವಿ ರಥವ ಸುಳಿಸಿದ ।
ನಾಲ್ಕು ದೇಶದಿ ಸರಸಿರುಹವರಳಿದವು ಹರುಷದಲಿ ॥
ಲೋಕಲೋಚನ ಜಗದ ತಮವನು ।
ನೂಕಿದನು ತಲೆದೋರಿಸಲು ಸೈ ।
ನೇಕಮುತದಲಿ ನೆನೆದರಂಬುಜನಾಥನಂಘ್ರಿಗಳ ॥ ೧೬ ॥

ಮಾಡಿ ಮೊಗ ಮಜ್ಜನವ ಕೈಗಳ ।
ನೀಡಿ ಅರ್ಘ್ಯಾದಿಗಳನಿತ್ತರು ।
ನೋಡಿ ಹೊಂದರ್ಪಣದಲಿಟ್ಟರು ತಿಲಕಕಸ್ತುರಿಯ ॥
ಮೂಡಿದವು ತಾರೆಗಳು ನಭದಲಿ ।
ಕೂಡೆ ತಲೆದೋರಿದನು ಸೂರ್ಯನು ।
ನೋಡಿದವು ಹೊಂಬಿಸಿಲ ಸರಸಿರುಹಂಗಳರಳಿದವು ॥ ೧೭ ॥

ತೋರಿದವು ಹೊಂಗಳಸ ಮಂಗಳ ।
ಭೇರಿನಿಸ್ಸಾಳಗಳು ಮೊಳಗಿದ ।
ವಾರುಭಟೆಯಲಿ ಹೊರಗೆ ಸುರದುಂದುಭಿಗಳೊಗ್ಗಿನಲಿ ॥
ವರಗಜದ ಪುರದೊಳಗೆ ತವ ತವ ।
ಹರುಷದಲಿ ನೀವ್ ನೋಡಬನ್ನಿರಿ ।
ಸುರಕರಿಯ ನೋಡಿಯುಸು ಮತ್ತೆ ಸುರರದಮರಿಯರ ॥ ೧೮ ॥

ದೇವ ದೇವರ ದೇವ ನೆನೆವರ ।
ಕಾವ ಕರುಣಾಜಲನಿಧಿಯು ತಾ ।
ಭೂವಳೆಯ ದಿವಿಜರು ಸಹಿತಸೇರೆಂದು ನುಡಿವುತಲಿ ॥
ಆವಪರಿ ಭಕ್ತರನು ಮಿಗೆ ಸಂ ।
ಭಾವಿಸುವ ಮುರವೈರಿಯೆಂಬುದ ।
ನಾವು ನೋಡುವೆವೆನುತ ಬಹುಜನ ಹೊರಟರಾಲಯವ ॥ ೧೯ ॥

ಆಗ ಗಂಗಾತನುಜ ವಿನಯದಿ ।
ಬೇಗ ಕೊಂತಿಯ ಕರೆದು ನುಡಿದನು ।
ಹೋಗಿ ನೀ ಗಾಂಧಾರಿಯುನು ಕರೆ ಕರುಣಭಾವದಲಿ ॥
ಆಗರುವೆ ನಡೆತಂದು ಭಕ್ತಿಯ ।
ಲಾ ಗೋವರ್ಧನಗೆರಗಿ ಶಿರದಲಿ ।
ಬಾಗಿ ಭೀಷ್ಮಗೆ ನಮಿಸಿ ಬಂದಳು ತನ್ನ ಮಂದಿರಕೆ ॥ ೧೦ ॥

ಕೇಶಕೆಣ್ಣೆಯ ತಂದು ಸತಿಯರು ।
ಹೂಸಿ ಮೈವೊತ್ತಿದರು ಕಸ್ತುರಿ ।
ಸೂಸಿದರು ಸರ್ವಾಂಗ ಲೇಪನದಿಂದ ನಿಜತನುವ ॥
ಆ ಸುದತಿ ಪನ್ನೀರ ಚೆಲಸಿಯೆ ।
ವಾಸನೆಯ ನೀರೆರೆಯೆ ಬಾ(ಬ)ಹಳ ವಿ ।
ಲಾಸದಲಿ ತಾ ಮಿಂದು ಬಂದಳು ವಸ್ತ್ರದಾಮನೆಗೆ ॥ ೧೧ ॥

ಉಟ್ಟಳನುಪಮ ದಿವ್ಯದುಡಿಗೆಯ ।
ತೊಟ್ಟಳಾಭರಣಗಳನಾಗಳೆ ।
ಮೆಟ್ಟಿದಳು ಹಾವಿಗೆಯ ದಿವ್ಯ ಸುಗಂಧ ಲೇಪನದ ॥
ಕಟ್ಟಿಳೆಯರರು ಘುಡಿಪ ಧ್ವನಿಗಳು ।
ಸೃಷ್ಟಿ ಬೆದರುವ ವಾದ್ಯ ಧ್ವನಿಗಳು ।
ಯಿಟ್ಟಣಿಸಲಬುಜಾಕ್ಷಿ ಹೊರಟಳು ತನ್ನ ಆಲಯವ ॥ ೧೨ ॥

ಇಂದುಮುಖಿ ನಡೆತಂದು ತಾ ಹೊ ।
ನ್ನಂದಣವನೇರಿದಳು ಸತಿಯರ ।
ಸಂದಣಿಯಲೈತಂದಳಾ ಗಾಂಧಾರಿಯರ ಮನೆಗೆ ॥
ಅಂದು ಬಾಗಿಲ ಕಳೆದು ಬರುವರೆ ।
ಚಂದ್ರಮುಖಿ ದಂಡಿಗೆಯನಿಳಿದಳು ।
ತಂದು ನೃಪನರಸಿಯನು ಕಾಣುತ ಎರಗಿ ಪಾದಕ್ಕೆ ॥ ೧೩ ॥

ಎತ್ತಿದಳು ವರ ಕೊಂತಿ ದೇವಿಯು ।
ಮಸ್ತಕವ ನಿಲ್ಲೆನುತ ವಿನಯದಿ ।
ಉತ್ತಮಾಸನವಿತ್ತು ಕುಳ್ಳಿರಿಸಿದಳು ತಂಗಿಯನು ॥
ಮತ್ತೆ ಕೇಳೌ ನೋಂಪಿಗೋಸುಗ ।
ಸುತ್ತಲಂಬುಧಿಯಂತೆ ಸುರಮುನಿ ।
ಕತ್ತ ಭೂಪಾಲಕರು ಯಾದವರೆಲ್ಲ ಮೊದಲಾಗಿ ॥ ೨೪ ॥

ನರನು ಶರಳನು ಸುರರಿಗೆಚ್ಚರೆ ।
ಹಿರಿದು ಮೆಚ್ಚಿ ಸುರೇಂದ್ರನಾನೆಯು ।
ಧರೆಗೆ ಕಳುಹಿದನಕ್ಕ ನೀ ಬರಬೇಕು ಯೆಂದೆನುತ ।
ಹರಿಯು ವಿಜಯಂಗೈದಲಿವ್ಯಾಯು ।
ಕರುಣದಲಿ ನೋನಿಸಲು ಕಾನಿಹೆ ।
ಹರುಷದಲಿ ನೀ ನೋನು ಯೆಂದಳು ಕೊಂತಿ ವಿನಯದಲಿ ॥ ೨೫ ॥

ಮೌನದಲಿ ಗಾಂಧಾರಿ ಕೊಂತಿಯ ।
ಮಾನುನಿಯ ನುಡಿಗೇಳಿ ಕಡು ದು ।
ಮ್ಮಾನವೆಡೆಗೊಂಡಂತೆ ನಾವಾ ಹಿಂದೆ ಪುರಕರಿಯ ॥
ನಾನು ನೋಂಪಿಗೆ ಕರಸಲಿಲ್ಲಾ ।
ಆನು ಮರೆದೆನು ಯೆನುತ ನಾ ನಿ ।
ನ್ನಾಣೆ ಬಾರೆನು.ಯೆಂದು ನುಡಿದಳು ದುಗುಡದಲಿ ದೇವಿ ॥ ೨೬ ॥

ಮರಿಯು ಮಾತೇಕಿನ್ನು ನಿನ್ನನು ।
ಮರೆದು ಕಳೆದೆನು ಯನ್ನು ಕರವದು ।
ನರಿಯು ಬಾರದೆ ಹಿಂದಿನ್ನೈರಾವತದ ನೋಂಪಿಯುಲಿ ॥
ಇರದೆ ನೀನರ್ಜುನಗೆ ಹೇಳಲು ।
ಮೆರೆದನಾದ ಪರಾಕ್ರಮುವ ನಾ ।
ನರಿಯೆನೆ ಸಾಕಿನ್ನು ಬಾರೆನು ಯೆಂದಳಾ ದೇವಿ ॥ ೨೭ ॥

ಬಡವರೆಂದೇ ನೀವು ಬಾರದೆ ।
ಕೆಡಸದಿರು ಗಾಂಧಾರಿ ನೋಪಿಯು ।
ತಡೆಯದೆ ತಂದಿಂದ್ರನೈರಾವತವ ನೀನೋನು ॥
ಕೊಡುವುದುಚಿತವು ಬಾಗಿನಂಗಳ ।
ಮಡದಿ ನೀನೊಲ್ಲದಡೆ ನೋಪಿಯು ।
ಗೊಡವಿ ನನಗೇಕೆಂದು ನುಡಿದಳು ಕೊಂತಿ ವಿನಯದಲಿ ॥ ೨೮ ॥

ಧರಣಿ ವಂದೇ** ಬಾಹಳ್ಳಿ ।
ಶ್ವರಿಯು ವಂದೇ ಪಾಂಡು ಧೃತರಾ ।
ಷ್ಟ್ರರ ಕುಮಾರರೊಂದೆ ಭೇದವು ಯಿಲ್ಲ ಕೇಳಿನ್ನು ॥
ನರನ ವಿಜಯವ ನೋಡಿ ಸಂತಸ ।
ವೆರಸಿ ನೋನುವದುಚಿತ ಜರಿವದು ।
ಹಿರಿಯರಿಗೆ ಗುಣವಲ್ಲ ಬರಬೇಕೆಂದಳಾ ಕೊಂತಿ ॥ ೨೯ ॥

ತನ್ನ ಬಸುರಲಿ ಬರಲು ತನುಜರು ।
ಬೆನ್ನಬಂದೊಡಹುಟ್ಟಯೆನಿಸುರು ।
ತನ್ನವರು ಅನ್ನೆಗರು ಆಹರೆ ಕೊಂತಿ ಮರುಳಾದೆ ॥
ನಿನ್ನ ಮಕ್ಕಳ ಸಿರಿಯು ಸಡಗರ ।
ಕಿನ್ನು ಬಾರೆನು ನೀನು ಹೋಗೆನೆ ।
ವುನ್ನತದಿ ನೀನೋನು ಯೆಂದಳು ದೇವಿ ಗಾಂಧಾರಿ ॥ ೩೦ ॥

ಎರೆಯು ಮಣ್ಣಲಿ ಮಾಡಿನೋತರೆ ।
ಸುರಪನೈರಾವತವ ತರಸಿದೆ ।
ಸರಸಿಜಾನನೆ ಕಾಣಬಂತೊ ನಿನ್ನ ಜಡತನವು ॥
ಮರುಳೆ ನಿನ್ನಯ ಸುತರ ಸಂಗಿನ ।
ಕರಿಯು ತಾ ನೋನುವೆನೆ ನೀ ಹೋ ।
ಗಿರದೆ ಜರಿದಳು ಮುಸುಡದಲಿ ತಾ ದೇವಿ ಗಾಂಧಾರಿ ॥ ೩೧ ॥

ಮಡದಿ ಬಹುಪತಿಗಳಲಿ ಟಕ್ಕಿನ ।
ನುಡಿಯು ಕಲಿತವಳಾಗಿ ಪುತ್ತ್ರರ ।
ಗೊಡವೆ ಹಿರಿದೆಂದರಿದುದೆವ್ವನದುಬ್ಬಿಕೊಬ್ಬಿನಲಿ ॥
ನುಡಿಯಲಾಗದು ನಿನ್ನ ನೋಪಿಯು ।
ಯುಡಿಗೆ ಬಾರೆನು ಧಿಟ್ಟೆ ಹೆಂಗುಸೆ ।
ಕಡು ಚಪಳೆ ಹೋಗೆಂದು ಜರಿದಳು ಮುಳಿದು ಗಾಂಧಾರಿ ॥೩೨॥

ಬಂದು ನೋಸುದು ವುಚಿತ ಬಾರದೆ ।
ಯಿಂದು ನೀ ಮುನಿದೇನು ಮಾಡುವಿ ।
ಚಂದ್ರಶೇಖರ ಬರೆದ ಬರೆಹವ ತೊಡೆಯಲಾರಳವು ॥
ಇಂದ್ರನೈರಾವತವ ನೋಸದ ।
ಮಂದಭಾಗ್ಯಳೆ ಹೋಗೆನುತ ಅರ ।
ವಿಂದಮುಖಿ ತಿರುಗಿದಳು ಕೊಂತಿಯು ಭೀಷ್ಮನರಮನೆಗೆ ॥ ೩೩ ॥

ಭರದಿ ಬಂದಳು ಕೃಷ್ಣರಾಯನ ।
ಚರಣದಲಿ ತಾನೆರಗಿ ಭೀಷ್ಮಗೆ ।
ಕರವ ಮುಗಿದೆರಗಿದಳು ಕಲಶಜ ವಿದುರರಿಗೆ ನಮಿಸಿ ॥
ಕರೆದೆ ನಾ ಗಾಂಧಾರಿ ದೇವಿಯು ।
ಅರಮನೆಗೆ ನಾ ಬಾರೆನೆನುತಲಿ ।
ಜರಿದು ನುಡಿದಳು ತನ್ನನೆಂದಳು ಕೊಂತಿ ಭಕ್ತಿಯಲಿ ॥ ೩೪ ॥

ತರುಣಿ ನಿನಗಂಜಿಕೆಯು ಹೋಗಾ ।
ಸುರಗಜವ ನೀನೇರು ದಾನಕೆ ।
ಹಿರಿಯ ಭಂಡಾರವನು ತೆಗೆಸುವೆನೆನುತ ಹರುಷದಲಿ ॥
ಧರಣಿಪತಿನಿನ್ನರಸನಾತನ ।
ಹಿರಿಯ ಮಗ ಯಿಧಿಷ್ಟಿರನುಜರು ತಾ ।
ಗರುವೆ ನೀನೋನೆಂದು ಘರ್ಜಿಸಿ ನುಡಿದನಾ ಭೀಷ್ಮ ॥ ೩೫ ॥

ತರಿಸಿದನು ಭಂಡಿಗಳ ಶತಸಾ ।
ವಿರವನಾಕ್ಷಣ ಭೀಷ್ಮ ವಿದುರರು ।
ಹಿರಿಯ ಭಂಡಾರವನು ವಡಿಸಿಯೆ ಹೇರಿದರು ಹೊನ್ನ ॥
ಪುರದ ಹೊರವಳೆಯಲ್ಲಿ ನಾನಾ ।
ಪರಿವಿಧಾನದ ವಸ್ತು ಸಹಿತವೆ ।
ಸುರಿದರರಸೇ ಕೇಳು ಕೊಂತಿಯು ನೋಪಿಯುತ್ಸಹಕೆ ॥ ೩೬ ॥

ಅಂತು ಸಂಧಿ ೬ಕ್ಕೆ ಪದ ॥೨೫೭॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಏಳನೆಯ ಸಂಧಿ

ಸೂಚನೆ ||

ಧರ್ಮಸುತ ನಸುನಗುತಲೈವರು |
ಬೊಮ್ಮನೆನಿಪಾ ಕೃಷ್ಣ ಸಹಿತಲಿ |
ಘಮ್ಮನೈರಾವತವ ತಾನಿದಿಗೊಂಡನುತ್ಸಹದಿ || ಪಲ್ಲ ||

ಅರಸೆ ಕೇಳ್ಬೆ ವಸ್ತುಕಾಂದ |
ಸುರಿದ ನೆನೆಗಡಲೆಗಳ ರಾಶಿಯು |
ಕೊರಳಕರ ಚಾಣಾದಿ ಕಟ್ಟಿದ ಕರ್ಣಭೂಷಣದ ||
ಮೆರೆದ ಹೇಮದ ಪತ್ರೆ ಹುಷ್ಪನ |
ಘರಘರದ ಪರಿಮಳದ ಮಾಲೆಸು |
ಸರದ ದಿವ್ಯಾಂಬರದ ಆಂಕಿನದೋಲೆ ಅನುವಾಗೆ || ೧ ||

ಸುರನದೀಸುತನೊಡನೆ ಬಂದರು |
ಪರಮ ಪಾಂಡು ಕುಮಾರಕರು ಮುರ |
ಹರನ ಚರಣದಲಿಂಗ್ರಿಕರಗಳ ಮುಗಿದು ಬಿನ್ನೈಸೆ ||
ಪ್ರರದ ಹೊರವಳಯದಲಿ ಬಿಟ್ಟಿದು |
ಸುರಪನೈರಾವತವು ಅಮರಿಯು |
ಯುರನಿಧಿಗೋಳ ಬೇಕು ಬೇಗನೆಯೆಂದು ಜನರ್ದನಗೆ || ೨ ||

ಕೇಳಿದನು ಬಿನ್ನಪವನಾ ಬರ |
ಹೇಳಿದನು ಭೂಮಿಪರ ಸಂಗಡ |
ಆಳು ರಥ ಕರಿ ತುರಗ ಬಿರುದಾವಳಿಗಳೊಗ್ಗಿನಲಿ |
ಹಲವು ಶೃಂಗರವಾಗಿ ಯಾದವ |
ಬಲವ ಹೊರಹೊಡಲೆಂದು ಲಕ್ಷ್ಮೀ |
ಲೋಲ ನೇಮಿಸಲಿದ್ದುದೇಳು ಸಮುದ್ರ ಘೋಷದಲಿ || ೩ ||

ಶ್ರೀರಮಣ ಕಿರೀಟ ಮಂಡಿತ ।
ಸರಪವೆಸನದಲುಡಿಗೆ ರತ್ನದ ।
ಮೆರೆವ ಬೊಮ್ಮನ ಪಡೆದಪುಳಕುಳಿನಾಭಿ ಜಗನರಿಯೆ ॥
ಸಿರಿಯ ಧರಿಸಿದ ಚಲುವಿಧಡ ತಾ ।
ವಿರುಪವಾಗಿಯೆ ವೈಜಯಂತಿಯು ।
ಕೊರಳ ಕೌಸ್ತುಭ ತುಳಸಿಮಾಲೆಯಲಿಸೆದನಸುರಾರಿ ॥ ೪ ॥

ಚೆಲುವ ಚೆಲುವಿಕೆ ಮುದ್ದುನಾಸಿಕ ।
ಹೊಳೆವ ಗಲ್ಲದ ಮಕರ ಕುಂಡಲ ।
ಲಲಿತ ಪಲುಣದ ಹೋಲಿಕೆಯು ತಾ ಜರಿದ ಮುಗುಳ್ನಗೆಯು ॥
ಸುಲಭ ಕರ್ಪುರವೆಸೆವ ಬಾಯಿ(ಯ್) ಪರಿ ।
ಮಳದ ವಜ್ರದ ದಂತಪಂಕ್ತಿಯ ।
ಸುಲಲಿತದ ಗಂಧಾನುಲೇಪವಲಿಸಿದನಾ ಕೃಷ್ಣ ॥ ೫ ॥

ಮನುಮಥನ ಸಿಂಗಾಡಿಯುಂದದಿ ।
ಅನುಪಮದ ಮುರ (ಮುರಿ) ಮೀಸಿ ಸೂಸಿಯೆ ।
ಲನುವಲಸುವಾಗಿರ್ದ ತನ್ನಯ ವಿಶ್ವರೂಪದಲಿ ॥
ವನಜನೇತ್ರಗಳಖಿಳ ಜಗಗಳ ।
ನನುನಯದಿ ಮೋಹದಲಿ ನೋಡುತ ।
ದನುಜ ಹರಿವೈಕುಂಠನೆಸೆದನು ಬಾ(ಬ)ಹಳ ವಿಭವದಲಿ ॥ ೬ ॥

ಸಂಭ್ರಮದಲಾಯಿಂದ್ರಚಾಪದ ।
ಕುಂಭನೊಸಲಿನ ವೂರ್ಧ್ವ ತಿಲಕದ ।
ಕೆಂಬಿಸಿಲ ವಲ್ಲಭನೆ ನೋಲಿಪ ಮಕರ ಮಣಿಮಯದ ॥
ತುಂಬಿಯೆರಗುವ ಮಾಲೆ ಮಲ್ಲಿಗೆ ।
ಯಿಂಬಿಸುವ ವರ ಪಾರಿಜಾತಗ ।
ಳಿಂಬುಗೊಂಡವು ಮಾಲೆಗಳು ಮುರಹರನ ಕಂಠದಲಿ ॥ ೭ ॥

ನೀಲಮಣಿಮಯವೆಸೆವ ದೇಹದ ।
ಮೇಲೆ ರತ್ನಾಭರಣ ತುಂಬಿದ ।
ಕಾಲಮೇಘದ ಮೇಲೆ ಖದ್ಯೋತಗಳು ಮೆರೆವಂತೆ ॥
ಬಾಲೆ ವಸುಮತಿ ಲಕ್ಷ್ಮಿಸಹಿತವೆ ।
ಲೀಲೆಯಲಿ ಸಿಂಗರಿಸಿ ಸುರಪುರ ।
ಲೋಲನಾನೆಯ ನೋಡ ಹೊರವಂಟನು ಮುರಧ್ವಂಸಿ ॥ ೮ ॥

ಆ ಸಕಲ ನೃಪಜಲಧಿಪತಿ ಜನ ।
ವಾ ಸಕಲ ಮಂತ್ರಿಗಳು ಕರುಣಿಕ ।
ರಾ ಸಕಲ ಪಟುಭಟರು ಬಾಲರು ವೃದ್ಧರೊಳಗಾಗಿ ॥
ತಾ ಸಕಲ ನಾರಿಯರು ಪುರಜನ ।
ಹಾ ಸಕಲ ಸನ್ಮಾನದಿಂದಲಿ ।
ಈ ಸಕಲ ಲೋಕೇಶ ನಡದನು ಬಹಳರೊಗ್ಗಿನಲಿ ॥ ೯ ॥

ಉಟ್ಟನಮಳಾಂಬರವ ನೊಸಲಲಿ ।
ಯಿಟ್ಟ ತಿಲಕ ಸುಗಂಧ ಲೇಪನ ।
ತೊಟ್ಟನನನಲಿ ಭರಣರತ್ನದ ಕಾಂತಿ ಕುಂಡಲದ ॥
ಮುಟ್ಟಪರಿಮಳ ಲೇಪಮಲ್ಲಿಗೆ ।
ಕಟ್ಟ ಸರವನು ಹಾರಕೊರಳಿಗೆ ।
ಜಟ್ಟಿ ಪವನಜ ಮಲ್ಲಗದೆಯನು ಕೊಂಡು ಏರಿದನು ॥ ೧೦ ॥

ನೊಸಲ ತಿಲಕದ ಪರಿಮಳಾದಿಯು ।
ಲೆಸೆವ ತನು ಲೇಪನದ ಸೊಬಗಿನ ।
ಬಿಸಜದಳನೇತ್ರಗಳ ಪೀತಾಂಬರದ ವುಡಿಗೆಗಳ ॥
ದೆಸೆಯ ಬೆಳಗುವ ಮಕರಕುಂಡಲ ।
ವೆಸೆವ ಸರ್ವಾಭರಣ ಶೋಭೆಯ ।
ವಿಸಮನರ್ಜುನ ದೇವನೆಸೆದನು ಬಾ(ಬ)ಹಳದುಬ್ಬಿನಲಿ ॥ ೧೧ ॥

ಲಾಯುದೊಳಗುತ್ತಮದ ತೇಜಿಯು ।
ಸಾಯ್ದು ಹೂಡಿದ ರಥಕೆ ಬತ್ತೀ ।
ಸಾಯುಧಂಗಳ ತುಂಬಿದನು ದಿವ್ಯಾಸ್ತ್ರ ಮೊದಲಾಗಿ ॥
ರಾಯ ಪರಬಲಮಥನ ಮಲ್ಲರ ।
ರಾಯು ಧೂಳಿಪ ಪಟ್ಟ ನಿರ್ಜರ ।
ರಾಯನಂದನ ಧನುವ ಕೊಂಡಡರಿದನು ನಿಜರಥವ ॥ ೧೨ ॥

ಸೆಳೆನಡುವಿಗನುಪಮದ ವಸನವ ।
ಗ(ನ)ಳವಡಿಸಿ ಕಾಸಿಯನು ಬಿಗಿದರು ।
ಸುಲಲಿತಾಭರಣಗಳ ಕಂಕಣ ಮುದ್ರಿಕಾವಳಿಯ ॥
ಲಲಿತ ಭರಣದ ಪರಿಮಳದ ಸೂ ।
ಸಿಳಯ ಲೇಪನುವಾಗಿ ಹರುಷದ ।
ತುಳಪಿನಲಿ ನಡೆತಂದ ಮಾದ್ರಿಕುಮಾರರೊಗ್ಗಿನಲಿ ॥ ೧೩ ॥

ಮಿಂದು ದೇವಾಂಗವನು ವುಟ್ಟಳು ।
ಗಂಧಗಳ ಅನುಲೇಪನಾದಿಯು ।
ಚಂದ್ರಮುಖಿ ಸರ್ವಾಂಗಭರಣದ ತೊಡಿಗೆಗಳ ತೊಟ್ಟು ॥
ಇಂದುಮುಖಿಯುರು ಗಡಣದಲಿ ಹೊ ।
ನ್ನಂದಣವನೇರಿದಳು ಮುರಹರ ।
ದ್ವಂದ್ವದಲಿ ಹಣೆ ಚಾಚಿದಳು ನಲುವಿಂದ ಭಕುತಿಯಲಿ ॥ ೧೪ ॥

ಬಂದದೈರಾವತವು ಬಾಗಿಲಿ ।
ನಿಂದುದಮರಿಯ ಸ್ತೋಮವೆಲ್ಲವು ।
ಬಂದರೈ ಸಕಲಾಂತ ದೇಶದ ನೃಪರು ಕೇಳಿನ್ನು ॥
ಮುಂದೆ ನಮ್ಮಯನಿನ್ನು ನೋಪಿಗೆ ।
ಯಿಂದು ಬಿಜಯಂಗೈದು ಬರಬೇ ।
ಕೆಂದು ನುಡಿದರೆ ದೇವ ಗರುಡನನೇರಿ ಹೊರವಂಟ ॥ ೧೫ ॥

ಮುಂದೆ ಭೀಷ್ಮ ದ್ರೋಣ ವಿದುರರು ।
ಹಿಂದೆ ಕೊಂತೀದೇವಿ ಮುಂದಣ ।
ಗೊಂದು ಮುರಹರನೊಡನೆ ಪರಮಾನಂದ ವಿಭವದಲಿ ॥
ಸ್ಯಂದನವನೇರಿದರು ಮಹಿಷಿಯು ।
ಹಿಂದೆ ಮುಂದಿಕ್ಕೆಲದಲಾಗ ಪು ।
ರಂದರನ ವರಗಜವನಿದಿರ್ಗೊಳಲರಸ ಕೇಳೆಂದ ॥ ೧೬ ॥

ಮತ್ತೆ ಗಜಘಟೆವಾಜಿಗ(ದ)ಳದಲಿ ।
ಸುತ್ತಿ ಬರುತಿಹ ರಾಜ ಸೈನ್ಯದ ।
ಮಸ್ತಕದ ಮಣಿಮಕುಟ ರತ್ನಾಭರಣಗಳ ನಡುವೆ ॥
ಮತ್ತೆ ಗರುಡನ ಭುಜದಮೇಲಿರೆ ।
ಮುತ್ತುಮಾಣಿಕ ಕನಕರಾಶಿಯು ।
ಹೊತ್ತ ನೀಲದ ಗಿರಿಯವೋಲ್ ಮೆರೆದನಸುರಾರಿ ॥ ೧೭ ॥

ಎತ್ತಿ ಹಿಡಿದವು ಮೇಲೆ ಮುತ್ತಿನ ।
ಸತ್ತಿಗೆಗಳೆಳವಡಿಸಿ ಚಾಮರ ।
ವತ್ತಿನಲಿ ನಲಿದಾಡಿ ದೇವನ ಮುಕುಟದಗ್ರದಲಿ ॥
ಇತ್ತರದ ನಿಜವಾದ್ಯರಭಸದ ।
ವಿಸ್ತರದ ಗಂಭೀರ ಭೇರಿಯು ।
ಲತ್ತ ನಿಃಸ್ವಾಳಗಳು ನಿಕ್ಕಿತ ಕಟಹವಬ್ಬರಿಸೆ ॥ ೧೮ ॥

ಸುಳಿಗುರುಳು ಸುಲಿಪಲ್ಲು ನಸುನಗೆ ।
ಕಳಸಕುಚಗಳ ದಳದ ಸೆಳೆನಡು ।
ಥಳಥಳಿಸವಾಭರಣ ಕಾಂತಿಯ ದಿವ್ಯವಸನಗಳ ॥
ಕಳಸ ಕನ್ನಡಿ ಸಹಿತ ನಾರಿಯು ।
ಸಲಿವಿಲಾಸದ ಸರ್ವ ಸೊಬಗಿನ ।
ನಳಿನವದನೆಯರ್ಕೈದೆ ನಡೆದರು ಭೂಮಿಲಂಬದಲಿ ॥ ೧೯

ಹೊಡೆವ ನಾನಾ ವಾದ್ಯ ರಭಸಕೆ ।
ಬಿಡದೆ ಚೀರುವ ಕಾಳೆ ನಾದದ ।
ಜಡಿದೆದಬ್ಬುಬ್ಭವಾಂಡಮಂಡಲ ದೋಷು ಕೇಳುವೆನು ॥

ಕಡೆಗೆ ತುದಿಬಿಡದಂತೆ ಮಾಡಿದ ।
ಸಡಗರದಲಜಹಿತನ ಬೆಂಬಳಿ ।
ಹಿಡಿದು ಬಂದದು ಕೊಂತಿ ದೇವಿಸು ನೋಂಪಿಯುತ್ಸಹಕೆ ॥ ೩೦ ॥

ಇತ್ತಲೈರಾವತದ ಸೊಬಗನು ।
ಮತ್ತೆ ಕಳವಳದಿಂದ ಗಗನವ ।
ಹತ್ತಿತೆಂಬಾ ಪೋಲುಯಿಸೆದದು ತನ್ನ ಸತ್ವದಲಿ ॥
ಮಸ್ತಕದ ಮಾಣಿಕದ ಪಟ್ಟದ ।
ಚಿತ್ತರದ ನವರತ್ನ ಬಂಧದ ।
ಮುತ್ತಿನಾಭರಣಗಳಲಂಬರವಿಸೆದುದಾ ದಂತಿ ॥ ೩೧ ॥

ಮೆರೆವ ಮಂದರಗಿರಿಯು ಶಿಖರಕೆ ।
ಮೂರುಯಿಮ್ಮಡಿಯಂತೆ ಮುತ್ತಿನ ।
ಹಾರಗಳು ಬೆಳಗಿದವು ತಾರಾವಳಿಯು ತೆರನಂತೆ ॥

ಪೂರ್ಣ ಚಮರಿಯು ಚಂದ್ರನಂದದಿ ।
ಘೋರಕುಂಭಗಳೆರಡು ಗಗನದ ।
ಚೋರಸ್ಪರ್ಶಿತೆಂಬಂತೆ ತಾ ಸುಳಿಯುತಿತು ಮದದಂತಿ ॥ ೩೨ ॥

ಕನಕ ಗಿರಿಯುದದಲಿ ರಂಜಿಪ ।
ವನುತೆಸುರ ತುರಲತೆಯೊ ಬೊಮ್ಮನ ।
ಸದನ ಸಿಂಹಾಸನದ ತೇಜದ ದಿವ್ಯಗದ್ದುಗೆಯು ।

ಅನುಪಮದ ಮೋಲಿಂದ್ರನೇರುವ ।
ಕನಕಮಣಿಮಯ ಪೀಠ ಮೆರೆದುದು ।
ವಿನುತ ಹನುಷದ ಲೀಲೆಯಿಂದಲಿ ಮೆರೆದುದಾ ದಂತಿ ॥ ೩೩ ॥

ಮೇಲೆ ಬೀಸುವ ಬೆಳಿಯ ಚಾಮರ ।
ಯೇಳುಕೋಟಿಯಲೆಸೆವ ಛತ್ರದ ।
ಮೇಳವಿಸಿದುದು ಪುರದ ಗುಡಿ ಪದಿನೈದುವರೆ ಲಕ್ಷ ॥
ಕೀಲ ಕೆಲಸದ ಕುಂದಣಂಗಳ ।
ಸಾಲು ಸತ್ತಿಗೆ ಹತ್ತು ಲಕ್ಷಗ ।
ಳಾಲವಟ್ಟಗಳಂತೆ ಪಂತಿಯು ಶೆರ್ಗವಾಡಿದವು ॥ ೨೪ ॥

ಕಾಲಪಿಂಡಿಯು ಮೊಂಟೆಕಿಯು ಮಣಿ ।
ಮೇಲೆ ಅಂದುಗೆಯೆಸೆವ ಜಂಘೆಯು ।
ಸಾಲಮಣಿಕಟಿಸೂತ್ರ ಜಘನದ ಕಾಂತಿಯುವುರಗಳ ॥
ಕೀಲಕಂಕಣ ಕಡಗಸಡಗರ ।
ತೋಳುಪೆಳೆ ಮುದ್ರಿಕೆಯು ಭಾಳದ ।
ಪ್ರೌಳಿ ಸಿಂಧೂರಗಳ ಬಾ(ಬ)ಹಳದಲೆಸೆದದಮರಿಯರ ॥ ೨೫ ॥

ಪಾಂಗತರ ನಿಜಕಾಂತಿತನಗಳ ।
ತುಂಗಮಾದದಲ್ಲೆಸೆವ ಫಳೆಗಳ ।
ಮಂಗಳದ ಸಿರಿವದನ ಸಂಸಿಜದಳದ ನೇತ್ರಗಳ ॥
ಹಿಂಗದಿಪ್ಪದ ರತ್ನಖಚಿತದ ।
ಅಂಗವಿಸಿದಾಭರಣ ಕಾಂತಿಗೆ ।
ಕಂಗೊಳಿಸಲರಿದಿನನ ತೇಜದಲೆಸೆದರಮರಿಯರು ॥ ೨೬ ॥

ಹೊನ್ನ ಕಲಶಿಗೆಯಂತೆ ಚೆಲುವಿನ ।
ಚೆನ್ನ ಕುಚಗಳು ನಡುವೆ ಬೆಳಗಿದ ।
ಕನ್ನಡಿಗಳೆಸೆವಂತೆ ಲಂಬಿತ ಚಾರು ಪದಕಗಳ ॥
ಉನ್ನತದ ಭರಣಗಳ ಸೊಬಗಿನ ।
ಬಣ್ಣಮುಸುದುಕಿಗೆಗಳ ನಿಜಪರಿ ।
ಪೂರ್ಣ ಚಂದ್ರಮನಂತೆ ವದನದಲಿರ್ದರಮರಿಯರು ॥ ೨೭ ॥

ಕಂಬು ಕಂಧರ ಯೆಸೆವ ಭಾವದ ।
ಕಂಭೆ ನೊಸಲಲಿ ಯಿಟ್ಟ ತಿಲುಕದ ।
ಲಂಬಿಸುವ ಪರಿಪರಿಯ ದಿವ್ಯಾಂಬರದ ವುಡಿಗೆಗಳ ॥
ಬಿಂಬಧರವರ ಕುಂದದಂತದ ।
ತುಂಬಿ ಯೆರಗುವ ಥೋರ ಮುಡಿಗಳ ।
ಕೊಂಬ ಚೂಡಾಮಣಿಯ ತುರುಬಿನಲಿಸೆದರಮರಿಯರು ॥ ೨೮ ॥

ಬಂದದ್ಯೈರಾವತಕೆ ಪಾಂಡವ ।
ನಂದನರು ನಿಜಮಾತೆ ಸಹಿತವೆ ।
ಡಿಂದ ದ್ರೌಪದಿದೇವಿಯಿದಿರ್ಗೊಳಲೆಂಬ ಭಾವದಲಿ ॥
ಅಂದಣವನಿಳಿದಾಗ ಕೊಂತಿ ಮು ।
ಕುಂದನಿದಿರಿಲಿ ನಿಂದು ತನ್ನನು ।
ಛಂದದಲಿ ನೋಣಿಸುವದೆಂದೆರಗಿದಳು ಪದಯುಗಕೆ ॥ ೨೯ ॥

ಆಗಲಾಗಲಿ ತಾಯಿ ಕೇಳೌ ।
ಬೇಗದಲಿ ನೀನೋನು ಬೆಂಬಲ ।
ವಾಗಿ ತಾನಿಹೆನಿದಕೆ ತೊಡಕವೆ(ತೊಡಕೇ)ನೆಂದು ಕರುಣದಲಿ ॥
ಆಗರುವೆ ಐವರು ಕುಮಾರರು ।
ಬೇಗದಲಿ ನೀಪಡೆದು ಇಹಪರ ।
ಸ್ವರ್ಗ ಭೋಗವ ಪಡೆದೆಯೆಂದನು ನಗುತ ಮುರವೈರಿ ॥ ೩೦ ॥

ಬಂದುದೈರಾವತವು ಭರದಲಿ ।
ಮಂದರೋದ್ಧರನಂಘ್ರಿಕಮಲದಿ ।
ಯಿಂದು ತಲೆವಾಗಿತ್ತು ಸೊಂಡಿಲ ನೆಗಹಿ ಬೇಗದಲಿ ॥
ಇಂದು ವಂಶದ ಕುಲದವರ ದೆಸೆ ।
ಯಿಂದ ನಿಮ್ಮಯ ಪದಯುಗಕೆ ಶಿರ ।
ವಂದವಾಯಿತು ನಮಗೆನುತ ನಮಿಸಿದರು ನಾರಿಯರು ॥ ೩೧ ॥

ದೇವ ಜಯ ಜಯ ಸರಸಿಜೋದ್ಭವ ।
ದೇವ ಜಯ ಜಯ ತ್ರಿಜಗ ವಂದ್ಯನೆ ।
ದೇವ ಜಯ ಜಯ ಭಕ್ತವತ್ಸಲ ಕರುಣಸಾಗರನೆ ॥
ದೇವ ನಿಮ್ಮಯ ಚರಣಯುಗ ತಾ ।
ನಾವ ಪುಣ್ಯವ ಮಾಡೆ ದೊರಕದ ।
ದೇವ ಮುಕ ಪಾಂಡವರ ದೆಸೆಯಿಂದಾಯ್ತು ನಮಗೆಂದು ॥ ೩೨ ॥

ಇಂತು ಬಹು ಗುಣಗಳಲಿ ಸುರವರ ।
ಕಾಂತೆಯರು ಪೊಗಳಿದರು ಲಕ್ಷ್ಮೀ ।
ಕಾಂತನತಿ ಮೆಚ್ಚಿದನು ಕರುಣದಲವರ ಮನ್ನಿಸಿದ ॥
ಅಂತರಿಕ್ಷದೀ ಶಂಕರನು ಮಾ ।
ರಾಂತಕನು ನೆರೆದಿಪ್ಪ ದಿವಿಜರ ।
ಪಂತಿ ಗಟ್ಟಿದೆ ತಾಯಿ ನೀನೋನೆಂದನಾ ಕೃಷ್ಣ ॥ ೩೩ ॥

ಭರದಿ ಬಂದಳು ಕೊಂತಿ ಸುರಭಿಗೆ ।
ಸುರಗಜಕೆ ಕಾಣಿಕೆಯನಿಕ್ಕಲು ।
ಸುರತರುವಿಗೆರಗಿದಳು ವಜ್ರಾಯುಧಕೆ ಕೈಮುಗಿದು ॥
ನೆರೆದ ದಿವಿಜರಿಗೆರಗಿ ಬಂದಾ ।
ವರ ಮಹಾಸತಿ ರಂಭೆ ವ್ರೋರ್ವಸಿ ।
ಗಿರದೆ ತಲೆವಾಗಿದಳು ಅವನೀಪಾಲ ಕೇಳೆಂದ ॥ ೩೪ ॥

ಅರಸು ಧರ್ಮಕುಮಾರನನುಜರು ।
ವೆರಸಿ ದಂತಿಯ ಚರಣ ನಾಲ್ಕಕೆ ।
ವರಮಣಿಯ ಕಾಣಿಕೆಯನಿಕ್ಕಲು ಪರಮ ಹರುಷದಲಿ ॥
ನೆರೆದ ಧರಣೀಪಾಲರೆಲ್ಲರು ।
ಕರಿಯ ಪಾದಕೆ ನಮಿಸಿ ಮಿಕ್ಕಿನ ।
ವರ ಮಹಾ ಜನಕೆಲ್ಲ ಕೈಗಳ ಮುಗಿದರೊಗ್ಗಿನಲಿ ॥ ೩೫ ॥

ಕಾಲದಲಿ ಸುರಕರಿಯ ಹೋಲುವ ।
ಮೂಲದವರುಗಳಿಲ್ಲ ಅದರಿಂ ।
ದೇಳುಮಡಿ ಬೆಳೆದಿರ್ದನದ್ಭುತ ನೀಲಗಿರಿಯಂತೆ ॥

ಕಾಳು ಮಾತುಗಳೇಕೆ ಕೃಷ್ಣನ ।
ಲೀಲೆಗಳಿಗಿದಿರಾರು ಜಗದಲಿ ।
ಕೇಳು ವಸುಧಾಧೀಶಯೆಂದನು ಮುನಿ ನೃಪಾಲಂಗೆ ॥ ೩೬ ॥

ಅಂತು ಸಂಧಿ ೭ಕ್ಕೆ ಪದ ॥ ೨೯೩ ॥ ಕ್ಕೆ
ಮಂಗಳ ಮಹಾ ಶ್ರೀ ಶ್ರೀ ಶ್ರೀ

ಎಂಟನೆಯ ಸಂಧಿ

ಸೂಚನೆ ||

ಇಂದ್ರನೈರಾವತವ ಧರಣಿಗೆ ।
ತಂದು ನಿಜಮಾತೆಯನು ನೋನಿಸ ।
ಲೆಂದು ಫಲ್ಗುಣ ಕೀರ್ತಿವಡೆದನು ಮೂರು ಲೋಕದಲಿ || ಪಲ್ಲ ||

ಬಂದುದಾಗಳೆ ಕೊಂತಿ ಗಂಗೆಯ ।
ಮಿಂದು ತೆಗೆದಳು ಮಳಲ ಗೌರಿಯ ।
ತಂದು ಬಿಜಯಂಗೈಸಿ ಷೋಡಶಪರಿವಿಧಾನದಲಿ ||
ಇಂದುಧರನರಸಿಯನು ವಹಿಲಿಸಿ ।
ತಂದು ನೈವೇದ್ಯವ ಸಮರ್ಪಿಸಿ ।
ಯಿಂದುಮುಖಿಯರ್ಚಿಸಿದಳವನೀಪಾಲ ಕೇಳೆಂದ || ೧ ||

ಸುರಭಿಯನು ಸುರತರುವ ನಾನಾ ।
ಪರಿವಿಧಾರ್ಚನೆಗಳಲಿವರ ಸರ ।
ಸಿರುಹಲೋಚನೆ ಪೂಜಿಸಿದಳೊಲವಿನಲಿ ಬಲವಂಮ ||
ಕರವ ಮುಗಿದೆರಗಿದಳು ವಜ್ರವ ।
ನಿರದೆ ಪತಿಕರಿಸಿದಳು ಸುರಪುರ ।
ವರ ಮಹಾ ಕಾಂತೆಯರನುಪಚರಿಸಿದಳು ವಿನಯದಲಿ || ೨ ||

ಬಂದಳೈರಾವತಕೆ ಮುದದಲಿ ।
ನಿಂದು ಕರಗಳಮುಗಿದು ಸಮ ।
ಸೆಂದು ಷೋಡಶ ದಿವ್ಯ ಪೂಜೆಗಳಿಂದ ಸತ್ಕರಿಸಿ ||
ಇಂದುಶೇಖರ...[1] ಪಾಲ ಪು ।
ರಂದರಾದಿ ಸಮಸ್ತ ಸುರರಿಗೆ ।
ಕಂಧರವ ಚಾಚಿದಳು ಕರಗಳನೀಡಿ ಭಕ್ತಿಯಲಿ || ೩ ||

1 ಮೂರು ಮಾತ್ರೆಗಳಾಗುವ ಅಕ್ಷರಗಳಿಗೆ ಸ್ಥಳ ಬಿಟ್ಟಿದೆ.

ಹರಿಸು ಪದಕೆರಗಿದಳು ಭೀಷ್ಮನ ।
ಚರಣದಲಿ ವೈಯಕ್ತಿ ಭೂಪಿೂ ।
ಶ್ವರರ ಬಹುಮಾನದಲಿ ವಂದಿಸಿ ನಿಂದು ಪರುಷದಲ ॥
ವರಸುಗಂಧಾಕ್ಷತೆಯ ಮಾಲೆಂ ।
ಬರವನಿತ್ತುಪಚರಿಸಿ ಭರದಲಿ ।
ತರುಣಿ ಬಾಗಿಣ ಕೊಡುತಲಿರ್ದಳು ದಿವಿಜ ಸ್ತ್ರೀಮುಕ್ಕ ॥ ೪ ॥

ಭೂಮಿದಾನದಲಗ್ರಹಾರದ ।
ಹೇಮ ಕನ್ಯಾದಾನ ಸಹಿತವೆ ।
ಪ್ರೇಮದಲಿ ವರ ಕನಕ ವಸ್ತ್ರಾಭರಣ ದಾನಗಳ ॥
ಆ ಮಹಾ ಗೋದಾನ ಹಯ ಗಜ ।
ಕಾಮಿತದ ದಾನವನು ಭೀಷ್ಮನ ।
ನೇಮದಲಿ ನೆರೆಕೊಟ್ಟು ದಣಿಸಿದಳಖಿಳ ಭೂಸುರರ ॥ ೫ ॥

ಕರೆದು ಮುತ್ತೈದೆರಿಯ (ಯರಿ)ಗಾಗಳ ।
ಕರ ಚರಣಧರ ಕರ್ಣ ಪೂರದ ।
ಮೆರೆವ ಕಂಠಾಭರಣ ದಿವ್ಯಾಂಬರ ಸುಲೇಪನದ ।
ಮರದದರಸಿನದೋಲೆ ಸಹಿತವೆ ।
ವರಮಹಾಸಲೆ ದೇಶದೇಶದ ।
ಸರಸಿಜಾನನೆಯರಿಗೆ ಬಾಗಿಣವಿತ್ತಳಾ ಕೊಂತಿ ॥ ೬ ॥

ಎತ್ತುಗಳ ಭಂಡಿಗಳ ಗಜಗಳ ।
ಮಸ್ತಕದ ಮೇಲೇರಿ ಕೈಯಲಿ ।
ಯತ್ತರದಲಿಬಿಯಡಕೆ ಹಡಪಾಳಿಗಳ ನೆರೆತುಂಬಿ ॥
ಮತ್ತೆ ಸಂಟಿಯ ಮೇಲೆ ಹೇರಿಸಿ ।
ಮುತ್ತು ಮಾಣಿಕ ಕನಕ ರಾಶಿಯ ।
ಇತ್ತು ಮೋದಿಸಿ ಸುರರ ದಣಿಸಿದಳರಸೆ ಕೇಳೆಂದ ॥ ೭ ॥

ಪುರದೊಳಗೆ ಸ್ತ್ರೀಪುರುಷರೆನ್ನದೆ ।
ನೆರೆ ಸುಬಾಲಕ ವೃದ್ಧರೆನ್ನದೆ ।
ಬರಲಿ ಬೇಗದಿಯೆಂದು ಡಂಗುರ ಹೊಯಿಸಿ ದೆಸೆದೆಸೆಗೆ ॥

ಕರೆಕರೆದು ಗೋ ಕನಕ ವಸ್ತ್ರವ ।
ಧರಣಿಯಮರರಿಗಿತ್ತು ದಣಿಸಿದ ।
ಳರಸೆ ಕೇಳ್ಕೆ ಕೊಂತಿದೇವಿಯು ದಾನದುನ್ನತಿಯು ॥ ೮ ॥

ಅತುಳ ವಿಕ್ರಮ ಧರಣಿಪಾಲರ ।
ಸತಿಯರೆಲ್ಲರ ಕರೆದು ಮಿಗೆ ।
ಸತ್ಕರಿಸಿ ತಾ ಬಾಗಿಣವನಿತ್ತಳು ವಸ್ತ್ರಭರಣಗಳ ॥

ಮತ್ತೆ ಕೃಷ್ಣನ ಪಾದಕಮಲಕೆ ।
ಭಕ್ತಿಯಿಂದಭಿನಮಿಸಿ ಭೀಷ್ಮನ ।
ಸ್ತುತಿಸಿ ಸುರಪುರ ಭದ್ರಗಜವ(ಪ)ದಕೆರಗಿದಳಾ ಕೊಂತಿ ॥ ೯ ॥

ಹೊಳೆವ ರವಿ ಗಗನಾಂತು ಮೇಲಿಂ ।
ದಿಳಿಯೆ ಪಶ್ಚಿಮದದ್ರಿಯಿಂದದೆ ।
ಇಳುಹಿದರು ಗಜದಿಂದ ಪರುಷದ ದಿವ್ಯ ತೊಟ್ಟಿಲವ ॥

ಲಲನೆ ಮಿಗೆ ಯಿದರೊಳಗೆ ಕುಳ್ಳಿರೆ ।
ಸೆಳೆದು ಕೊಂಡರು ಗಜದ ಮೇಲಕೆ ।
ನಳಿನಲೋಚನೆ ಬಂದಳೈರಾವತವನೇರಿದಳು ॥ ೧೦ ॥

ಬಂದುದಾ ಗಜಪುರಕೆ ವರದೇ ।
ವೇಂದ್ರನೋಲಗಗೊಟ್ಟು ತವ ಪೀ ।
ಠದಲಿ ಸುಬಲಿಯೊ ಹರುಷದಲಿ ತಾ ಮೇರೆ ಕುಳ್ಳಿರಲು ॥

ತಂದು ಸುರಪನ ಛತ್ರ ಚಾಮರ ।
ಲಿಂದು ನೀಡಿಸಿ ತಮತಮಗೆ ತಾ ।
ದೆಂದು ಹಿರಿಕಿರಿದಾಗಿ ಮೀರಿ ಪತಾಕೆಗಳು ತಾವು ॥ ೧೧ ॥

ದೇವದುಂದುಭಿ ಮೊಳಗಿತಮರರ ।
ಭಾವ ಹೆಚ್ಚಿತು ಹರುಷ ಮಿಗೆ ತಾ ।
ವೋರ್ವರಿಸಿತು ಮೃದಂಗ ಗತಿಗಳಲಿಂದ ತವಕದಲಿ ॥
ಭಾವದಲಿ ನಾರದನು ತುಂಬರ ।
ಲಾವ ಸಂಭ್ರಮದಿಂದ ಪಾಡುತ ।
ಭವನ ಕರುಣವಿ ನೋಪಿಯಲಿ ಯೆಸೆದಿರ್ದಳಾ ಕೊಂತಿ ॥ ೧೨ ॥

ನಡೆದುದೈರಾವತವು ಘಂಟೆಗ ।
ಳೆಡಬಲದಲೊದರುತ್ತ ಭಾರಕೆ ।
ಕೊಡವಿ ತಗ್ಗಿತು ಅಷ್ಟ ದಿಗ್ಗಜ ತಲೆಯು ಕೊಡಹಿದವು ॥
ಹೆಡೆಮಣಿಯು ವಾಸುಗಿಯ ಭುವನಗ ।
ಳೊಡೆಯೆ ಮೆಟ್ಟಿತು ದಂತಿ ತಾ ಮದ ।
ಕೊಡಹಿ ತೋರಿತು ಸೊಂಡಿಲನು ನೀನರಸೆ ಕೇಳೆಂದ ॥ ೧೩ ॥

ಮುಂದೆ ದೇವತ ದೇವನಾಥನು ।
ಯೊಂದೆ ಸುರಪನ ಭದ್ರಮದಗಜ ।
ಸಂದುದಿಕ್ಕೆಲದಲ್ಲಿ ಕ್ಷೋಣೀಶ್ವರನ ತಳತಂತ್ರ ॥
ಸೆಂದನವ ಮೇಲೇರಿ ಯಮಜ ಮು ।
ಕ್ಕುಂದನೊಡನೈ ಭೀಮ ಪಾರ್ಥರ ।
ಮುಂದೆ ರಥ ದುವಾಳಿಯಲಿ ರಂಜಿಸಿದರಾ ಸಭೆಯ ॥ ೧೪ ॥

ಅಘಹರನ ಕರುಣದಲಿ ಪಾಂಡವ ।
ಸುಗುಣರಿಗೆ ಸರಿಯಿಲ್ಲ ಭಾಪೆಂ ।
ದೊಗವಿಗೆಯುಲವನಿಪರು ಕೊಂಡಾಡಿದರು ಹರುಷದಲಿ ॥
ಆಗ ಪುರದಾ ಹೊರವಳೆಯ ತಾ ।
ಲಾಗರುವೆ ಯೇರುತ್ತ ಬರುತಿರೆ ।
ಕೂಗಿದವು ದಶಕೋಟಿ ಕಾಹಳೆ ಭೇರಿನೊಡಲಾಗ ॥ ೧೫ ॥

ನೆರೆದ ಯಿಂದ್ರಪ್ರಸ್ಥ ಪುರವರ ।
ಧರೆಯೊಳಗೆ ನೋಟಕ ಜನಂಗಳು ।
ಭರದಿ ಗಜಸಹಿತಂದು ಪೊಕ್ಕರು ಹಸ್ತಿನಾಪುರಕೆ ॥
ಪರಿಪರಿಯ ಬಹುವಾದ್ಯ ರಭಸವ ।
ಮೊರೆವುತಿಹ ಗಂಭೀರ ಭೇರಿಯು ।
ಸುರರು ದುಂದುಭಿ ಮೊಳಗಿದವು ತಾವೊಂದು ಪೊಗ್ಗಿನಲಿ ॥ ೧೬ ॥

ಆಳು ಕುದುರೆಗಳಾನೆ ರಥಗಳು ।
ಮೇಳದಲಿ ಬರುತಿರಲು ಪಟ್ಟಣ ।
ಸಾಲದಿರೆ ಗುಡಿತೋರಣಂಗಳು ಮನೆಯು ಮಾಳಿಗೆಯು ॥
ಮೇಲೆ ಸುಟಲೆಯೊ ಕೌರುರಾಯನ ।
ಆಲಯವ ಮುಂದೊತ್ತಿ ಬರುತಿರೆ ।
ಫೋಳಿಸುತ ಶಬ್ದಕ್ಕೆ ನಾಚದ ನೋಡು ಕುರುರಾಯ ॥ ೧೭ ॥

ಎನ್ನ ಜನನಿಯು ಪ್ರಥಮ ನೋಡಿಯು ।
ಮುನ್ನ ಕುಂತಿಯು ಕರೆಯದಿದ್ದರೆ ।
ತನ್ನ ಘನತೆಯು ಮೆರೆದನರ್ಜುನನದಕೆ ಮತ್ತೇನು ॥
ಭಿನ್ನಮಾತಗಳಲ್ಲಿ ನಮ್ಮನು ।
ಗಿನ್ನ ಕೋರಿಸೆ ಜಗವ ಮಿಗೆ ಜೈ ।
ತನ್ನ ಪಾಡಿಸುವಾತನೆಂಬನು ಕೌರುವರ ರಾಯು ॥ ೧೮ ॥

ನಮ್ಮ ಮಾನಸಿರೆ ವಂದು ಹುಟ್ಟಿಸಿ ।
ಬೊಮ್ಮ ನೀ ಪಾಂಡುವ ಕುಮಾರರ ।
ಜೆನ್ಮಯನು ನಡಸಲಿಕೆ ಮಾಡಿದನೊಂದು ಕೌತುಕವ ॥
ಯೆಮ್ಮವರ ಪಾಡೇನು ತನ್ನಯ ।
ಸೊಮ್ಮಿನಲಿ ವರ ಪಂಚ ಭುವನವ ।
ನೊಮ್ಮೆ ಕಾಣಿಸುವನೀ ಮುಕುಂದನ ಮಹಿಮೆ ಘನವೆಂದ ॥ ೧೯ ॥

ದೂರದಲಿ ತಾ ಕಂಡು ಕೃಷ್ಣನ |
ಚಾರು ಚರಣಾಂಬುಜಕೆ ನಮಿಸಿದ |
ಸಾರಹಾ ಸುರಜನಕೆ ಐರಾವತಕೆ ಕೈಮುಗಿದು ||
ವೀರ ಕೌರುವರಾಯನನುಜರು |
ಸಾರಿಯುರು ಗಾಂಧಾರಿ ಸಹಿತಲಿ |
ಯೇರಿ ಬರುತ್ತೈರಾವತವ ಕಂಡೊತ್ತಿದರು ತಲೆಯ || ೨೦ ||

ನೂರು ಮಕ್ಕಳು ಜನಿಸಿ ತನ್ನನು |
ಯೇರಿಸಿದರ್ಶ್ರೆ ಮಣ್ಣುಗುಡ್ಡೆಯು |
ವೀರರೈವರು ತನಯುರಿಂದ್ರನ ದಿವ್ಯ ಮದಗಜವ ||
ನೇರಿಸಿದರೀ ಕೊಂತಿ ದೇವಿಗೆ |
ದಾರು ಸರಿ ಸ್ವರ್ಗವನು ಇಹದಲಿ |
ಸೂರೆಗೊಂಡದು ಪುಣ್ಯವೆಂದಳಲಿದಳು ಗಾಂಧಾರಿ || ೨೧ ||

ಮರುಳೆ ನಿನ್ನಯ ನೋಪಿಗವರನು |
ಕರೆಯು ಬಾರದೆ ನೀನು ಅವರನು |
ಕರೆದರಲ್ಲಿಗೆ ಹೋಗಬಾರದೆ ಬಳಿಕ ಮರುಗುವರೆ ||
ವರ ಮಹಾ ಪಾಂಡವರ ಘನತೆಯು |
ಮೆರೆಯ ಬೇಕೆಂದೀ ಜನಾರ್ದನ |
ಚರಿಸುವನು ಯಿನ್ನೇತಕಳಲುವಿರೆಂದನಂಧನೃಪ || ೨೨ ||

ನಮ್ಮನೆಲ್ಲರ ಬಂದು ಕರೆದರೆ |
ಸುಮ್ಮನಿದ್ದಿರಿ ಹೆಮ್ಮನಲಿ ನೆರೆ |
ವರ್ಮಸಳಿವುತರರಮನೆಗೆ ತಾ ನೋಡು ಬಂದದನು ||
ನಿಮ್ಮ ಸಂಪತ್ತುಗಳದೆಲ್ಲಿಯೊ |
ದೆಮ್ಮ ಬಸುರಿಲಿ ಬಂದು ನೂರ್ವರು |
ಹಮ್ಮುತನಗೇಕೆಂದು ಜರಿದಳಲಿದಳು ಗಾಂಧಾರಿ || ೨೩ ||

ನೆರೆದ ಹೊರವಳಯದಲಿ ಕೃಷ್ಣನ ।
ಚಾರುಚರಣದ ಪದಕೆ ನಮಿಸಿಯೆ ।
ಭರದಿ ಬಂದರು ತಾವು ಐರಾವತಕೆ ಕೈಮುಗಿಯೆ ॥

ನಾರಿಯರು ಶ್ರಿಂಗರಿಸಿ ತಳಿಗೆಗ ।
ಳಾರತಿಯನೆತ್ತಿದರು ಸುರರೂ ।
ಕರೆದು ಹೂಮಳೆ ಯಿಂದ್ರ ಹೊಗಳಿದರೈಸ್ಯ ತವತಮಗೆ ॥ ೨೪ ॥

ಮತ್ತೆ ಗಜಪುರದೊಳಗೆ ಮುಹ ಸೌ ।
ವಿಸ್ತರದಮುಗಿದಂತೆ ವೇದಿಪದು ।
ಅತ್ತ ಗಜದಿಂ ಮೇಲೆ ಕೊಂತಿ ಸಮಸ್ತ ವಿಭವದಲಿ ॥

ಅರ್ಥಿಯಲಿ ಸ್ತ್ರೀ ಪುರುಷ ಬಾಲರು ।
ಸುತ್ತಬಳಸಿಯೆ ಕಂಡು ದಣಿದರು ।
ಮತ್ತೆ ಕೌಮುದಸಾಳಿಯ ಗೃಹದೊಳಗದಕೆ ಕೇಳೆಂದ ॥ ೨೫ ॥

ಕತ್ತಪುರವರ ಶರಧಿ ನವನಿಕ ।
ರಿತ್ತ ನಿಜ ಸಂಭ್ರಮ್ಮದಿಂದಲಿ ।
ಪ್ರಸ್ತವಾಗಿಯೆ ಸಕಲ ಜನ ಮೊದಲಾಗಿ ಹರುಷದಲಿ ॥

ಪ್ರಥಮ ರವಿ ರಥವೇರಿ ಬರುವಂ ।
ತಂತೆ ಜನವರ ಜನಕನಿಂದ್ರನ ।
ಹಸ್ತಿ ಸಹಿತವೆ ಬಂದು ಹೊಕ್ಕರು ರಾಜ ಅಂಗಣವ ॥ ೨೬ ॥

ವೀರ ಗರುಡನ ಯಿಳಿದು ಕೃಷ್ಣನು ।
ನಾರಿ ಸಹಿತವೆ ಕೂಡಿ ಲಲನೆಗ ।
ಳಾರತಿಯ ಪಿಡಿಕೊಂಡು ಬಂದರು ದಿವ್ಯ ತೇಜದಲಿ ॥

ಸಾರಿಧೂಪಾರತಿಯ ಸಾಲಿಲಿ ।
ವೋರಣಸಿ ನೂಕಿದರು ಯದುಕುಲ ।
ವಾರುನಿಧಿ ವರ ಚಂದ್ರಗೆತ್ತಿದರಂಬುಜಾಕ್ಷಿಯರು ॥ ೨೭ ॥

ಮೊರೆವ ಅಂಬುಧಿಯಂತೆ ಭೇರಿಯು ।
ಮರಳಿದವು ನಿಸ್ಸಾಳ ಕಹಳೆಯು ।
ಸಾರಿದವು ಶಾಶ್ವತದಿ ಅಬುಜಭವಾಂಡ ವೊಡೆವಂತೆ ॥
ಭರದಲಾಕಾಶದಲಿ ಶಂಕರ ।
ನಿರದೆ ಪುಷ್ಪಾಂಜಳಿಯ ಕೃಷ್ಣನ ।
ಶಿರಿಮುಡಿಗೆ ನೆರೆಸುರಿಯೆ ಜಯ ಜಯವೆಂದುದಮರಗಣ ॥೨೮॥

ಚೆಲ್ಲಿದನು ದೇವೇಂದ್ರನಾಗಳೆ ।
ಮಲ್ಲಿಗೆಯ ವರಮಾಲೆ ಲಕ್ಷ್ಮೀ ।
ವಲ್ಲಭನ ಸಿರಿಪದಕೆ ಪಾಂಡುಕುಮಾರಕರ ಮುಡಿಗೆ ॥
ಅಲ್ಲಿ ಗಂಧರ್ವಾದಿ ಕಿನ್ನರ ।
ರಲ್ಲಿ ಗೀತವ ಪಾಡಿ ಕುಣಿದರು ।
ಫುಲ್ಲನಾಭನ ಮಹಿಮೆ ಘನವಾನಂದದಲಿ ದಣಿದು ॥ ೨೯ ॥

ಕೊಂತಿ ಐರಾವತವನಿಳಿದಳು ।
ಸಂತಸದ ಸಿರಿಯಿಂದ ಲಕ್ಷ್ಮೀ ।
ಕಾಂತನಂಘ್ರಿಯೊಳೆರಗಿ ಭೀಷ್ಮಾದಿಗಳಿಗಭಿನಮಿಸಿ ॥
ಅಂತರಿಕ್ಷದಿ ನೆರೆದ ದಿವಿಜರ ।
ಸಂತತಿಗೆ ತಲೆಬಾಗಿ ಭೂಸುರ ।
ಪಂತಿಯಲಿ ಕೈಮುಗಿದು ಹೊಕ್ಕಳು ರಾಜಮಂದಿರವ ॥ ೩೦ ॥

ಮೆಲ್ಲಮೆಲ್ಲನೆ ಸಕಲ ಲೋಕದ ।
ವಲ್ಲಭರು ನಡೆತಂದು ಮಣಿಮಯ ।
ಸಲ್ಲಲಿತ ವರದಿವ್ಯ ಪೀಠದಲಿತ್ತರೋಲಗವ ॥
ನಿಲ್ಲದೀ ಪರಿಪರಿಯ ಭೂಮಿಪ ।
ವಲ್ಲಭರು ಪೂರ್ವಾಸನದದಲಿ ।
ರ(ದ್ದ)ಲಿ ಕರೆದರು ಕಾಮಧೇನುವನಂಸೆ ಕೇಳೆಂದ ॥ ೩೧ ॥

ಭರದಲಾಸನವಿಡಿದು ಕುಳಿತರು ।
ಪರಿಪರಿಯ ಶಾಸ್ತ್ರಗಳು ಮೆರೆದವು ।
ನೆರೆಮಹಾಂಮೃತ ಸಾಗರದಲಲ್ಲಿಮಯಮಾಯಿತ್ತು ॥
ವರ ಮಹಾ ಭುವಚಕ್ರ ತುಂಬಿತು ।
ಸುರಿದಧರ ಪಂಕ್ತಿಯುಗಂಗಳ ।
ನಿರದೆ ನಿಮುಷಾರ್ಧದಲಿ ಸಪಿದರು ರಾಜನವನಿಪರು ॥ ೩೨ ॥

ಬಂದು ಪಾಂಡು ನೃಪಾಲರೈವರು ।
ನಿಂದು ಕರಗಳ ಮುಗಿದು ಮುದದಲಿ ।
ವೇದಪುರುಷನೆ ಜಯ ಯೆನುತ ಯೆರಗಿದರು ಮಣಿಸಿರವ ॥
ಮುಂದಿ ಹಸಿದುದು ಜೀಯ ನಿಮ್ಮಡಿ ।
ಮುಂದೆ ವಿಜಯುಂಗೈದು ಯಾದವ ।
ವೃಂದ ಸಹ ಭೋಜನವ ಮಾಡೇಳೆಂದನವನೀಶ ॥ ೩೩ ॥

ಈ ಯುಧಿಷ್ಠಿರನೃಪನ ಬಿನ್ನಪ ।
ಕಾಯ ರಹಿತಹುದೆಂದು ಬಹೆವೆಂ ।
ದಾಯತಾಕ್ಷಿಯು ಭಾವೆ ವಿಶ್ವಾಂಭರತರೊಡಗೂಡಿ ॥
ವಾರುಬರಿಯದೆ ಬಂದು ಭೋಜನ ।
ವಾಯತವನೋಡುತ್ತ ರತ್ನದ ।
ಮಾಯ ಭರಣಮಣಿ ಗದ್ದುಗೆಸುನೇರಿದನು ಮುರವೈರಿ ॥ ೩೪ ॥

ಅರಸು ಬಂದುಪಚರಿಸಿ ಧರಣೀ ।
ವರರನೆಲ್ಲರ ಕರೆಯೆ ಶಂಧಿಯು ।
ಧೆರೆಯು ನಾಳಿದಿಪ್ಪಂದವಲಿ ಭರದಿಂದ ನಡೆತಂದ ॥
ವರ ಮಹಾಜನಕೆರಗಿ ಪಂಥಿಯು ।
ಥರಥರದಲವನಿಪರು ಕುಳ್ಳಿರೆ ।
ಯಿರದೆ ಯಾದವರೆಲ್ಲ ನಿಜಪೀಠದಲಿ ಮಂಡಿಸಿತು ॥ ೩೫ ॥

ಭೂಮಿಯುಮರರು ತಂದುದೆಲ್ಲರ ।
ರೊಮ್ಮೆದಿಂದಲಿ ಪಂಥಿಗಟ್ಟಿತು ।
ವಾ ಮಹಾತ್ಮನೆ ನೇಮದಲಿ ಕುಳ್ಳಿರ್ದರಲ್ಲಲ್ಲಿ ॥
ಸೀಮೆ ತಪ್ಪದೆ ಸಕಲ ಜನರುಹ ।
ತಮುತಮಗೆ ನೆಣಸುತ್ತ ಕುಳ್ಳಿರೆ ।
ಪ್ರೇಮದಲಿ ಸ್ತ್ರೀಬಾಲವೃದ್ಧರು ಕೂಡಿ ವೊದಗಿರಲು ॥ ೩೬ ॥

ರತ್ನಹರಿವಾಣದಲಿ ದೇವಗೆ ।
ವಿಸ್ತರದಿ ತಂದಿತ್ತು ಮಾಣಿಕ ।
ರತ್ನಖಚಿತದ ಬಟ್ಟಲಂಗಳ ಸವಟು ವೊದಲಾದ ॥
ಇತ್ತ ಭೂಮೀಶ್ವರರ ಗವರಿಗೆ ।
ಗಿತ್ತರಾಗಳೆ ತಳಿಗೆ ಬಟ್ಟಲ ।
ಮತ್ತೆ ಭೂಮಿಪಿಜರಿಗೆ ಯಿತ್ತರು ಕನಕಪಾತ್ರೆಗಳ ॥ ೩೭ ॥

ಮಿಕ್ಕಬಹುಜನ ಜಲಧಿಗೆಲ್ಲರಿ ।
ಗಿಕ್ಕದವರಿಗೆ ಕದಳಿಪಾತ್ರವ ।
ತಕ್ಕವರಿಗೊಲಿದಮಳ ಗಂಧಾಕ್ಷತೆಯನನುಕರಿಸಿ ॥
ಇಕ್ಕೆಲದ ಬೀದಿಯಲಿ ಬೆಳಗಿತು ।
ನಿಕ್ಕಿಮಣಿ ಮಾಣಿಕದ ದೀವಿಗೆ ।
ತಕ್ಕ ಬಾಲೆರು ತಂದರುದುಕವ ಹೇಮಕಲಶದಲಿ ॥ ೩೮ ॥

ಕಂಗಳೊಡುವಾ ಲಲನೆ ಥೋರಕು ।
ಚಂಗಳವು ಮದಗಜದ ಸತಿಯರು ।
ಸಂಗಕರ ಚರಣದಲಿ ನಾನಸುವಾಗಿಸಿಂಗರದ ॥
ಹಿಂಗದಂತಿಹ ಕಸ್ತುರಿಯ ತಿಲ ।
ಕಂಗಳಲಿ ಚಲುವಾಗಿ ಚದುರೆಯು ।
ಮುಂಗೈಯ ಭರಣಿಯ ತಿರಹುತಲಿ ನಡೆತಂದರಮರಿಯರು ॥ ೩೯ ॥

ಮೆರೆವ ಕಾಲಂದುಗೆಯ ರಭಸದ ॥
ಲರಳುಗಂಗಳ ಥಾಳ ಕಾಂತಿಯು ।
ಕೊರಳ ಮುತ್ತಿನ ಹಾರಪದಕದ ಜಘನದೂರುಗಳ ॥
ಭರದಿ ಬಂದರು ತಮ್ಮ ಪಂಥಿಗೆ ।
ಥರಥರದ ಶಾಖಗಳನೆಲ್ಲವ ।
ನಿರದೆ ಬಡಿಸುತ್ತಮರಿಯರು ಕಂಕಣದ ಕೈಯಲ್ಲಿ ॥ ೪೦ ॥

ಮತ್ತೆ ಸುರಸತಿಯರರ ಪಂಥಿಗೆ ।
ಯಿತ್ತ ಪರಿಪರಿಕಾರ ತಂದರು ।
ಅರ್ಥಿಯಲಿ ಬಡಿಸುತ್ತ ತಮತಮಗೆಂದು ಹರಿದಾಡಿ ॥
ಕೊಂತಿ ಮೊದಲಾಗಿರ್ದಸುವಸೀ ।
ಸಂತತಿಯು ಮುಂತ್ರೀ ನೃಪಾಲರ ।
ಪಂಥಿಸಾಲಿಗೆ ಭೂಸುರರು ದಣಿವಂತೆ ಬಡಿಸಿದರು ॥ ೪೧ ॥

ನಿಂಬಿಹುಳಿ ತಾ ಬೆಲ್ಲವಂತವು ।
ಲಂಭದೆಲ್ಲಂತರದ ಕಾಯಿಯು ।
ದೆಂಬ ಮೆಣಸಿನ ಗೊನೆಯನೆಲ್ಲವ ಲವಣ ಮೊದಲಾಗಿ ॥
ತುಂಬಿ ತೂಗುವ ಚೂತ ಪನಸಗ ।
ಳೆಂಬ ಮೊದಲಾಗಿರ್ದ ನಾನಾ ।
ಸಂಭ್ರಮದಿ ಬಡಿಸಿದರು ದಿವ್ಯಾಂಗನೆಯರೊಡಗೂಡಿ ॥ ೪೨ ॥

ಕಲಸು ಸಾಸಿವಿಗಾಯ್ತು ಸಂಭರಿ ।
ಕಳಿದ ಹಳಿಗಾಯಿಗಳು ಮೆಕ್ಕಿಯು ।
ಹಲವು ಪರಿ ಸೀಖರಿಣಿ ಹುಳಿಸವಿಯಾದಿ ಮೊದಲಾಗಿ ॥
ವಿಲಸದಿಂ ಹಪ್ಪಳವು ಸಂಡಿಗಿ ।
ಲಲಿತ ಗೌಲೀ ಪರಡಿ ಸೇವಿಗೆ ।
ಸುಲಿತವಾಗಿಹ ಸೌತಿಬೀಜದ ಪಾಯಿಸಸುವಾಗಿ ॥ ೪೩ ॥

ಕಡುಬು ಹೋಳಿಗಿ ಬೆಲ್ಲ ಮಂಡಿಗಿ ।
ವಡನೆ ಹೂರಣವಿಕ್ಕಿ ಮುಚ್ಚಿದ ।
ಹಿಡಿಗಡುಬು ಲಡ್ಡಿಗೆಯು ಘಾರಿಗೆ ವಡಿಯು ಸಹಿತದಲಿ ॥
ಬಡತನದ ನೆರೆ ತೈಲದ್ಹೋಳಿಗೆ ।
ದುಂಡುಸುತ್ತಿದ ಸುರುಳಿಹೋಳಿಗೆ ।
ವಡನೆ ಸಕ್ಕರಿ ಸಹಿತದವರಿಯರೆಡಿಗೆ ಬಡಿಸಿದರು ॥ ೪೪ ॥

ಬೀಸು ಹೋರಿಗೆ ಬಿಳಿಯ ಕರಚಿಯು ।
ಲೇಸು ಚಕ್ಕುಲಿ ಸಣ್ಣಸೇವಿಗೆ ।
ಕಾಸಿ ಚಿಣಿಪಾಲುಂಡೆ ನೆರೆ ಮೂರುಂಡೆಲನುವಾಗಿ ॥
ಲೇಸೆನಿಪ ರಾಜಾನ್ನದಶನವ ।
ಕೇಶವಗೆ ತಂದಿಟ್ಟಬಳಿಕೀ ।
ಭೂಸುರಾದಿ ಸಮಸ್ತರಿಗೆ ಬಡಿಸಿದರು ಸರಸಿಜರು ॥ ೪೫ ॥

ತೂಗಲರಿಯದ ಘೃತವು ಪಾತ್ರವು ।
ದೋಗರಕೆ ತಂದೆರೆದರೆಲ್ಲರಿ ।
ಗಾಗ ಪರಮಾನ್ನವನು ಪಾಯಸ ವರ ರಸಾಯನವ ॥
ಆಗ ಹೇಮದ ಹೂಜೆಯಲಿ ಗಂ ।
ಗೋದಕವನಿರಿಸಿದರು ಬೇಗದಿ ।
ಶೀಘ್ರದಲಿ ಧರಿಸಿದರಲಾಪೋಷಣವನೊಲವಿಂದ ॥ ೪೬ ॥

ಇಕ್ಕೆಲದ ಪಂಕ್ತಿಗಳ ಮಧ್ಯದ ।
ಲೆಖ್ಖವಿಲ್ಲದ ಪರಿಯಲಶನವು ।
ರಿಕ್ಕೆಲದಿ ತಾ ಪೇರಿ ಬಂದಿತು ಸಾಲುಸಾಲಿನಲಿ ॥
ಸಕ್ರಿಘೃತ ಮೊದಲಾದ ಹಲವನು ।
ಯಿಕ್ಕುತಲಿ ಸುರಿವುತಲಿ ತಡೆಯದ ।
ಲಕ್ಕರಿಂದಲಿ ಬಡಿಸುತಿದ್ದರು ದಿವಿಜಪಂಥಿಯಲಿ ॥ ೪೭ ॥

ಧರ್ಮಸುತ ಗಾಂಗೇಯ ನೀ ಪರ ।
ಭೀಮ್ಮ ಬಳಲಿದೆ ನೊತ್ತುಹೋಯಿತು ।
ನಿಮ್ಮ ಕರುಣದಿ ಸಕಲವಾಯಿತು ನಿಮಿಷಮಾತ್ರದಲಿ ॥
ಸುಮ್ಮನಿರಬೇಡೆಲವೊ ಸ್ವಾಮಿಯೆ ।
ಘಮ್ಮನೇ ಪಂಪಿಟ್ಟು ಬೇಗಲಿ ।
ಪನ್ನೆಯೆನುತಲಿ ಉಪಚರಿಸಿ ಸರ್ವಜ್ಞನು ಹರಿಯು ॥ ೪೮ ॥

ಭೂಸುರರ ಪಂಕ್ತಿಗಳಿಗೆರಗಿ ವಿ ।
ಶೇಷ ಹರುಷವಿಲಾಸದಲಿ ಅ ।
ದೇಶದೇಶಾಧಿಪರ ಆದರಿಸಿದನು ಉಪಚರಿಸಿ ।
ಈಸು ಭೋಜನದೊಳಗೆ ಬೇಡಿದ ।
ಗೇ(ಸೀ)ಸಿಕೊಳ್ಳಿರಿ ಯೆನುತಲವರಿಗೆ
ದೋಷರಹಿತಬೇಡೆನುತ ನುಡಿದನು ಹರುಷದಲಿ ಭೀಷ್ಮ ॥ ೪೯ ॥

ಈ ಮಹಾಜನ ಜಲಧಿಯವರಿಗೆ ।
ಕಾಮಹಾ ಪರ ಕಾಮಧೇನುವ ।
ಪ್ರೇಮದಲಿ ನೆರೆ ಕರೆಯುತಿತ್ತುದು ನೆನೆದ ವಸ್ತುಗಳ ॥
ಹೇಮಯಲಿ ಸುರವೃಷ್ಟಿಯಿತ್ತುದು ।
ಕಾಮಿತದ ಫಲವೃಕ್ಷ ನಿಕರದ ।
ವಿ(ವೀ?)ಮ ನಾರಿಯರುಣಬಡಿಸಿವಾಕ್ಸೈಯ್ಯ ತಮತಮಗೆ ॥ ೫೦ ॥

ಏನ ನೆನವರನೊಲಿದು ಬೇಡಿದ ।
ದಾ ನಿಖಿಳ ಪರಿಕರವನೆಲ್ಲವ ।
ಮಾನುನಿಯುದೊಡನೊಡನೆ ಬಡಿಸಿದರೆಲ್ಲರಿಗೆ ತಂದು ॥
ವಿನಿಯರಿಗೆ ಗುರುವರಿಗೆ ದೇಶದ ।
ಮಾನನಿಧಿದ್ವಿಜಕುಲಕೆ ವಿಕ್ರನ ।
ಸ್ಥಾನಿಗೆಲ್ಲರಿಗಿರದೆ ಬಡಿಸಿದರಖಿಳ ನಾರಿಯರು ॥ ೫೧ ॥

ಪರಡಿ ಶಾಲ್ಯೋಗರವು ಬುತ್ತಿಯು ।
ಕ್ಷೀರಸಕ್ಕರೆ ಸಹಿತ ತಂದರು ।
ನಾರಿಯರು ಬ್ರಾಹ್ಮಣರ ಪಂಥಿಗೆ ಸಕಲ ಸಂಕುಲಕೆ ।
ಬೇರೆ ಕಲಸೋಗರವನೆಲ್ಲರಿ ।
ಗಿರದೆ ಬಡಿಸಿದರೈದುರಾಗಳೆ ।
ಭೂರಿಸಭೆ ತಾನುಂಡು ದಣಿದದು ಪಂಥಿಪಂಥಿಯಲಿ ॥ ೫೨ ॥

ಅತ್ತಲಾ ನೋಟಕರು ನೆರೆದಿರೆ ।
ವೃತ್ತುಮದ ಕ್ಷೀರದಲಿ ವರ ದೇ ।
ವೋತ್ತಮನು ಶ್ರೀಕರವ ತೊಳದನುಪಮದ ವಿಭವದಲಿ ॥
ಇತ್ತ ಕೈಗಳ ತೊಳದರೆಲ್ಲರು ।
ವಿಸ್ತರದ ವರದಿವ್ಯ ಪೀಠವ ।
ಹತ್ತಿ ದೇವರ ದೇವ ವೋಲಗಗೊಟ್ಟು ಕುಳ್ಳಿರ್ದ ॥ ೫೩ ॥

ಬಣ್ಣದಡಕೆಯು ಹೋಳು ನಯವಹ ।
ಸಣ್ಣ ಕರ್ಪುರದ ಹಳಕು ಸಹಿತವೆ ।
ಸಣ್ಣಲೆಗಳಿಂಬಾದ ಬಿಳಿಯೆಲೆ ಯೆಸೆವವೀಳ್ಯಯವ ॥
ಹೊನ್ನತಬಕವ ತುಂಬಿ ನಿಜಪರಿ ।
ಪೂರ್ಣಕರುಣಾ ಜಲಧಿಗಿತ್ತರು ।
ಮುನ್ನಿಸುತ್ತವನೀಶ ಸರ್ವರಿಗಿತ್ತು ಕೈಮುಗಿದು ॥ ೫೪ ॥

ಇತ್ತ ಸುರರಾಸಭೆಯೊಳೆಲ್ಲರು ।
ಮತ್ತೆ ಗಜಗಮನೆಯರು ಸಹಿತವೆ ।
ಭುಕ್ತವನು ಮಾಡಿದರು ಪಾಂಡವನೃಪರು ಹರುಷದಲಿ ॥
ಇತ್ತ ವೀಳ್ಯವಗೊಂಡು ತಮ್ಮುವ ।
ಹೆತ್ತರೈವರು ಕೊಂತಿ ಸಹಿತವೆ ।
ಯಿತ್ತ ಮದಗಜಗೆರಗಿ ಹರಿ ಸನ್ನಧಿಯೊಳೊಪ್ಪಿದರು ॥ ೫೫ ॥

ಧರೆಯ ಪರಿಪರಿ ಭೋಜನಂಗಳ ।
ವರ ಮಹಾಜನ ವೃಂದಮಿದೆಯದು ।
ಪ್ರೀನವ ತಾ ಬೇಕಬೇಕೆನುವನುಗಳುವೃಂದು ॥
ಮುರಹರನ ಚರಣಾರವಿಂದವ ।
ನೆರೆದಸಭೆ ತಾವೆಲ್ಲ ಕಂಡರು ।
ಪರಮಪುರುಷನು ಪಾಂಡುನಂದನನಿದಿರ ಬೆಸೆಯುಂಡ ॥ ೫೬ ॥

ಇತ್ತಕೇಳ್ವೆ ನಿಮ್ಮ ಮನಸಿಗೆ ।
ಮಿಥ್ಯವಾಗದೆ ಪಾರ್ಥನಾತಿದ ।
ಸತ್ಯಭಾಷೆಯು ಸುಧಿದು ಬರಾವತನನಿಳುಹಿದನೂ ।
ಅತ್ತ ಪರ ವ್ಯತರಾಷ್ಟ್ರನರಸಿಯು ।
ವ್ಯತ್ತಿಕೆಯು ಮದಕರಿಯು ಸೇವಿಸಿಯು ।
ವಿಸ್ತರಕೆ ಬರಿಯಮಾತ್ರ ಗೇಳೆಂದ ಮುಂದ್ಯನಿ ॥ ೫೭ ॥

ಸ್ವಾಮಿ ನಿನ್ನಯ ಕರುಣವಳತೆಯು ।
ಪ್ರೇಮವಲ್ಲದೆ ನನ್ನ ಕಂದನ ।
ನಾಮದಿಂದೇನಹುದು ವಿಶ್ವಾತ್ಮಕನ ಕೃತ್ಯವಿದು ।
ಕಾಮಹರ ಕಮಲಾಸನಾದಿಗ ।
ಳೀ ಮಹಾವಿಭು ನಿನ್ನ ಮಹಿಮೆಯು ।
ಸೀಮೆಗಿದು ಕೌತುಕಕೆ ಸರಿಯುಳ್ಳಂಪಳೆಯುಜಾಕ್ಷ ॥ ೫೮ ॥

ಕರುಣಸಾಗರ ಕೇಳು ನಿನ್ನಯ ।
ಕರುಣವುಳ್ಳ ಮಹಾತ್ಮರೀಪರಿ ।
ಸರಿಯು ಮಿಗಿಲೆಂದೆನಿಸಿ ಫಲವನು ಪಡೆದುಕೊಂಡಿಹರು ।
ಹರಿಪರಾಙ್ಮುಖರಾದವರು ನೆರೆ ।
ದುರುಳರಾಗಿಯೆ ಮೆರೆವರೇ ತಾ ।
ಸರಿಗೆ ಸರಿನಾನಹುದೆ ಚಿತ್ರ್ಯಸೆಂದಳಾ ಕೊಂತಿ । ॥ ೫೯ ॥

ವಿಶ್ವತೋಮುಖನೀತನೆಂದೆ ।
ವಿಶ್ವತೋ ನಿಜನೇತ್ರನೆಂದೆ ।
ವಿಶ್ವತೋ ಪದ ಬಾಹುನೆಂದೆ ಸಕಲ ಶ್ರುತಿಸಿದ್ಧ ।
ವಿಶ್ವಪಾವನ ವಿಶ್ವಭಾವಕ ।
ವಿಶ್ವಧಾರಕ ವಿಶ್ವಕರ್ಮನ ।
ವಿಶ್ವವ್ಯಾಪಕ ನಿನಗೆ ಸರಿಯಿಲ್ಲೆಂದರಾ ಕೊಂಡೆ ॥ ೬೦ ॥

ದಾನ ಯೋಗಿತ ಫಲಂಗಳನು ಕರೆದರು ।
ಸಾಯುಧದಲಿ ಜೆಸಾಡಿದಳು ನಿಮ್ಮನು ।
ಕಾಯು ಕೊಂಡೀ ಕರೆಯು ದೋಽಂಬಿಯು ಭೃತ್ಯಗತಿಗಳಲಿ ॥
ಈ ಯುವತಿಜನ ಸಹಿತ ನಿಜಾನ ।
ರಾಯುತ್ತೆರಾವತಸ ಕಳುತ್ತೆ ।
ಸಾಯುಕದ ಮಾರ್ಗದಲಿ ಮಿಗೆ ನೀಽಂದಸುರಾರಿ ॥ ೬೧ ॥

ಎನಲು ಜೋಽಯ್ಯಕೆ ಯೋಽಸುದೆಂದನು ।
ಜನಪ ಕೊಂಡೀಯೋಽವಿ ಮಹಾತ್ಮಿಜ ।
ದನಿಲಜಾತ ಸಹಿತವಾ ವಿದಾವರ ಬಲವೆಂದು ॥
ದಿನಯುದಲಿ ಭೂಮಿಯುಷ್ಟು ಬಂದಿಗೆ ।
ಮನ್ನಿಸ ತ ಸುರತರುವ ಸುರಪುರ ।
ವನಿತೆಯುರಿಗೊಂಡಿಸುತ ನಗರ ಮುಗಿಯು ಕರಾಜದಲಿ ॥ ೬೨ ॥

ಬಳಲಿದರಿ ಹುರಿದಾಗಿ ನಿಽಸಂ ।
ದೊಳಗಮಿಯು ಮಧ್ಯದಲಿ ಸುರಪುರ ।
ಲಲನೆಯರ ಸಹಸ್ರೋಽಽ ಪ್ರಭವರಿಸಿದರು ವಿನಯದಲಿ ॥
ಇರದು ದಿನ ಮುನಿರಾಯ್ಯು ಕೇಳಿರು ।
ಜೆಳವಿಗೆಯು ಮಹಾವಿದಿರ ಸಾಕಿ ।
ಸ್ಥಿರದ ಮಾರ್ಗದ ಮೆಚ್ಚೆ ಕೆರಳುವರೆಂದು ನೋಡುವದ ॥ ೬೩ ॥

ಸುರರು ಸಹಿತಮಹೇಂದ್ರ ಹರಸಿದ ।
ಸರಸಿಜನಘನ ಮೇಲೆ ಮಲ್ಲಿಗೆ ।
ಯರಳ ವೃಷ್ಟಿಯ ಕರೆದು ಮುರಹರ ತ್ರಾಹಿ ಯೆಂದೆನುತ ॥
ಗಿರಿಜೆಯರಸಂಗೆರಗಿ ವಿನಯದಿ ।
ಸುರರು ಕಳುಹಿಸಿಕೊಂಡು ತಮ್ಮಯ ।
ಪುರಕೆ ತೆರಳಿದರಿತ್ತ ನಿರ್ಜರರಸನೊಡಗೂಡಿ ॥ ೬೪ ॥

ಬಿಲ್ಲನೇರಿಸಿ ಕೊಡಹಿದಂಬನು ।
ಮೆಲ್ಲನೆಚ್ಚನು ಬಾಣಪಂಜರ ।
ವೆಲ್ಲಧರಣಿಗೆ ಬೀಳಲಂಬುಧಿ ತುಡುಕುವಂದದಲಿ ॥
ಬಲ್ಲಿದನು ತರಿದೊಟ್ಟಿ ನಿಮಿಷಕೆ ।
ಯೆಲ್ಲವನು ಬಯಲಾಯ್ತು ಗೌರೀ ।
ವಲ್ಲಭನು ಮೆಚ್ಚಿದನು ಫಲ್ಗುಣ ಭಾಪುರೇಯೆನುತ ॥ ೬೫ ॥

ಅಘಹರನ ನಾಟಕಕೆ ಮೆಚ್ಚಿದ ।
ಮೃಗಧರನು ಗರ್ವಗೆಮುನಿಸಿದನು ।
ಬಿಗಿದು ನಂದಿಯನೇರಿ ಗಿರಿಜಾರಮಣರೊಡಗೂಡಿ ॥
ನಗಮೊಗೆಯು ಹರುಷದಲಿ ಪಾರ್ಥನ ।
ಬಗೆಯ ಭುಜಬಲ ಕ್ರಮವ ಹೊಗಳುತ ।
ಅಘಹರನು ತಾ ತೆರಳಿದನು ಕೈಲಾಸ ಮಂದಿರವ ॥ ೬೬ ॥

ನೆರೆದ ಸಕಲ ಸಮಸ್ತ ಭೂಮಿಪ ।
ವರಮಹಾಂಬುಧಿ ಕೃಷ್ಣರಾಯನ ।
ಚರಣಕಮಲದೊಳೆರಗಿ ಕಳುಹಿಸಿಕೊಂಡು ಪಾಂಡವರ ॥
ಬರಸೆಳೆದು ತಕ್ಕೈಸಿ ತಮ್ಮಯ ।
ಪುರಕೆ ನೇಮವಗೊಂಡು ಭರದಲಿ ।
ಕರಿತುರಗರಥವೇರಿ ನಡೆದರು ಭೂಮಿಲಂಬದಲಿ ॥ ೬೭ ॥

ದೇಶದೇಶದ ನೆರೆದ ಜನತಾ ।
ಕೋಶ ಹರದದು ಬೇಗದಿಂದವ ।
ನೀಶನಂಘ್ರಿಗೆ ನಮಿಸಿ ಕಳುಹಿಸಿಕೊಂಡರುಚಿತದಲಿ ॥
ದೊಷರಹಿತ ಮುಕುಂದ ಪಾಂಡವ ।
ಧೀಶರನು ನೆರೆಕರೆದು ಮನ್ನಿಸಿ ।
ಸೂಸಿದನು ತಾ ಕೃಪೆಯ ಸಾಗರಲರಸಕೇಳೆಂದ ॥ ೧೮ ॥

ಧರ್ಮನಂದನ ಕೇಳು ನಿಮ್ಮಯ ।
ತಮ್ಮನರ್ಜುನರಿವನ ದೆಸೆಯಿಂ ।
ದಾನುಹಾಶಕ್ತಿಯಲಿ ಐರಾವತವನಿಳುಹಿದನು ॥
ನಿರ್ಮಳದಿ ನೆರೆ ಕೊಂತಿ ನೋತಳು ।
ನಿಮ್ಮ ಪುಣ್ಯದ ಬೆಳಸ ಹರದವು ।
ಯೆಮ್ಮ ಪುರವರಕಿನ್ನು ಹೋಗುವೆನೆಂದನಸುರಾರಿ ॥ ೧೯ ॥

ಎದ್ದನಂಬುಜ ನೇತ್ರ ಕರುಣದಿ ।
ಹೊದ್ದಿಸಿದರಂದಣವನಾಗಳೆ ।
ಸದ್ದನೇರುತ ಬಂದ ಕೃಷ್ಣನು ಪುರದ ಹೊರಗಾಗಿ ॥
ಬಿದ್ದ ಪಾದದ ಮೇಲೆ ಪಾಂಡವ ।
ರಿದ್ದರಾ ಕೈಗಳನು ಮುಗಿವುತ ।
ಯೆದ್ದು ನುಡಿದರು ರಕ್ಷಿಸೆಮ್ಮನು ನಿನ್ನ ಕರುಣದಲಿ ॥ ೨೦ ॥

ಹರಿಯೆ ನಿಮ್ಮಯ ಚರಣ ಕಮಲವ ।
ನರಿಯಲರಿಯರು ಜೀವಿಗಳು ತಾ ।
ಮರೆಯಲಿಹವೇ ನಾವು ನಿಮ್ಮಯ ವಿಶ್ವರೂಪವನು ॥
ಭರದಿ ನಿನ್ನಯ ಸುತರಸೈವರ ।
ಹೊರುವವನು ನೀನಹುದು ನನ್ನನು ।
ನಿರದೆ ಕಳಸೈ ನಿನ್ನ ಸನ್ನಿಧವೆ (ಧಿಯೆ)ನುತ ತಿರಿಗಿದಳು ॥ ೨೧ ॥

ಏರಿದನು ಮುರವೈರಿ ರಥವನು ।
ನಾರಿಯರು ಸಹಿತಾಗಿ ಮಂಗಳ ।
ಭೇರಿಗಳು ನಿಸ್ಸಾಳ ತಮ್ಮಟ ವಾದ್ಯವಲ್ಲಲ್ಲಿ ॥
ಚೀರಿದವು ಕಹಳೆಗಳು ಬಿರುದನು ।
ಬೀರಿದವು ಕೀರ್ತಿಯನು ವಂದೆ ।
ಲೋಲನೆಸಿ ನಡೆತಂದ ರಥ ಹಯ ಗಜವು ಮೊದಲಾಗಿ ॥ ೭೨ ॥

ವರಯುಧಿಷ್ಠಿರ ನೃಪತಿ ಹರಿಪದ ।
ಚರಣಯುಗಳವ ಸೊತ್ತು ತನ್ನಯ ।
ಸಿರಿಮುಡಿಗೆ ಪಲ್ಲವಿಸಿ ಒಸಿದನು ಭೀಮ ಸತ್ತಿಗೆಯ ॥
ಭರದಲರ್ಜುನ ಚಾಮರಂಗಳ ।
ಮೆರೆವ ಪಡಪಾಳಿಗಳ ಯಮಳರು ।
ಧರಿಸಿ ಹರಿಘನವಿತ್ತು ಬಂದರು ಪಾಂಡುನಂದನರು ॥ ೭೩ ॥

ನಿಲ್ಲು ಧರ್ಮಜ ಭೀಮ ಫಲುಗುಣ ।
ಲಿಲ್ಲ ಕೊಂತೀದೇವಿಯಮಳರು ।
ನಿಲ್ಲಿ ನೀವೆಂದವರ ನಿಲಿಸಿದನಧಿಕ ಕರುಣದಲಿ ॥
ಫುಲ್ಲಲೋಚನ ಪಾಂಡು ಪುತ್ರರ ।
ನಲ್ಲಿ ಮನ್ನಿಸಿ ನಿಮ್ಮಬದುಕಿಗೆ ।
ಹೊಲ್ಲೆಯಗಳಿಲ್ಲಕಟ ತಾನಿಹೆನೆಂದನಸುರಾರಿ ॥ ೭೪ ॥

ಬೇರೆಬೇರೈವರನು ಮನ್ನಿಸಿ ।
ಕರುಣದಲಿ ತಾ ಕೊಂತಿದೇವಿಯ ।
ನಾರಿಸಹಿತೆಲ್ಲರನು ಕಳುಹಿದನತ್ತ ನಿಜಪುರಕೆ ॥
ವಾರಿಜಾಂಬಕನತ್ತ ತಿರಿಗಿದ ।
ದ್ವಾರಕೆಯ ಮಂದಿರವ ಹೊಕ್ಕನು ।
ಸಿರಿಧರನು ಸತಿಯೊಡನೆ ಸಂತೋಷದಲಿ ಯಿರುತಿರಲು ॥ ೭೫ ॥

ಇತ್ತ ಬಂದರುರೈ ಕುಮಾರು ।
ಮತ್ತೆ ತಮ್ಮಯ ಮನೆಯೊಳೋಲಗ ।
ವಿತ್ತು ಕೃಷ್ಣನ ದಿವ್ಯ ನಾಮಾಂಮೃತವ ಸವಿಸವಿದು ॥
ಹೆತ್ತ ತಾಯೊಡಗೂಡಿ ತಮಸಿನ ।
ಮೊತ್ತವನು ಕಡೆಯಾದ ಬೆಳಗುವ ।
ನಿತ್ಯ ದಿನಕರನಂತೆ ಮೆರೆದರು ಪಾಂಡುನಂದನರು ॥ ೭೬ ॥

ಭೂತಳಾಧಿಪ ಧರ್ಮರಾಯನು ।
ಮಾತೆಗೆಂದನು ಮೂರು ಲೋಕಕೆ ।
ಖ್ಯಾತಿ ಪಡೆದನು ಯಿಂದ್ರನೈರಾವತವ ನೆರೆನೋತು ॥
ಮಾತುಗಳು ಹಲವೇತಕೆಮ್ಮಯ ।
ದಾತನಂಬು(ಭೋ)ಜಾಕ್ಷ ನಿಹಪರ ।
ಗತಿಪರವ ಕೊಡುತಿಹನು ಗದುಗಿನ ವೀರನಾರೆಯಣ ॥ ೭೭ ॥

ಕೇಳಿವನು ಜನಮೇಜಯ ಕ್ಷಿತಿ ।
ಪಾಲನೀ ಮುನಿವರನ ಚರಣದ ।
ಮೇಲೆ ಮೌಳಿಯ ಚಾಚಿ ಹರುಷಾಂಬುಧಿಯಲೋಲಾಡಿ ॥
ಹೇಳಿದೈ ನಮ್ಮಜ್ಜ ಕೊಂತಿಯು ।
ಲೀಲೆಯಿಂದಲಿ ನೋಂತ ನೋಪಿಯ ।
ನಾಲಿಸಿದೆನಿಹಪರದ ಪುಣ್ಯವಿದೆಂದು ಕೈಮುಗಿದ ॥ ೭೮ ॥

ಸುರಪನೈರಾವತವನರ್ಜುನ ।
ಧರೆಗಿಳಿಹಿ ವರ ಕೊಂತಿದೇವಿಗೆ ।
ಮುರಹರನ ಚರಣವನು ಕಾಣಿಸಿ ನೋತಧಿಕ ಕಥೆಯು ॥
ಇರುಳು ಹಗಲೆಂದೆನ್ನದಾಗಳೆ ।
ನೊರೆದು ಹೇಳಿದರವರ ಪಾತಕ ।
ಹರಿದು ಹರಿಸನ್ನಿಧಿಯಲಿರುತಿಹರೆಂದನಾ ಮುನಿಪ ॥ ೭೯ ॥

ಅರಿದನು ನೆರೆ ಕಲಿತು ಹೇಳಿದ ।
ರಾರಿದನು ಭಕ್ತಿಯಲಿ ಕೇಳಿದ ।
ರೇರಿ ಬಹುದಾಯುಷ್ಯ ಸಂಪದ ಪುಣ್ಯ ವರ್ಧಿಪದು ॥
ವೀರ ನಾರಾಯಣನ ಕರುಣದ ।
ವಾರಿಧಿಯ ಲೀಲಾದಿ ಬಹುದಿಂ ।
ಹರುಷದಲಿ ಹೇಳಿದನು ಮುನಿವರನಾಥನೊಲವಿನಲಿ ॥ ೮೦ ॥

ಭೂಮಿ ಕನ್ಯಾದಾನ ಫಲಗಳ ।
ಸೋಮನಿಕರಗ್ರಹಣ ಕಾಲದ ।
ಹಾಮಹಾಭರಣಾದಿ ವಸ್ತುವ ನಿಖಿಳ ವಿಪ್ರರಿಗೆ ॥
ಪ್ರೇಮದಲಿ ಶತಸಹಸ್ರ ಕಪಿಲೆಯ ।
ಸೀಮೆಯಿಂದೊಲಿದಿತ್ತ ಫಲವಹು ।
ದಾ ಮಹಾ ಹರಿನಾಮದೈರಾವತವ ಕೇಳ್ದರಿಗೆ ॥ ೮೧ ॥

ಗಂಗೆ ಗೋದಾವರಿಯು ನರ್ಮದೆ ।
ತುಂಗಭದ್ರೆಯು ಯಮುನೆ ಸರಸ್ವತಿ ।
ಹಿಂಗದಿಹ ಪಾತಕವ ಕೆಡಿಸಿದ ವಾರಣಾಸಿಯಲಿ ॥
ಸಂಗವಿಕ್ರಮವೆನಿಪ ಕಾಶಿಯೊ ।
ಸಂಗತಿಯ ವರಸ್ನಾನ ಫಲವಹು ।
[1]ದೀಗಲೈರಾವತವ ಕಥೆಯನು ಕೇಳ್ವ ಮನುಜರಿಗೆ ॥ ೮೨ ॥

ಅಂತು ಸಂಧಿ ೮ಕ್ಕೆ ಪದ ॥ ೪೭೩ಕ್ಕೆ ॥
ಮಂಗಳಮಹಾ ಶ್ರೀ ಶ್ರೀ ಶ್ರೀ[2]

---

1 ಪ್ರಾಸ ತಪ್ಪಿದೆ.

2 " ಶಕೆ ೧೬೭೭ ॥ ವಿಶ್ವಾವಸುನಾಮ ಸಂವತ್ಸರದ ಮಾಘ ಶುದ್ಧ ಬಹುಳ ೬ ಸೋಮವಾರ ಅರು ತಾಸಿಗೆ ಈ ಪುಸ್ತಕ ಮುಗಿದುದು ಮುದ್ರಿತ ಇಂತೀ ಮಂಗಳ ಮಹಾ ಶ್ರೀ ಶ್ರೀ ।" ಎಂದು ಗ ಪ್ರತಿಯಲ್ಲಿಯೂ
" ಶಕ ೧೭೫೩ ವಿರೋಧಿಕೃತು ನಾಮ ಸಂವತ್ಸರ ಆಷಾಢ ಶುದ್ಧ ೧೫ ವಿಂದುವಾರ ದ್ವಿತೀಯ ಪ್ರಹಾರದಲ್ಲಿ ಮುಗಿದುದು " ಎಂದು ಕ ಪ್ರತಿಯಲ್ಲಿಯೂ ಪ್ರತಿ ಮಾಡಿದ ಕಾಲಗಳ ಉಲ್ಲೇಖವಿರುವವು.

ಪ ರಿ ಶಿ ಷ್ಟ

ಶ್ರೀ ಕುಮಾರವ್ಯಾಸ ವಿರಚಿತ ಕರ್ಣಾಟಕ ಮಹಾಭಾರತದೊಳಗಿನ ಆದಿ ಪರ್ವ ಸಂಧಿ ೨೦ ರಲ್ಲಿಯ ಐರಾವತ ಕಥೆ ಮತ್ತು ಐರಾವತ ಕಥೆಯ ಧಾರವಾಡ ಪ್ರತಿ ಇವುಗಳಲ್ಲಿರುವ ಪದ್ಯ ವ್ಯತ್ಯಾಸ.

ಸೂಚನೆ:— ಮೈಸೂರು ಪ್ರತಿಯ ಪದ್ಯಗಳು ಧಾರವಾಡ ಪ್ರತಿಯ ೧, ೫, ೬, ೮ ಸಂಧಿಗಳಲ್ಲಿ ಸೇರಿವೆ. ಧಾರವಾಡ ಪ್ರತಿಯ ೨, ೩, ೪, ೭ ಸಂಧಿಗಳು ಪ್ರಾಯಃ ಹೊಸವು.

ಮೈಸೂರು ಪ್ರತಿ	**ಧಾರವಾಡ ಪ್ರತಿ**
ಸಂಧಿ ೧	
ಪದ್ಯ	**ಪದ್ಯ**
ಸೂಚನೆ	ಸೂಚನೆ
ಇಂದ್ರನೈರಾವತವ.... ಲೋಕದಲಿ.	ಏನೂ ಅಂತರವಿಲ್ಲ.
೧) ಕೇಳು ಜನಮೇಜಯ....ರಾಜ ಮಂದಿರಕೆ	೧) ವಿಶೇಷ ಅಂತರವಿಲ್ಲ ಹೇಳಿದನು ಎಂಬಲ್ಲಿ ಹೇಳಿದರು ಮಾತ್ರ ಬಿಟ್ಟು
೨) ಅರಮನೆಗೆ ನಡೆತಂದ........ ಮಹಿಪತಿಯ	೨) ವಿಶೇಷ ಅಂತರವಿಲ್ಲ
೩) ಬಂದ ವೇದವ್ಯಾಸ .... ಬೆಸಗೊಂಡ	೩) ವಿಶೇಷ ಅಂತರವಿಲ್ಲ 'ಸಿಂಹ ವಿಷ್ಟರ' ಇದ್ದಲ್ಲಿ 'ಸಿಂಹಪೀಠ' ಮಾತ್ರವಿದೆ.
೪) ದೇವ........ಅಂಧನೃಪ	೪) ವಿಶೇಷ ಅಂತರವಿಲ್ಲ. ದೇವ ನಿಮ್ಮಡಿಗಳ ಇದ್ದಲ್ಲಿ ದೇವಮುನಿ ನಿಮ್ಮಡಿಯ ಎಂದು ಇದೆ.
೫) ಧರಣಿ ಪಾಲನ .... ವೇದವ್ಯಾಸ ನುಡಿದ	೫) ವಿಶೇಷ ಅಂತರವಿಲ್ಲ
೬) ಧರೆಯೊಳೈರಾವತ............	೬–೭ನೆಯ ಪದ್ಯಗಳು ಧಾರವಾಡ ಪ್ರತಿಯಲ್ಲಿ ಇಲ್ಲ.
೭) ಕೇಳು ಜನಮೇಜಯ........	
೮-೯)	೬–೭) ವಿಶೇಷ ಅಂತರವಿಲ್ಲ.

೧೦) ಬಂದರಾಚಿತ್ರಕರು .... ಅಖಿಳ ಜನ	೮) ವಿಶೇಷ ಅಂತರವಿಲ್ಲ. ಸಾಲು ೧-೨ ಚಿತ್ರಿಸಿ ರಚಿಸಿದೈರಾವತದ ಹೋಲಿಕೆಗೆ (ರಚಿಸಿದರಾನೆಯನು ಚೌದಂತಿಗಳ ನಿಲಿಸಿ) ಎಂಬಲ್ಲಿ ಮಾತ್ರ; ಮತ್ತು ಐಂದ್ರ ಎಂಬಲ್ಲಿ ಐಂದ.
೧೧) ಮುತ್ತು ಮಾಣಿಕ .... ಮಾವುತರು	೯) ಪೂರಾ ಬೇರೆ ತರದ್ದು:—(ಎತ್ತಿ ಬೀಸಿದಗುಳದ....ಚೆತ್ತಿಗೆಗಳಿಂದ ಹರಿದಂಕುಶದಿಂದ ಮಾವುತರು)
೧೨) ಚಂದವಾದುದು.. ಕರವ ಮುಗಿದು ಬಿನ್ನೈಸಿ	೧೦) ಪೂರಾ ಬೇರೆ ತರದ್ದು:- ಬರಸಿದೈರಾವತಕೆ.... ಕರವಮುಗಿದಿಂತೆಂದು ಬಿನ್ನೈಸಿದರು ವಿನಯದಲಿ
೧೩) ದೇವಿಚಿತ್ತೈಸುವುದು....ಎಮ್ಮಂಬುಜಾಕ್ಷಿ	೧೧) ವಿಶೇಷ ಅಂತರವಿಲ್ಲ:— ಸಾಲು ೩-೪-೫ ಬಿಟ್ಟು
೧೪) ಮಿಂದು ದೇವಾಂಗ	೧೨) ವಿಶೇಷ ಅಂತರವಿಲ್ಲ.
೧೫) ಹಿಡಿದ ಮುತ್ತಿನ.............	೧೩) ,, ,,
೧೬) ಅರರೆ ಮನಸಿಜ....ಇದನೆಂದ	೧೪) ಪೂರಾ ಬೇರೆ ತರದ್ದು:-- ಸುರತ ಮನಸಿಜನೊಲವೊ....ಭೂಮೀಶ್ವರನ ರಾಣಿಯೊ ಕೆಳದಿಯರೊ ....ಕೇಳೆಂದ
೧೭) ಹಾವುಗೆಯ... ಬಲ್ಲರಾರೆಂದ	೧೫) ಪೂರಾ ಬೇರೆ ತರದ್ದು:— ಆವಿಗಳ ಅಂಚೆಗಳ .... ಭಾವಿಕೆಯರಿಡೆ ತಂದರೈ ಮಾನುನಿಯ ಬಳಿವಿಡಿದು.
೧೮) ನುಡಿಗೆ ಗಿಳಿ....ದೇಹ ಪರಿಮಳಕೆ	೧೬) ಪೂರಾ ಬೇರೆ ತರದ್ದು:-ನುಡಿಗೆ ಗಿಳಿ ಹುದುಗಿದವು .... ತೊಡವಿದವು ನೋಟಕೆ ಚಕೋರವು। ಇಡಿಕೆ
೧೯) ಕಳಸ ಕುಚಗಳ .... ಭೂಪಾಲ ಕೇಳೆಂದ	೧೭) ಪೂರಾ ಬೇರೆ ತರದ್ದು:- ಕಳಸ ಕುಚಗಳ ಹೊಳೆವ ಪವಳದ.... ನರನಾಥ ಕೇಳೆಂದ

೨೦) (೨೧) (೨೨) (೨೩) (೨೪) (೨೫) (೨೬)	೧೮) (೧೯) (೨೦) (೨೧) (೨೨) (೨೩) (೨೪) ಇವುಗಳಲ್ಲಿ ವಿಶೇಷ ಅಂತರವಿಲ್ಲ. ಆದರೆ (೨೫M) ರಲ್ಲಿ ಯಮತನುಜಕ್ಕೆ (D) ಬದಲಾಗಿ, ಶಮನನ ತನುಜ ಉಂಟು. (ಧಾರವಾಡ ಪ್ರತಿಯದು ಉತ್ತಮ) ಮತ್ತು ಮೈಸೂರ ಪ್ರತಿ ೨೬ನೆದರಲ್ಲಿ ಶ್ರಮವನು ಮಾಡಿ; ಧಾರವಾಡ ಪ್ರತಿ ಶ್ರಯಮಾಡಿ; ಇದು ಉತ್ತಮವದೆ.
೨೭) (೨೮) (೨೯) (೩೦)	೨೫) (೨೬) (೨೭) (೨೮) ವಿಶೇಷ ಅಂತರವಿಲ್ಲ. ಆದರೂ ಮೈಸೂರ ಪ್ರತಿ ಉತ್ತಮ.
೩೧) (೩೨) (೩೩) (೩೪) (೩೫) (೩೬) (೩೭)	ಧಾರವಾಡ ಅಂಕ ೨೯) (೩೦) (೩೩; (೩೪)(೩೫)(೩೬) (೩೭) ವಿಶೇಷ ಅಂತರವಿಲ್ಲ (ಮೈಸೂರು ಪ್ರತಿ ಉತ್ತಮ)
೩೮) ಸಿರಿಯ ಮದದಲಿ........ತಾಯೆ ನೋನೆಂದ	— ಇದಕ್ಕೆ ಸಮವಾದ ಪದ್ಯ ಉಪಲಬ್ಧವಿಲ್ಲ.
೩೯) (೪೦) (೪೧) (೪೨) (೪೩)	(೩೯) (೩೮) (೪೧) (೪೨) (೪೩) ವಿಶೇಷ ಅಂತರವಿಲ್ಲ ಆದರೂ ಮೈಸೂರು ಪ್ರತಿ ಉತ್ತಮ
೪೪) ತಪ್ಪ ನುಡಿವೆನೆ............... ....ಶರಸನ್ಯಾಸವೆನಗೆಂದ	— ಇದಕ್ಕೆ ಸರಿಯಾದದ್ದು ಧಾ. ಪ್ರತಿಯಲ್ಲಿ ಉಪಲಬ್ಧವಿಲ್ಲ.
೪೫) ಗೋತ್ರಭೇದಿಯ....ತನುಜನಲ್ಲೆಂದ	,, ,, ,,
೪೬) ಜನನಿ ಚಿತ್ತವಿಸೆಚ್ಚ....ಣೆಂದನಾ	೪೪) ವಿಶೇಷ ಅಂತರವಿಲ್ಲ, ಮೈಸೂರ ಪ್ರತಿ ಉತ್ತಮ
೪೭) ಕಳುಹಿದೋಲೆಗೆ . ... ಪಾದದಾಣೆಂದ	— ಧಾರವಾಡ ಪ್ರತಿಯಲ್ಲಿ ಇದಕ್ಕೆ ಸರಿಯಾದದ್ದು ಉಪಲಬ್ಧವಿಲ್ಲ.
೪೮) (೪೯) (೫೦) (೫೧) (೫೨)(೫೩) (೫೪) (೫೫) (೫೬)	೪೫) (೪೬) (೪೭) (೪೮) (೫೦) (೪೯) (೫೧) (೫೨) (೫೪) ವಿಶೇಷ ಅಂತರವಿಲ್ಲ (೫೨M)

	ಫಾಳಲೋಚನ (ಧಾ. ಬಹಳ… ಲೋಚನ) ಮೈಸೂರು ಉತ್ತಮ
೫೭) ಕೋಟಿದಿರು ... ನಿಕ್ಕಿ ಕಳುಹು ವುದು	— ಇವಕ್ಕೆ ಸರಿಯಾದ ಪದ್ಯ ಧಾರ… ವಾಡ ಪ್ರತಿಯಲ್ಲಿ ಉಪಲಬ್ಧವಿಲ್ಲ
೫೮) ಬಿಟ್ಟನವ——ಧರ್ಮರಾಯನ ಪಾದದಾಣೆಂದ	೫೬) ವಿಶೇಷ ಅಂತರವಿಲ್ಲ ಆದರೂ ಮೈಸೂರು ಪ್ರತಿ ಉತ್ತಮ
೫೯) ಗರುಡಿಯಧಿಪತಿ....ಹರಿಕರುಣ ವುಂಟೆಂದ	— ಇವಕ್ಕೆ ಸರಿಯಾದ ಪದ್ಯ ಧಾರ… ವಾಡ ಪ್ರತಿಯಲ್ಲಿ ಉಪಲಬ್ಧವಿಲ್ಲ
೬೦) ಸರಸ ದುರ್ಗವ .... ಕುಂತಿಯ ಪಾದವಾಣೆಂದ	೫೯) ವಿಶೇಷ ಅಂತರವಿಲ್ಲ. ಮೈಸೂ… ಪ್ರತಿ ಉತ್ತಮ
೬೧) ಪರಮ ಪುರುಷೋತ್ತಮ ... ಜವವನೆನಿಸುವೆನೆ	— ಇವಕ್ಕೆ ಸರಿಯಾದ ಪದ್ಯವ… ಧಾರವಾಡ ಪ್ರತಿಯಲ್ಲಿ ಉಪ… ಲಬ್ಧವಿಲ್ಲ.
೬೨) (೬೩) (೬೪) (೬೫) (೬೬) (೬೭) (೬೮) (೬೯) (೭೦) (೭೧) (೭೨) (೭೩)	ಧಾ. ಪ್ರತಿ ಅಂಕ (೫೭) (೫… (೫೮) (೬೦) (೬೧) (೬೨) (೬… (೬೬) (೬೭) (೬೮) (೬೯) (೭೦… ವಿಶೇಷ ಅಂತರವಿಲ್ಲ ಆದರೆ ಧಾ… ವಾಡ ಪ್ರತಿ ಅಂಕ (೬೨) (ಸಾಲ… ೧೨) (೬೬) ಕಡೆಯ ಮೂರ… ಸಾಲುಗಳ ಅರ್ಥ ಚೆನ್ನಾ… ಆಗುವಂತಿಲ್ಲ
೭೪) ಚರಣಕೆಱಗಿದೆ............ಪಾರ್ಥ	(೭೦?) ಧಾ. ೭೦ರಲ್ಲಿ ಮೂರ… ಸಾಲುಗಳು ಸರಿಯಾಗಿ… ಮೈಸೂರು ಪ್ರತಿ ಉತ್ತಮ.
೭೫) ಬಂದನಾಗಳೆ	೭೧) ವಿಶೇಷ ಅಂತರವಿಲ್ಲ. **ಧಾ… ವಾಡ ಪ್ರತಿಯಲ್ಲಿ ೧ನೆಯ… ಸಂಧಿ ಮುಗಿದದೆ.**
೭೬) ಕೇಳು ಜನಮೇಜಯ....ಖಚರಂಗೆ ೭೭) ಅರಸ ಕೇಳೀ........ ದಿಭಪುರಿಗೆ	ಇವಕ್ಕೆ ಧಾರವಾಡ ಪ್ರತಿಯ… ಸಮವಾದ ಪದ್ಯಗಳು ಉಪಲ… ವಿಲ್ಲ.
೭೮) ವೆಸೆವೆಸೆಯ....ಗರಸ ಕೇಳೆಂದ	ಸಂಧಿ ೩ ಅಂಕ ೨; ವಿಶೇಷ ಅಂ… ವಿಲ್ಲ.

೭೯) (೮೦) (೮೧)	— ಧಾರವಾಡ ಪ್ರತಿಯಲ್ಲಿ ಇವಕ್ಕೆ ಸಮಾನವಾದ ಪದ್ಯಗಳು ಉಪಲಬ್ಧವಿಲ್ಲ.
೮೨) ಶಿರಿದು ಬರಿದು......ಬಿಚ್ಚಿದ ಕೈಕಾಲ	ಸಂಧಿ ೫ ಅಂಕ ೩ ವಿಶೇಷ ಅಂತರವಿಲ್ಲ. ಆದರೂ ಧಾರವಾಡ ಪ್ರತಿ ಉತ್ತಮ.
೮೩) ಬಿಡಿಸದನ..........................	ಧಾ. ೫-೪ ವಿಶೇಷ ಅಂತರವಿಲ್ಲ
೮೪) .... ಕಲಿಪಾರ್ಥ	
೮೫) ಶರವದುಪ... ಸ್ತ್ರೀರಸ ಕೇಳಿಂದ	— ಧಾರವಾಡ ಪ್ರತಿಯಲ್ಲಿ ಇವಕ್ಕೆ ಸಮಾನವಾದ ಪದ್ಯ ಉಪಲಬ್ಧವಿಲ್ಲ
೮೬) (೮೭) (೮೮)	ಸಂಧಿ ೫ ಅಂಕ ೭-೮-೧೧ ವಿಶೇಷ ಅಂತರವಿಲ್ಲ
೮೯) ದೇವರಲಿ ....ಬಿಡಸಬೇಕ	— ಧಾರವಾಡ ಪ್ರತಿಯಲ್ಲಿ ಉಪಲಬ್ಧವಿಲ್ಲ
೯೦) ಕೆಲಬ್ಬಿಗಾಕ್ಷರ... ಸಭೆಗಾಗಿ	— ಧಾರವಾಡ ಪ್ರತಿಯಲ್ಲಿ ಉಪಲಬ್ಧವಿಲ್ಲ
೯೧)(೯೨)(೯೩)(೯೪)(೯೫)(೯೬)	— ಧಾ. ಪ್ರ. ಅಂಕ (ಸಂಧಿ ೫) ೧೫, ೧೨, ೧೮, ೧೯, ೨೪, ೨೫; ವಿಶೇಷ ಅಂತರವಿಲ್ಲ. ಧಾರವಾಡ ಪ್ರತಿ ಸಂಧಿ ೫ ಇಲ್ಲಿ ಮುಗಿದಿದೆ
೯೭) (೯೮) (೯೯) (೧೦೦) (೧೦೧) (೧೦೨) (೧೦೩)	ಸಂಧಿ ೬ ಅಂಕ ೩, ಇನ್ನುಳಿದವು (೧೦ ನೆಯದು ೨ ಸಾಲು ಮಾತ್ರ ಸದೃಶವಾಗಿ) ೫, ೬, ೭, ೯, ೨೩ ವಿಶೇಷ ಅಂತರವಿಲ್ಲ. ಆದರೆ ಮೈಸೂರ ಪ್ರತಿ ಹೆಚ್ಚು ಒಳ್ಳೆಯದು ಇದೆ. ಧಾರವಾಡ ಪ್ರತಿ ಜನಸಾಮಾನ್ಯ ಭಾಷೆಯಲ್ಲಿದ್ದು ಕೆಲವು ಕಡೆಯಲ್ಲಿ ಉತ್ತಮವಿದೆ ಉದಾ: ೬, ೯ ಪದ್ಯಗಳನ್ನು ನೋಡಿರಿ.
೧೦೪) ತಂದು ಮಾಡಿದೆನು.......... ಕಂದರ್ಪಾಸ್ತ್ರ	ಪದ್ಯ ಕಲ್ಪನೆ ೨೪-೨೫ ಪದ್ಯಗಳಲ್ಲಿ ಇದೆ. ಶಬ್ದಸಾದೃಶ್ಯವಿಲ್ಲ.

೧೦೫) ಭಾನುಮತಿ.....................
ಳಿದಳಾಕುಂತಿ — ಧಾರವಾಡ ಪ್ರತಿಯಲ್ಲಿ ಇದಕ್ಕೆ ಸರಿಯಾದ ಪದ್ಯ ಉಪಲಬ್ಧವಿಲ್ಲ

೧೦೬) ಮೌನವಲಿ........... ನಳಿನಾಕ್ಷಿ — ೨೬) ಮೈ. ಪ್ರತಿಯ ಮೊದಲನೆಯ ೩ ಸಾಲು ಸದೃಶ. ಆದರೆ ಕಡೆಯ ಮೂರು ಸಾಲು ಉಪಲಬ್ಧವಿಲ್ಲ.

೧೦೭) ಎಂದು ನಾನಾ...................
ನೋಡಿ ಗಾಂಧಾರಿ — ೨೭) ಇದರ ಕಡೆಯ ಮೂರು ಸಾಲು ಮೈ. ಪ್ರ. ೧೦೭ನೆಯ ಪದ್ಯದ ಕಡೆಯ ಮೂರು ಸಾಲುಗಳಿಗೆ ಸದೃಶ ಅವೆ

೧೦೮) (೧೦೯) (೧೧೦) — ೨೮. ೨೯, ೩೧ ವಿಶೇಷ ಅಂತರವಿಲ್ಲ ಆದರೂ ಮೈಸೂರು ಪ್ರತಿ ಉತ್ತಮ

೧೧೧) (೧೧೨) (೧೧೩) (೧೧೪) (೧೧೫) — ಧಾರವಾಡ ಪ್ರತಿಯಲ್ಲಿ ಇವುಗಳಿಗೆ ಸರಿಯಾದ ಪದ್ಯಗಳು ಉಪಲಬ್ಧವಿಲ್ಲ.

೧೧೬) (೧೧೭) (೧೧೮) (೧೧೯) (೧೨೦) — ಧಾರವಾಡ ಪ್ರತಿ ಸಂಧಿ ೭ ಅಂಕ (೩೨) (೩೩) (೩೪)(೩೫) (೩೬) ವಿಶೇಷ ಅಂತರವಿಲ್ಲ. ಧಾ. ಪ್ರ. ಸಂಧಿ ೬ ಇಲ್ಲಿಗೆ ಮುಗಿದದೆ

೧೨೧) (೧೨೨) (೧೨೩) (೧೨೪) (೧೨೫)
(೧೨೬) (೧೨೭) (೧೨೮) (೧೨೯) — ಧಾರವಾಡ ಪ್ರತಿಯಲ್ಲಿ ಇವುಗಳಿಗೆ ಸಮಾನ ಪದ್ಯಗಳು ಉಪಲಬ್ಧವಿಲ್ಲ.

೧೩೦) ಮಿಂದುನಾನಾ...................
...........ನಡೆತಂದಳಾಕುಂತಿ — ಸಂಧಿ ೭ ಪದ್ಯ ೧೪–೧೫ ಸಾಧಾರಣ ಸದೃಶವಾದವವೆ.

೧೩೧) ಇಂದುಮುಖಿ ....
............ಪೂಜಿಸಿದಳಾಕುಂತಿ — ಸಂಧಿ ೮ ಅಂಕ ೨ ಸಾಧಾರಣ ಸದೃಶವಾಗಿದೆ.

೧೩೨) ನಡೆದು ಬಂದಳು................
.............................ಕುಂತಿ — ಧಾರವಾಡ ಪ್ರತಿಯಲ್ಲಿ ಇದಕ್ಕೆ ಸಮವಾದ ಪದ್ಯ ಉಪಲಬ್ಧವಿಲ್ಲ.

೧೩೩) ಕಲ್ಪವೃಕ್ಷವ....................
............ದರ್ಶಿಸಿದಳಾಕುಂತಿ — ಸಂಧಿ ೮ ಪದ್ಯ ಅಂಕ ೩ ಸಾಧಾರಣ ಸದೃಶವಾಗಿದೆ.

೧೩೪) (೧೩೫) --- ಧಾರವಾಡ ಪ್ರತಿಯಲ್ಲಿ ಉಪಲಬ್ಧವಿಲ್ಲ.

೧೩೬) ತಿರುಗಿದಳು ....ನೇಟಿದಳು — ಸಂಧಿ ೮ ಅಂಕ ೧೦ ನೆಯ ಕಡೆಯ ಸಾಲು ಮತ್ತು ೧೧ನೆಯ ಪದ್ಯ ಸಾಧಾರಣ ಸದೃಶ ಅರ್ಥವುಳ್ಳದ್ದೂ ಅದೆ.

(೧೩೭) (೧೩೮) (೧೩೯) (೧೪೦) (೧೪೧) (೧೪೨) (೧೪೩) (೧೪೪) ಧಾರವಾಡ ಪ್ರತಿಯಲ್ಲಿ ಇವುಗಳಿಗೆ ಸಮಾನವಾದ ಪದ್ಯಗಳು ಉಪಲಬ್ಧವಿಲ್ಲ. ಮೈ. ಪ್ರತಿಯ ಸಂಭವ ಪರ್ವದ ೨೦ನೆಯ ಸಂಧಿ ಇಲ್ಲಿ ಮುಗಿಯಿತು.

ಶೋಧನ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨	೮	ನಿಮ್ಮಯ	ನಮ್ಮಯ ?
೨	೧೬	ವ್ಯಕ್ತಿಕೆ	ಮೃತ್ತಿಕೆ
೩	೧	ತನುಜ(ರ)ರು ನೀವು	ತನುಜರಿರ ನೀವ್
೩	೨	ಮುಂದ್ರಿ ಸುತಿರುತ	ಮಾದ್ರೀಸುತರು
೩	೬	ರಚಿಸಿದೈರಾವತದ	ರಚಿಸಿದರೈರಾವತದ
೩	೧೪	ಹೊನ	ಹೊನ್ನ
೪	೮	ಭಂದ	ವೃಂದ
೫	೧೬–೧೭	ಕಾಣುತ್ತ ಪಾಕಜವರುಹ ಮುಖಿ	ಕಾಣುತ್ತಲಾಪಂ | ಕರುಹ ಮುಖಿ
೬	೧೦	ನೋನುವರೆ	ನೋನುವಳೆ
೬	೨	ಮುದ್ರಿ ಸುತಿರುತ ತನ್ನಯ	ಮಾದ್ರೀಸುತ ತಮ್ಮಯ
೧೩	೩	ಕರದು	ಕರೆದು
೧೮	೫	ದೈತ್ಯನ	ದೈತ್ಯವ
೨೧	೧	ಭೂಪತಿಯ	ಭೂಪನ
೨೬	೪	ಮದ	ಮುದ
೨೪	೧೪	ಘೋಗಿಸಿದರವಸಿಯು	ಭೋಗಿಸಿದರವನಿಯ
೩೪	೬	ಸಹಸ ಫಲ	ಸಹ ಸಫಲ
೩೬	೧೮	ದೇವನಂದರು	ದೇವನಂದನರು
೩೯	೧೩	ಸಿಂದನ	ಸ್ಯಂದನ
೪೦	೬	ಮೂರಡಿಯೆದಳದ	ಮೂರಡಿಯೊಳಳಿದ
೪೬	೪	ಬಿಸಜವಳ	ಬಿಸಜದಳ
೯೬	೫	ಮುಸುಕಿದಾಭರಣ	ಮುಸಕದಾಭರಣ
೪೬	೨೦	ಭೀಷ್ಮಕ	ಭೀಷ್ಮ
೪೬	೨೩	ನಿಸ್ಸಾಳೂದ	ನಿಸ್ಸಾಳಾದ
೫೦	೨೧	ಪರುಷಧರ	ಪರಶುಧರ
೫೩	೯	ವಿನಿತು	ವಿನುತ
೫೬	೨	ಫಲ್ಲದ	ಪಲ್ಲವ
೫೯	೬	ನೇಮಿಸದ	ನೇಮಿಸಿದ

೬೨	೨	ಬಿಸರುಹಹಸಖ	ಬಿಸರೋ (?) ಹಸಖ
,,	೧೦	ತರ್ಕೈಸಿ	ತಳ್ಕೈಸಿ
೬೪	೧೦	ಮೂಡಿದವು	ಓಡಿದವು
,,	೧೮	ಸುರರದಮರಿಯರ	ಸುರೇಂದ್ರನನುರಿಯರ
೬೬	೧೧	ತಾನಿಹೆ	ತಾನಿಹ
೬೬	೨೩	ಮೆರೆದನಾದ	ಮೆರೆದನಾತ
೬೮	೨೨	ನಿದಿಷ್ಟಿರ	ಯುಧಿಷ್ಠಿರ
೭೧	೪	ಚಲುವಿಧದ	ಬಲುವಿಧದ
,,	೧೮	ದನುಜಹರಿ	ದನುಜಹರ
೭೨	೧೫	ತೊಟ್ಟನವನಲಿ	ತೊಟ್ಟ ಕಿವಿಯಲಿ
,,	೨೪	ವಿಸಮನರ್ಜುನ	ಲಸಮನರ್ಜುನ
೭೩	೧೯	ಬಂದದ್ಯೈರಾವತವು	ಬಂದುದ್ಯೈರಾವತವು
೭೮	೬	ನಮುಗೆಂದು	ತಮುಗೆಂದು
೮೦	೧೭	ಮುಗಿದುಸಮ	ಮುಗಿದುಮಿಗೆಸಮ
೮೧	೧೭	ವರಮಹಾಸಲೆ	ವರಮಹಾಸತಿ
೮೪	೬	ಸುರರು	ಸುರರ
,,	೧೦	ಸುಬಲೆಯೊ	ಸುಬಲೆಯ
೮೬	೬	ಹೂಮಳೆಯಿಂದ್ರ	ಹೂಮಳೆಯಿಂದ
೮೭	೨೩–೨೪	ಪೂರ್ವಾಸನದದಲಿರ(ದ್ದ)ಲಿ	ಪೂರ್ವಾಸನದಲಿದ್ದಲ್ಲಿ
೮೯	೫	ನೆಣಸುತ್ತ	ಸೆಣಸುತ್ತ
೯೬	೨೫	ಗಿರಜಾಂರಮಣರೊಡಗೂಡಿ	ಗಿರಿಜಾರಮಣನೊಡಗೂಡಿ
೯೭	೪	ದೊಷರಹಿತ	ದೋಷರಹಿತ
,,	೪	ಭರದಿ ನಿನ್ನಯ	ಭರದಿನೆನ್ನಯ
೯೮	೫	ವಂದೆಲೋರಣಸಿ	ಬಿಡದಂತೋರಣಸಿ
೯೯	೧	ಬಂದರುರ್ಕೈ ಕುಮಾರು	ಬಂದರೆಲ್ಲೈ ಕುಮಾರರು
,,	೯	ಪಡೆದನು	ಪಡೆದಿಯೌ
೧೦೦	೫	ಬಹುದಿಂ	ಬಾಹಳ
,,	೭	ಸೋಮನಿಕರಗ್ರಹಣ	ಸೋಮದಿನಕರಗ್ರಹಣ